ಶ್ರೀರಾಘವೇಂದ್ರತೀರ್ಥ ವಿರಚಿತ

ಸರ್ವಸಮರ್ಪಣಗದ್ಯ

(ಕನ್ನಡ ವಿವರಣಾರ್ಥಸಹಿತ)

ಕನ್ನಡ ವಿವರಣೆ ಬರೆದವರು
ನವ ವೃಂದಾವನದ
ಪಿ. ವಿಷ್ಣುತೀರ್ಥರು

ಪ್ರಕಾಶಕರು
ಆನಂದ್ ಪ್ರಿಂಟಿರ್ಸ್
25, ಗಾಂಧಿಬಜಾರ್, ಬಸವನಗುಡಿ
ಬೆಂಗಳೂರು 560 004

ಪ್ರಸ್ತಾವನೆ

ಈ ಸರ್ವಸಮರ್ಪಣಗದ್ಯ ಕ್ರಿ.ಶ. ೧೯೪೭ರಲ್ಲೇ ನನ್ನ ಕೈಗೆ ಬಂತು ; ಅದನ್ನು ಆಗ ಸ್ವ. ಆರ್ಚಕ ರಾಘವೇಂದ್ರಾಚಾರ್ಯರಿಂದ ಕೊಂಡುಕೊಂಡಿದ್ದೆ. ಅದನ್ನು ಎಷ್ಟು ಓದಿದರೂ ಅದರ ಬುಡ–ಮೇಲೆ ಯಾವುದೂ ಅರ್ಥವಾಗಿರಲಿಲ್ಲ. ಅದರ ಅರ್ಥವನ್ನು ತಿಳಿಸುವಂತೆ ಅನೇಕ ವಿದ್ವಾಂಸರನ್ನು ವಿಚಾರಿಸಿದರೂ ಯಾರೂ ಸಮರ್ಪಕವಾಗಿ ವಿವರಣೆ ಕೊಡಲಿಲ್ಲ. ಅದರಿಂದ ಆ ಗದ್ಯ ಹಾಗೆಯೇ ಸುಪ್ತವಾಗಿ ಉಳಿಯಿತ್ತು.

ಕಳೆದ ವರ್ಷ ಇದನ್ನು **'ಸಾಧನ ಚತುಷ್ಟಯ'**ದಲ್ಲಿ ಮುದ್ರಿಸಲು ಹೊರಟು ನಮ್ಮ ಮಿತ್ರರು ಈ ಗದ್ಯದ ಅಕ್ಷರಸ್ಖಾಲಿತ್ಯಗಳನ್ನು ತಿದ್ದಿಕೊಡುವಂತೆ ಹೇಳಿ ಇದರ ಮುದ್ರಿತ ಪ್ರತಿಯೊಂದನ್ನು ಕೊಟ್ಟರು. ಆಗಲೂ ನಾನು ಅಕ್ಷರ ಸ್ಖಾಲಿತ್ಯಗಳನ್ನು ಗಮನಿಸಿದೆನೇ ಹೊರತಾಗಿ ನನ್ನ ಗಮನ ಇದರ ಅರ್ಥದ ಕಡೆ ಹೋಗಲಿಲ್ಲ. ಮುದ್ರಿತವಾದ **'ಸಾಧನಚತುಷ್ಟಯ'** ತಮ್ಮ ಕೈಗೆ ಹೋದಾಗ ನಮ್ಮ ಮಿತ್ರರು ಬೊಂಬಾಯಲ್ಲಿರುವ ಶ್ರೀ ಪ್ರಭಂಜನ ಕುಲಕರ್ಣಿಗಳು ಹೋದ ವರ್ಷ ಸೆಪ್ಟೆಂಬರಿನಲ್ಲೇ ನನಗೆ ಪತ್ರ ಬರೆದು 'ಸರ್ವಸಮರ್ಪಣಗದ್ಯ'ವು (SSG ಎಂಬುದು ಅವರ ಸಂಕೇತ) ನನಗೆ ಏನೇನೂ ಅರ್ಥವಾಗಲಿಲ್ಲ. ನಿಮಗೆ ನವ ವೃಂದಾವನದ ಯತಿವರೇಣ್ಯರ ಅನುಗ್ರಹದ ಬೆಂಬಲವಿರುವುದರಿಂದ ಅರ್ಥವಾಗದೆ ಇರದು. ನನಗೆ ಇದರ ಅರ್ಥವನ್ನು ತಿಳಿಸಿಕೊಡಿ' ಎಂದು ಒಂದು ಕಡೆ ಪ್ರೋತ್ಸಾಹಿಸುತ್ತಲೇ ಪ್ರಾರ್ಥಿಸಿಕೊಂಡರು. ಅದಾದ ಕೆಲವು ತಿಂಗಳು ಕಳೆದ ಮೇಲೆ ಲಕ್ಷ್ಮೇಶ್ವರದ ವೈದ್ಯ ಶ್ರೀ ಬಾಬುರಾವ್ ಕುಲಕರ್ಣಿಗಳಿಂದ ಪಾದಯಾತ್ರಾ ಸಂಪ್ರದಾಯ ಮೂಲಕ **'ರಾಘವೇಂದ್ರಸ್ವಾಮಿಗಳ ಗದ್ಯಗಳು'** ಎಂಬ ಬಗ್ಗೆ [illegible] ಲೇಖನವನ್ನು ಬರೆದುಕೊಡಲು ಕರೆಬಂತು. ಆದರಿಂದ ಶ್ರೀ ರಾಘವೇಂದ್ರ ಪ್ರಭುಗಳವರೇ ನನ್ನನ್ನು ಈ ಗದ್ಯ ಓದಲು ಪ್ರೇರೇಪಿಸಿದಂತಾಯಿತು. ಲೇಖನ ಬರೆಯುವಾಗ ಈ ಗದ್ಯವನ್ನು ಸ್ಥೂಲವಾಗಿ ಓದಿಕೊಂಡೆನಾದರೂ ಕೂಲಂಕಷ ವಿಚಾರಕ್ಕೆ [illegible]ೀಗಿರಲಿಲ್ಲ. ಯುಗಾದಿಯಾದ ನಂತರ ಈ ಗದ್ಯವನ್ನು ಗಹನವಾಗಿ ಅಧ್ಯ[illegible]ಡುತ್ತಾ ಹೊರಟೆ. ವಿಚಾರವಾಡುತ್ತಾ-ಮಾಡುತ್ತಾ, ಆ ನವ ವೃಂ[illegible]ತಿಗಳ ಕೃಪಾವಿಶೇಷದಿಂದಲೇ ಒಂದೊಂದಾಗಿ ಅರ್ಥಗಳು ಸ್ಫುರಿಸುತ್ತಾ ಹೋದುವು. ಆದರೆ ಐದನೇ ಸಂಬೋಧನೆಯ ಅರ್ಥ ಸಂದಿಗ್ಧವಾಗಿಯೇ ಉಳಿದಿತ್ತು. ಪೂಜ್ಯಶ್ರೀ ಭಂಡಾರಕೇರಿ ಮತ್ತು ಫಲಿಮಾರು ಮಠಗಳ ಶ್ರೀ ಶ್ರೀಗಳವರನ್ನು [illegible]ಡು ಪ್ರಾರ್ಥಿಸಿದಾಗ ಅವರು ಅದರ ಅರ್ಥವನ್ನು ತಿಳಿಸಿಕೊಟ್ಟರು. ಹೀಗೆ ಸಂಪೂರ್ಣ ವಿವರಣೆ ಬಂಗಿಯಿತಾದರೂ ಅದರಲ್ಲಿ ಅನೇಕ ಲೋಪದೋಷ

ಗಳಂ ಇದ್ದೇ ಇರುವುವೆಂದು ನನಗೆ ಚೆನ್ನಾಗಿ ಗೊತ್ತು. ಆದರೆ ಈ ಪುಸ್ತಕವನ್ನು ಈ ವರ್ಷ ಆಂಗಿರಸ ಸಂವತ್ಸರದ ರಾಯರ ಆರಾಧನೆಯ ದಿನವೇ ಬಿಡುಗಡೆ ಮಾಡಬೇಕೆಂದು ನಮ್ಮೆಲ್ಲ ಮಿತ್ರರ ಆಶೆಯಿದ್ದುದರಿಂದ ಇದನ್ನು ವಿದ್ವಾಂಸರಿಗೆ ತೋರಿಸಿ ತಿದ್ದುವಷ್ಟು ವ್ಯವಧಾನವಿರಲಿಲ್ಲವಾಗಿ ಇದನ್ನು ಸದ್ಯಕ್ಕೆ ಹಾಗೆಯೇ ಮುದ್ರಣಕ್ಕೆ ಕೊಡಲಾಯಿತು.

ಬಳಿಕ, ನನಗೆ ಈ ವಿವರಣೆಯನ್ನು ಬರೆಯಲು ಪ್ರೋತ್ಸಾಹಕೊಟ್ಟ ಶ್ರೀ ಪ್ರಭಂಜನರೇ ಇದರ ಮುದ್ರಣಕ್ಕೂ ಪ್ರೋತ್ಸಾಹ ನೀಡಿದರು. ಅವರ ತಮ್ಮನ ಮಗ ಶ್ರೀವೇಣುಗೋಪಾಲ ಕುಲಕರ್ಣಿಗಳು ತಮ್ಮ ಸ್ವರ್ಗೀಯ ತಂದೆಯ ಸವಿನೆನಪಿಗಾಗಿ ಸ್ವಲ್ಪ ಹಣವನ್ನು ಕಳುಹಿಸಿಕೊಟ್ಟರು. ಆಮೇಲೆ ನಮ್ಮ ಪ್ರಿಯ ಬಂಧುವಾದ ಶ್ರೀ ಪಿ. ಆರ್. ನಾಗೇಂದ್ರಮೂರ್ತಿ ತನ್ನ ಎಪ್ಪತ್ತನೇ ವರ್ಷದ ಸಮಾರಂಭದಲ್ಲಿ ಸ್ವಲ್ಪ ಹಣವನ್ನು ದಾನವಾಗಿ ಕೊಟ್ಟರು. ಆದೇ ರೀತಿ ಈ ಮುಂದಿನ ಮಹನೀಯರೂ ಆರ್ಥಿಕ ಸಹಾಯ ನೀಡಿದರು—ಸರ್ವಶ್ರೀಗಳಾದ ಡಿ. ಎ. ಮೋಹನ್ ಮತ್ತು ಪದ್ಮಿನೀ, ಡಾಕ್ಟರ್ ಡಿ. ಎ. ಸತೀಶ್ ಮತ್ತು ಲಕ್ಷ್ಮೀ, ಗುರುರಾವ್ ಎಸ್. ಮುಂದ್ದೇಬಿಹಾಳ್ ಹಾಗೂ ಅವರ ಪುತ್ರ ಆನಂದ ತೀರ್ಥ, ಮತ್ತು ಬೆಳಗಾಂನಲ್ಲಿರುವ ಶ್ರೀ ಗುರುರಾಜ್ ಜೆ. ಬಾಡಗಂಡಿ. ಜೊತೆಗೆ ಈ ಹೊತ್ತಿಗೆಯನ್ನು ಅತ್ಯಲ್ಪ ಕಾಲಾವಧಿಯಲ್ಲೇ ಮುದ್ರಿಸಿ ಕೊಟ್ಟು ಇದನ್ನು ಆಗಸ್ಟ್ ೧೫, ೧೯೮೨ರಂದು ರಾಯರ ಆರಾಧನಾದಿನವೇ ಬಿಡುಗಡೆ ಮಾಡಲು ಅನುಕೂಲ ಮಾಡಿ ಉಪಕಾರಮಾಡಿದ ಶ್ರೀ ಶಕ್ತಿ ವಿದ್ಯುನ್ಮುದ್ರಣಾಲಯದ ಶ್ರೀ ರಾ. ವೆಂ. ಶ್ರೀ. ಯವರಿಗೂ ನಾನು ಅತ್ಯಂತ ಕೃತಜ್ಞನಾಗಿದ್ದೇನೆ. ಶ್ರೀರಾಘವೇಂದ್ರಸ್ವಾಮಿಗಳ ಪ್ರಭುವಾದ ಶ್ರೀವಾನ್ಮೂಲರಾಮದೇವರು ಈ ಮಹನೀಯರೆಲ್ಲರಿಗೂ ಆಯುರಾರೋಗ್ಯ ಭಾಗ್ಯಗಳನ್ನೂ ಜ್ಞಾನಾಭಿವೃದ್ಧಿಯನ್ನೂ ಅನುಗ್ರಹಿಸಲೆಂದು ಅವನ ಪಾದಾರವಿಂದಗಳಲ್ಲಿ ಮೊರೆಯಿಟ್ಟುಕೊಳ್ಳುತ್ತೇನೆ.

ಕಡೆಯದಾಗಿ, ಈ ಪುಸ್ತಕದಲ್ಲಿ ಅನೇಕ ದೋಷಗಳಿವೆಯೆಂದು ನನಗೇ ಗೊತ್ತು. ಆದರೆ ತನ್ನ ತಪ್ಪು ತನಗೆ ಕಾಣಿಸದಿರುವುದೂ ಸ್ವಾಭಾವಿಕವೇ. ಇದನ್ನು ಓದುವಾಗ ಇದರಲ್ಲಿರುವ ಲೋಪದೋಷಗಳನ್ನೂ ತಪ್ಪುಗಳನ್ನೂ ಗಮನಿಸಿದ ಮಹನೀಯರು ಅವುಗಳನ್ನು ನನ್ನ ಗಮನಕ್ಕೆ ತಂದು ಕೃಪೆಮಾಡಬೇಕೆಂದು ಪ್ರಾರ್ಥಿಸಿ ವಿರಮಿಸುವೆನು.

ಸಜ್ಜನ ವಿಧೇಯ
ಪಿ. ವಿಷ್ಣುತೀರ್ಥ
(ಮೈಸೂರು ವಸತಿ)

ಆಂಗಿರಸ (೧೯೧೪), ಆಷಾಢ
ಬಹುಳ ಪಂಚಮೀ,
ದಿನಾಂಕ ೨೦-೭-೧೯೭೨

ಶ್ರೀಮದ್ಧನುಮದ್ಭೀಮಮಧ್ವಾಂತರ್ಗತರಾಮಕೃಷ್ಣವೇದವ್ಯಾಸಾತ್ಮಕ
ಶ್ರೀಲಕ್ಷ್ಮೀಹಯಗ್ರೀವಾಯ ನಮಃ

ಶ್ರೀಮದ್ರಾಘವೇಂದ್ರತೀರ್ಥವಿರಚಿತಂ
ಸರ್ವಸಮರ್ಪಣಗದ್ಯಮ್

ಶ್ರೀಗುರುಭ್ಯೋ ನಮಃ ॥

೧. ಜಾಗ್ರತ್-ಸ್ವಪ್ನಸುಷುಪ್ತ್ಯಾಖ್ಯಾವಸ್ಥಾತ್ರಯನಿಯಾಮಕ-ಮದಂತರ್ಯಾಮಿ-ಮುಖ್ಯಪ್ರಾಣಾಂತರ್ಗತ-ವಿಶ್ವ-ತೈಜಸ-ಪ್ರಾಜ್ಞಾತ್ಮಕ! ೨. ಹಿಂಕಾರಾದಿ-ಷಟ್‌ಸಾಮಪ್ರತಿಪಾದ್ಯ-ಷಟ್‌ಕಾಲ-ನಿಯಾಮಕ-ಅನಿರುದ್ಧ-ಪ್ರದ್ಯುಮ್ನ-ಸಂಕರ್ಷಣ-ವಾಸುದೇವ-ವರಾಹ ನರಸಿಂಹ-ಷಣ್ಮೂರ್ತ್ಯಾತ್ಮಕ; ೩. ಸ್ವಹೃದಯಮಧ್ಯಸ್ಥಿತ-ಸುಷುಮ್ನಾನಾಡೀದಕ್ಷಿಣಪಾರ್ಶ್ವಸ್ಥಿತ-ಪಂಚಾಶತ್‌ಸಂಖ್ಯಾಕ-ಪಿಂಗಲನಾಡೀಷು, ತದುತ್ತರಪಾರ್ಶ್ವಸ್ಥಿತ-ತಾವತ್‌ಸಂಖ್ಯಾಕ-ವ್ಯಂಜನಾರ್ಣಪ್ರತಿಪಾದ್ಯ-ತಾವತ್ಸಂಖ್ಯಾಕೇಡಾನಾಡೀಷು, ತತ್ತದ್ಯೋಗ್ಯ-ತತ್ತತ್ಕಾಲಾನುಸಾರ ಪ್ರಾಪ್ತ-ತತ್ತನ್ನಾಡೀಸ್ಥಿತ-ಬೃಹತೀಛಂದಃಸಹಸ್ರಗತ-ಷಟ್-ತ್ರಿಂಶತ್ಸಹಸ್ರಹಂಸಸ್ವರಾಖ್ಯಾಕ್ಷರಪ್ರತಿಪಾದ್ಯ ; ೪. ತನ್ನಿಷ್ಠ-ತನ್ನಿಯಾಮಕ-ಪ್ರಾತರ್ಮಧ್ಯಂದಿನ ಸಾಯಮಾಖ್ಯಸವನತ್ರಯ-ತತ್ತತ್ಕಾಲೀನ-ತದಭಿಮಾನಿ ವಸುರುದ್ರಾದಿತ್ಯೋಪಾಸ್ಯ;
೫. ಪರಮಾಣುಸಂಬಂಧಿ-ತಾವತ್ಸಂಖ್ಯಾಕಾಹರ್ನಿಯಾಮಕ-ಅಹರ್ನಾಮಕ-ಮುಖ್ಯಪ್ರಾಣೋಪಾಸ್ಯ-ರಮಾ-ಯುಕ್ತ-ಪುರುಷರೂಪಾತ್ಮಕ ;
೬. ಪ್ರಾದೇಶಮಾತ್ರ-ಹೃದಯಾತ್ಮಕ-ಪ್ರಾದೇಶಪರಿಮಿತಸ್ಥಾನೇಶಾತ್ಮಕ;
೭. ದೇಹಾಂತರ್ಗತ-ದೇಹಾಂಗುಷ್ಠ ಪರಿಮಿತ-ಜೀವಾಂತರ್ಗತ-ಜೀವಾಂಗುಷ್ಠ ಪರಿಮಿತ-ಸ್ವಹೃದಯಕಮಲ-ಕರ್ಣಿಕಾಮೂಲಸ್ಥಿತ-ಮೂಲೇಶಾತ್ಮಕ ; ೮. ತಾವತ್ಪರಿಮಿತ-ಕರ್ಣಿಕಾಗ್ರಸ್ಥಿತ-ಬಿಂಬರೂಪೇ ಜೀವೇಶ !

(ಕ)ತ್ವದಧಿಷ್ಠಾನಾದಿಕಾಲತಃ ಪ್ರಾಪ್ತ–ಮದೀಯೇ ಶುಭಾಶುಭ–
ಕರ್ಮಣೋರ್ಮಧ್ಯೇ ಶುಭಕರ್ಮಾನುಸಾರತಃ ತತ್ಪ್ರೇರಿತೇನ ಮುಖ್ಯ–
ಪ್ರಾಣೇನ ತತ್ತ್ವಾಭಿಮಾನಿದೇವತಾದ್ವಾರಾನುಕಾರಿತಾವಸ್ಥಾತ್ರಯ
ನಿಯಾಮಕ–ಅನುಭವಕಾಲಘಟಿತ–ಶ್ರೀವಿಷ್ಣುಸ್ವಾತಂತ್ರ್ಯ–ಸ್ಮೃತಿಪ್ರದಾ
ನಕ, (ಖ) ನಿತ್ಯ–ನೈಮಿತ್ತಿಕ–ಕಾಮ್ಯಭೇದೇನ ತ್ರಿವಿಧವಿದ್ಯಾಶ್ರಿತ–ಸ್ವ
ವರ್ಣಾಶ್ರಮೋಚಿತ–ಸಂಕಲ್ಪಿತಭಗವತ್ಪ್ರೀಜಾತ್ಮಕ–ಕರ್ಮಜನ್ಯಫಲೇನ,
(ಗ)ಅಪರೋಕ್ಷಜ್ಞಾನಾತ್ಪೂರ್ವತಃ ಕರಣಶುದ್ಧಿದ್ವಾರಾ ತದುಪಾಸಕೇನ,
(ಘ) ತತಃ ಪರಂ ಭಗವದಿಚ್ಛಯಾ ಪ್ರಾಪ್ತ–ನಿಜಗುರೂಪದಿಷ್ಟ–ಸ್ವಬಿಂಬ
ವಿಷಯಕ–ಪೂರ್ಣಸಚ್ಚಿದಾನಂದಾತ್ಮಕ–ಚತುರ್ಗುಣಾದ್ಯುಪಾಸನ–
ಜಿಜ್ಞಾಸಾದಿಭಿಃ ಸ್ವಬಿಂಬಾಪರೋಕ್ಷಜ್ಞಾನೋತ್ಪಾದಕೇನ, (ಙ) ಮನು–
ಷ್ಯೋತ್ತಮಮಾರಭ್ಯ ಚತುರ್ಮುಖಪರ್ಯಂತಾನಾಂ ಪಂಚವಿಧ–
ಮುಕ್ತಿಯೋಗ್ಯಾನಾಂ ಚ ಸ್ವಬಿಂಬೋಪಾಸಿಭಿಃ ಲಿಂಗಾಪಗಮೇ
ಸ್ವರೂಪಾನಂದಾವಿರ್ಭಾವವೈಚಿತ್ರ್ಯಾನಂದಪ್ರದಜ್ಞಾನೇನ ತ್ವಯಿ
ಸಮರ್ಪಿತೇನ ತ್ವತ್ಪ್ರೀಜೈವಾಸ್ತು ॥

ತತ್ತಥಾ, ಮದೀಯೇ ಶುಭಾಶುಭಕರ್ಮಣೋರ್ಮಧ್ಯೇ ಅಶುಭ–
ಕರ್ಮಾನುಸಾರೇಣ ತತ್ಪ್ರೇರಿತಮುಖ್ಯಪ್ರಾಣೇನ ತತ್ತ್ವಾಭಿಮಾನ್ಯಸುರ–
ಮಾರಭ್ಯ ಕಲಿಪರ್ಯಂತಾನಾಂ ತಮೋಯೋಗ್ಯಾನಾಂ ಪಾಪಬಾಧಿಭಿಃ
ಗದಾಯುಧಪ್ರದಾನೇನ ಮಹಾತಮಸಿ ಸ್ಥಿತಾನಾಂ ದುಃಖಾನುಮಾನೇನ
ಸ್ವರೂಪಭೂತ–ದುಃಖಾತಿಶಯಪ್ರದಾತೇತಿ ಜ್ಞಾನೇನ ತ್ವಯಿ
ಸಮರ್ಪಿತೇನ ತ್ವತ್ಪ್ರೀಜೈವಾಸ್ತು ॥

ಇತಿ ಶ್ರೀಮದ್ರಾಘವೇಂದ್ರಯತಿಶಿರೋಮಣಿಭಿರ್ವಿರಚಿತಂ
ಸರ್ವಸಮರ್ಪಣಗದ್ಯಂ ಸಂಪೂರ್ಣಮ್

॥ ಶ್ರೀಕೃಷ್ಣಾರ್ಪಣಮಸ್ತು ॥

॥ ಶ್ರೀಮನ್ಮಧ್ವಾಂತರ್ಗತಲಕ್ಷ್ಮೀಹಯಗ್ರೀವಾಯ ನಮಃ ॥

ಶ್ರೀ ರಾಘವೇಂದ್ರತೀರ್ಥ ವಿರಚಿತ

ಸರ್ವಸಮರ್ಪಣಗದ್ಯ

ವಿವರಣಾರ್ಥಸಹಿತ

ಲೇಖಕನ ಮಂಗಳಾಚರಣೆ

ಲಕ್ಷ್ಮೀಪತಿಂ ಹಯಗ್ರೀವಂ ಪೂರ್ಣಬೋಧಾದಿಕಾನ್ ಗುರೂನ್ ।
ಪ್ರಣಮಾಮಿ ಮುಹುರ್ಭಕ್ತ್ಯಾ ವಿಶುದ್ಧಜ್ಞಾನಸಿದ್ಧಯೇ ॥ ೧ ॥

(ಅರ್ಥ) ಲಕ್ಷ್ಮೀಪತಿಯಾದ, ಸರ್ವವಿದ್ಯಾಧಿದೇವತೆಯಾದ ಶ್ರೀ ಹಯಗ್ರೀವ ಸ್ವಾಮಿಯನ್ನೂ, ನಮಗೆ ಆದಿಗುರುಗಳಾದ ಪೂರ್ಣಬೋಧರೆಂಬ ಶ್ರೀಮನ್ಮಧ್ವಾಚಾರ್ಯರನ್ನೂ ಆದಿಟೀಕಾಕಾರರಾದ ಶ್ರೀಪದ್ಮನಾಭತೀರ್ಥರನ್ನೂ ಟೀಕಾಚಾರ್ಯರೆಂದು ಪ್ರಸಿದ್ಧರಾದ ಶ್ರೀಮಜ್ಜಯತೀರ್ಥರನ್ನೂ, ಶ್ರೀಶ್ರೀಪಾದ ರಾಜರು ಶ್ರೀವ್ಯಾಸರಾಯರು ಶ್ರೀಮದ್ರಾಘವೇಂದ್ರತೀರ್ಥರೇ ಮೊದಲಾದ ಸಕಲಗುರುಗಳನ್ನೂ ಪರಿಶುದ್ಧವಾದ ನಿರ್ಮಲಜ್ಞಾನಸಿದ್ಧಿಗಾಗಿ ಮತ್ತೆ ಮತ್ತೆ ಆದರನೈರಂತರ್ಯಭಕ್ತಿಪೂರ್ವಕವಾಗಿ ವಂದಿಸುತ್ತೇನೆ.

ಶ್ರೀರಾಘವೇಂದ್ರತೀರ್ಥೀಯ–ಸರ್ವಸಮರ್ಪಣಾಭಿಧಮ್ ।
ಯದ್ಗದ್ಯಂ ತಸ್ಯ ಭಾವಾರ್ಥೋ ಯಥಾಮತಿ ನಿರೂಪ್ಯತೇ ॥ ೨ ॥

(ಅರ್ಥ) ಶ್ರೀಮದ್ರಾಘವೇಂದ್ರಸ್ವಾಮಿಗಳವರು ವಿರಚಿಸಿದ ಸರ್ವಸಮರ್ಪಣವೆಂಬ ಗದ್ಯದ ಭಾವಾರ್ಥವನ್ನು ನನಗೆ ತಿಳಿದ ಮಟ್ಟಿಗೆ ವಿವರಿಸುತ್ತೇನೆ.

೧. ಪೀಠಿಕೆ : ಶ್ರೀಮದ್ರಾಘವೇಂದ್ರಸ್ವಾಮಿಗಳವರ 'ಪ್ರಾತಃಸಂಕಲ್ಪ ಗದ್ಯ'ವು ಬೆಳಗ್ಗೆ ಎದ್ದ ಬಳಿಕ ಆ ದಿನದ ಸಮಸ್ತ ನಡವಳಿಕೆಗಳನ್ನೂ ಸಂಕಲ್ಪ ಮಾಡಿ ಶ್ರೀಹರಿಯಲ್ಲಿ ಹೇಗೆ ಸಮರ್ಪಿಸಬೇಕೆಂಬುದನ್ನು ತೋರಿಸಿಕೊಟ್ಟು ಮಾರ್ಗದರ್ಶನ ಮಾಡುತ್ತದೋ ಹಾಗೆಯೇ ಈ 'ಸರ್ವಸಮರ್ಪಣಗದ್ಯ'ವು ಪ್ರತಿನಿತ್ಯ ಮಲಗುವ ವೇಳೆಯಲ್ಲಿ ಆ ಇಡೀ ದಿನದಲ್ಲಿ ನಾವು ಮಾಡಿದ ಸಕಲ ಕರ್ಮಗಳನ್ನೂ ಭಗವಂತನಲ್ಲಿ ಹೇಗೆ ಸಮರ್ಪಿಸಬೇಕೆಂಬುದನ್ನು ತೋರಿಸಿಕೊಟ್ಟು

ನಾವು ಆ ಭಗವಂತನ ಅನುಗ್ರಹಕ್ಕೆ ಪಾತ್ರರಾಗಿ ಕೃತಾರ್ಥರಾಗುವ ವಿಧಾನವನ್ನು ತಿಳಿಸಿಕೊಡುತ್ತದೆ.

೨. **ಇದರ ಎರಡು ಭಾಗಗಳು :** 'ಪ್ರಾತಃಸಂಕಲ್ಪಗದ್ಯ'ವು ಹೇಗೆ ಶ್ರೀವಲ್ಲಭಾಚಾರ್ಯರಿಗೆ ಸಂಬೋಧನಾರೂಪವಾಗಿದ್ದು ಕೊನೆಯಲ್ಲಿ ಪ್ರಾರ್ಥನಾರೂಪವಾಗಿ ಮುಕ್ತಾಯವಾಗಿದೆಯೋ ಅದೇ ರೀತಿ ಈ ಗದ್ಯವೂ ಸಹ ಮೊದಲು ಭಗವತ್ಸಂಬೋಧನಾರೂಪವಾಗಿ ಆರಂಭವಾಗಿ, ಪ್ರಾರ್ಥನೆಯೊಡನೆ ಕೊನೆಗೊಂಡಿದೆ. ಅಲ್ಲದೆ ಆ ಪ್ರಾತಃಸಂಕಲ್ಪಗದ್ಯದ ಪ್ರಾರ್ಥನಾಭಾಗವೇ 'ಕರಿಷ್ಯೇ' —ನಾನು ಮಾಡುತ್ತೇನೆ 'ಕಾರಯಿಷ್ಯೇ ಚ' (ಇತರರಿಂದಲೂ) ಮಾಡಿಸುತ್ತೇನೆ ಎಂದು ಎರಡು ವಿಭಾಗವಾಗಿದೆಯೋ ಅದೇ ರೀತಿ ಈ ಗದ್ಯದ ಪ್ರಾರ್ಥನಾ ಭಾಗವೂ 'ಶುಭಕರ್ಮ ಸಮರ್ಪಣೆಯ ವಿಧಾನ'ವೆಂದೂ 'ಅಶುಭಕರ್ಮ—ಸಮರ್ಪಣೆಯ ವಿಧಾನ'ವೆಂದೂ ಎರಡು ಪ್ರಕಾರವಾಗಿದೆ. ಈಗ ಮೊದಲು ಸಂಬೋಧನ ಭಾಗದ ವಿವರಣೆಗೆ ಹೋಗೋಣ.

I. ಸಂಬೋಧನ ಭಾಗದ ವಿವರಣೆಗಳು

೩. **ಎಂಟು ಸಂಬೋಧನೆಗಳು :** ಭಗವತ್ಸಂಬೋಧನಾರೂಪವಾದ ಈ ಪೂರ್ವಾರ್ಧವು ಕೆಳಗೆ ತೋರಿಸಿದಂತೆ ಭಗವಂತನ ವಿವಿಧ ರೂಪಗಳ ಎಂಟು ಸಂಬೋಧನಗಳೇ ಆಗಿವೆ—(೧) 'ಜಾಗ್ರತ್‌ಸ್ವಪ್ನ' ಎಂದು ಆರಂಭವಾಗಿ 'ವಿಶ್ವ-ತೈಜಸ ಪ್ರಾಜ್ಞಾತ್ಮಕ' ಎಂಬುದು ಮೊದಲನೆಯ ಸಂಬೋಧನೆ.(೨) 'ಹಿಂಕಾರಾದಿ' ಎಂದು ಆರಂಭವಾಗುವ ಎರಡನೆಯ ಸಂಬೋಧನೆ 'ಷಣ್ಮೂರ್ತ್ಯಾತ್ಮಕ' ಎಂದು ಮುಗಿದಿದೆ. (೩) ಮೂರನೆಯ ಸಂಬೋಧನೆ 'ಸ್ವಹೃದಯಮಧ್ಯಸ್ಥಿತ' ಎಂದು ಪ್ರಾರಂಭವಾಗಿ 'ಸ್ವರಾಖ್ಯಾಕ್ಷರಪ್ರತಿಪಾದ್ಯ' ಎಂದು ಮುಗಿದಿದೆ. (೪) ನಾಲ್ಕನೇ ವಿಶೇಷಣವು 'ತನ್ನಿಷ್ಠ ತನ್ನಿಯಾಮಕ' ಎಂಬಲ್ಲಿಂದ 'ವಸುರುದ್ರಾದಿತ್ಯೋಪಾಸ್ಯ' ಎಂಬ ವರೆಗಿದೆ. (೫) 'ಪರಮಾಣುಸಂಬಂಧಿ' ಎಂದು ಆರಂಭವಾದ ಐದನೇ ಸಂಬೋಧನೆ 'ರಮಾಯುಕ್ತ—ಪುರುಷರೂಪಾತ್ಮಕ' ಎಂದು ಮುಗಿಯುತ್ತದೆ. (೬) 'ಪ್ರಾದೇಶಮಾತ್ರ' ಎಂಬ ಪದದಿಂದ 'ಸ್ಥಾನೇಶಾತ್ಮಕ' ಎಂಬ ಪದದ ವರೆಗೆ ಇರುವುದೇ ಆರನೇ ಸಂಬೋಧನೆ. (೭) 'ದೇಹಾಂತರ್ಗತ' ಎಂದು ಆರಂಭವಾಗುವ ಏಳನೇ ವಿಶೇಷಣ 'ಮೂಲೇಶಾತ್ಮಕ' ಎಂದು ಕೊನೆಗೊಂಡಿದೆ. (೮) ಕಡೆಯ ಸಂಬೋಧನೆ 'ತಾವತ್ಪರಿಮಿತ' ಎಂದು ಪ್ರಾರಂಭವಾಗಿ' ಬಿಂಬ ರೂಪೇ ಮೂಲೇಶ!' ಎಂದು ಮುಕ್ತಾಯವಾಗಿದೆ,ಅಲ್ಲಿಗೇ ಸಂಬೋಧನಾಭಾಗವೂ

ಮುಗಿಯುತ್ತದೆ. ಇದರ ಮುಂದಿರುವ 'ತ್ವದಧಿಷ್ಠಾನಾದಿಕಾಲತಃ' ಎಂದು ಆರಂಭವಾಗುವ ಉಳಿದ ಭಾಗವೆಲ್ಲವೂ ಪ್ರಾರ್ಥನಾಭಾಗವೇ ಆಗಿದೆ. ಈಗ ಎಂಟು ಸಂಬೋಧನೆಗಳ ಅರ್ಥವೇನೆಂದು ಕ್ರಮವಾಗಿ ವಿಚಾರ ಮಾಡುತ್ತಾ ಹೋಗೋಣ.

೪. **ಮೊದಲನೆಯ ಸಂಬೋಧನೆ :** ಪ್ರತಿಯೊಬ್ಬ ಮನುಷ್ಯನಿಗೂ ನಿತ್ಯಜೀವನದಲ್ಲಿ ಜಾಗ್ರದವಸ್ಥೆ, ಸ್ವಪ್ನಾವಸ್ಥೆ ಮತ್ತು ಸುಷುಪ್ತ್ಯವಸ್ಥೆಯೆಂದು ಮೂರು ವಿಧ ಪ್ರವೃತ್ತಿಗಳು ಇರುತ್ತವೆ. ಈ ಮೂರು ಅವಸ್ಥೆಗಳಿಗೂ ಭಗವಂತನ ಮೂರು ಭಿನ್ನ-ಭಿನ್ನ ರೂಪಗಳು ನಿಯಾಮಕವಾಗಿವೆಯೆಂದು ಮಾಂಡೂಕ್ಯೋಪನಿಷತ್ತಿನಲ್ಲಿ (೧ನೇ ಖಂಡದ ೩, ೪, ೫ನೇ ಮಂತ್ರಗಳಲ್ಲಿ) ನಿರೂಪಣೆ ಮಾಡಿದೆ. ಅಲ್ಲದೆ ಈ ವಿಚಾರವೇ ಛಾಂದೋಗ್ಯ[1] ಬೃಹದಾರಣ್ಯಕೋಪನಿಷತ್ತು[2] ಗಳಲ್ಲೂ ಬ್ರಹ್ಮಸೂತ್ರಗಳಲ್ಲೂ[3] ಬಂದಿದೆ. ಸಾಮಾನ್ಯವಾಗಿ ಹಗಲು ಹೊತ್ತಿನಲ್ಲಿ ನಾವೆಲ್ಲ ಎಚ್ಚರವಾಗಿದ್ದು ನಮ್ಮ ನಮ್ಮ ದೈನಂದಿನ ಕಾರ್ಯಗಳಲ್ಲಿ ಉದ್ಯುಕ್ತರಾಗಿರುತ್ತೇವೆಯಲ್ಲವೇ ! ಇದೇ **ಜಾಗ್ರದವಸ್ಥೆ** (ಜಾಗ್ರತ್—ಎಚ್ಚರವಾಗಿರುವ). ಈ ಜಾಗ್ರದವಸ್ಥೆಗೆ **ವಿಶ್ವ**ನಾಮಕ ಭಗವದ್ರೂಪವೇ ನಿಯಾಮಕವಾಗಿದೆ. ರಾತ್ರಿ ಮಲಗಿಕೊಂಡ ಬಳಿಕ ಆರನಿದ್ರೆಯ ಅವಸ್ಥೆಯಲ್ಲಿ ನಮಗೆ ನಾನಾ ಬಗೆಯ ಸ್ವಪ್ನಗಳು ಕಾಣಿಸುತ್ತವೆ. ಸ್ವಪ್ನಗಳನ್ನು ನೋಡುವ ಈ ಆರನಿದ್ರೆಯ ಅವಸ್ಥೆಗೆ **ಸ್ವಪ್ನಾವಸ್ಥೆ** ಎಂದು ಹೆಸರು. ಸ್ವಪ್ನಾವಸ್ಥೆಗೆ **ತೈಜಸ** ನಾಮಕ ಪರಮಾತ್ಮನೇ ನಿಯಾಮಕನೆಂದು (ಮಾಂ. ಉಪ, ೧ನೇ ಖಂಡ, ೪ನೇ ಮಂತ್ರ) ಉಪನಿಷತ್ತು ಹೇಳುತ್ತದೆ. ಇನ್ನು, ಮೈಮೇಲೆ ಎಚ್ಚರವೇ ಇಲ್ಲದಂತೆ ಮಲಗಿ ಮಾಡುವ ಗಾಢ ನಿದ್ರಾವಸ್ಥೆಗೆ **ಸುಷುಪ್ತಿ** ಎಂದು ಹೆಸರು (ಸು-ಚೆನ್ನಾಗಿ, ಸುಪ್ತಿ—ಮಲಗೋಣ ; ಸ್ವಪ್—ಮಲಗು ಧಾತುವಿನ ರೂಪವೇ ಸುಪ್ತಿ). ಈ ಸುಷುಪ್ತ್ಯವಸ್ಥೆಗೆ **ಪ್ರಾಜ್ಞ** ರೂಪಿ ಪರಮಾತ್ಮನು ನಿಯಾಮಕನೆಂದು ಅಲ್ಲೇ (೫ನೇ ಮಂತ್ರದಲ್ಲಿ) ಹೇಳಿದೆ.

೫. **ವಿಶ್ವ-ತೈಜಸ-ಪ್ರಾಜ್ಞ ರೂಪಗಳು :** ಈ ಮೂರು ಭಗವದ್ರೂಪಗಳ ಹೆಚ್ಚಿನ ವಿಚಾರವನ್ನು ಉಪನಿಷದ್ಭಾಷ್ಯದಲ್ಲಿ ಉದಹರಿಸಿದ ಪ್ರಮಾಣಗಳು

---

1. ೬ ಅಧ್ಯಾಯ, ೮ ಖಂಡ, ೧–೩ ಮಂತ್ರಗಳಲ್ಲಿ.

2. ೪ ಅಧ್ಯಾ., ೧ನೇ ಬ್ರಾ., ೧೬–೧೯ ಖಂಡ ; ೬–೮., ೩ ಬ್ರಾ., ೭, ೯, ೩೪ ಖಂ. ಇತ್ಯಾದಿ.

3. ತೃತೀಯಾಧ್ಯಾಯದ ದ್ವಿತೀಯ ಪಾದದಲ್ಲಿ ಮೊದಲ ಎಂಟು ಅಧಿಕರಣಗಳ ೧ ರಿಂದ ೧೩ ಸೂತ್ರಗಳಲ್ಲಿ.

ತಿಳಿಸುತ್ತವೆ. **ವಿಶ್ವ**ರೂಪಿ ಪರಮಾತ್ಮನು ಸಪ್ತಾಂಗನೆಂದೂ ಹತ್ತೊಂಬತ್ತು ಮುಖಗಳುಳ್ಳವನೆಂದೂ (ಮಾಂಡೂಕ್ಯ ಉಪನಿಷದ್ಭಾಷ್ಯ ೧ನೇ ಖಂಡ, ೩ನೇ ಮಂತ್ರ) ಹೇಳುತ್ತದೆ. ಹತ್ತೊಂಭತ್ತು ಮುಖಗಳಲ್ಲಿ ಮಧ್ಯದ ಮುಖವು ಆನೆಯು ಸೊಂಡಿಲಿನಂತೆ ಇದಯಲ್ಲದೆ ಅದರ ಎರಡೂ ಪಕ್ಕಗಳಲ್ಲೂ ಮನುಷ್ಯಾಕಾರದ ಒಂಬತ್ತು-ಒಂಬತ್ತು ಮುಖಗಳಿವೆ. ಹೀಗೆ ಹತ್ತೊಂಬತ್ತು ಮುಖಗಳು, ಎರಡೂ ಕಾಲುಗಳು, ನಾಲ್ಕು ಕೈಗಳು ಮತ್ತು ಆನೆಯ ಸೊಂಡಿಲಿನಂತಿರುವ ಮುಖರೂಪವಾದ ಸೊಂಡಿಲು ಒಂದು ಹೀಗೆ ಏಳು ಅಂಗಗಳಿಂದು ಭಾಷ್ಯದಿಂದ ಗೊತ್ತಾಗುತ್ತದೆ. ಈ ವಿಶ್ವನೇ ಮನುಷ್ಯರ ಮತ್ತು ಸಕಲ ಪ್ರಾಣಿಗಳ ಬಲಗಣ್ಣಿನಲ್ಲಿ ವೈಶ್ವಾನರ-ನಾಮಕನಾಗಿ ಇದ್ದು ಅವರಿಗೆ ಸಕಲವನ್ನೂ ಪ್ರತ್ಯಕ್ಷವಾಗಿ ಕಣ್ಣಿನಿಂದ ನೋಡಿ ಗ್ರಹಿಸುವ ಶಕ್ತಿಕೊಟ್ಟು ಜಾಗ್ರದವಸ್ಥೆಗೆ ನಿಯಾಮಕನಾಗಿದ್ದಾನೆ (ಮಾಂ. ಉಪ. ೨ನೇ ಖಂ. ೨ನೇ ಮಂತ್ರ). ಸ್ವಪ್ನಾವಸ್ಥೆಗೆ ಪ್ರೇರಕನಾದ **ತೈಜಸ**ನು ಮನುಷ್ಯರ ಕಂಠದಲ್ಲಿದ್ದುಕೊಂಡು ಜೀವರು ಜಾಗ್ರದವಸ್ಥೆಯಲ್ಲಿ ನೋಡಿದ ವಸ್ತುಗಳ ಸಂಸ್ಕಾರ ಬಲದಿಂದಲೇ ತನ್ನ ಶಕ್ತಿಯಿಂದ ಸ್ವಪ್ನ ಪದಾರ್ಥಗಳನ್ನು ಸೃಷ್ಟಿ ಮಾಡಿ ಜೀವರು ಆ ಪದಾರ್ಥಗಳನ್ನು ನೋಡಿ ಅನುಭವಿಸುವಂತೆ ಮಾಡುತ್ತಾನೆ, ಈ ವಿಚಾರವು ಮಾಂಡೂಕ್ಯ ಉಪನಿಷತ್ತಿನಲ್ಲಿ (೧ ಖಂ, ೪ ಮಂತ್ರ) ಮಾತ್ರ ವಲ್ಲದೆ 'ಸಂಧ್ಯೇ ಸೃಷ್ಟಿರಾಹ ಹಿ' ಎಂಬ ಬ್ರಹ್ಮಸೂತ್ರದಲ್ಲೂ (೩ ಅ, ೨ ಪಾ. ೧ ಸೂ.) ಛಾಂದೋಗ್ಯಬೃಹದಾರಣ್ಯಕೋಪನಿಷತ್ತುಗಳಲ್ಲೂ (ಹಿಂದಿನ ಪಾದ ಟಿಪ್ಪಣಿ ನೋಡಿ) ವಿಸ್ತರಿಸಲ್ಪಟ್ಟಿದೆ. ಈ ತೈಜಸನೂ ವಿಶ್ವನಂತೆಯೇ ಸಪ್ತಾಂಗನೂ ಹತ್ತೊಂಬತ್ತು ಮುಖಗಳುಳ್ಳವನೂ ಆಗಿದ್ದಾನೆ (ಮಾಂ. ೧/೪). **ಪ್ರಾಜ್ಞ**ರೂಪಿ ಪರಮಾತ್ಮನು ಹೃದಯದಲ್ಲಿದ್ದುಕೊಂಡು ಜೀವನಿಗೆ ಬಾಹ್ಯಪ್ರಪಂಚದ ಯಾವ ಅರಿವೂ ಇಲ್ಲದಂತೆ ಮಾಡಿ ಸುಖವಾಗಿ ನಿದ್ರಿಸುವಂತೆ ಮಾಡುತ್ತಾನೆ. ಈ ವಿಚಾರವೂ ಬ್ರಹ್ಮಸೂತ್ರದಲ್ಲೂ ಭಾಗವತ ಪುರಾಣದಲ್ಲೂ ಛಾಂದೋಗ್ಯ ಬೃಹದಾರಣ್ಯಕೋಪನಿಷತ್ತುಗಳಲ್ಲೂ ಬಂದಿದೆ. ಸುಷುಪ್ತ್ಯವಸ್ಥೆಯಲ್ಲಿದ್ದಾಗ ವಿಶ್ವ-ತೈಜಸ ರೂಪಗಳೆರಡೂ ಪ್ರಾಜ್ಞನಲ್ಲೇ ಸೇರಿಹೋಗುತ್ತವೆ (೧ ಖಂ. ೫ನೇ ಮಂತ್ರ). ಅಷ್ಟೇ ಅಲ್ಲ ; ವಿಶ್ವನು ಓಂಕಾರದ **ಅಕಾರ**ದಿಂದಲೂ ತೈಜಸನು **ಉಕಾರ**ದಿಂದಲೂ ಪ್ರಾಜ್ಞನು **ಮಕಾರ**ದಿಂದಲೂ ವಾಚ್ಯರಾಗಿದ್ದಾರೆ (ಮಾಂ. ಉ. ೫ನೇ ಖಂ. ೧ನೇ ಮಂತ್ರ). ಈ ಮೂರೂ ಅವಸ್ಥೆಗಳಲ್ಲೂ ಶ್ವಾಸೋಚ್ಛ್ವಾಸಗಳು ನಿರಾತಂಕವಾಗಿ ತಮಗೆ ತಾವು ಮುಖ್ಯಪ್ರಾಣನ ಪ್ರೇರಣೆಯಿಂದ ನಡೆದು ಕೊಂಡು ಹೋಗುತ್ತಿರುತ್ತವೆ. ಆ ಮುಖ್ಯಪ್ರಾಣನೂ ಈ ಭಗವದ್ರೂಪಗಳಿಗೆ

೧. ಜಾಗ್ರತ್—ಸ್ವಪ್ನಸುಷುಪ್ತ್ಯಾ ಖ್ಯಾವಸ್ಥಾತ್ರಯನಿಯಾಮಕ
—ಮದಂತರ್ಯಾಮಿ—ಮುಖ್ಯಪ್ರಾಣಾಂತರ್ಗತ—ವಿಶ್ವ—ತೈಜಸ—
ಪ್ರಾಜ್ಞಾತ್ಮಕ !

ಅಧೀನನಾಗಿದ್ದಾನೆಯಾದ್ದರಿಂದ ರಾಯರು ವಿಶ್ವ-ತೈಜಸ-ಪ್ರಾಜ್ಞಾತ್ಮಕ ಎಂಬ ಸಂಬೋಧನೆಗೆ 'ಮದಂತರ್ಯಾಮಿ ಮುಖ್ಯಪ್ರಾಣಾಂತರ್ಗತ' ಎಂಬ ವಿಶೇಷಣ ಸೇರಿಸಿದರು.

೬. **ಅನ್ವಯಾರ್ಥ : ಜಾಗ್ರತ್**-ಎಚ್ಚರಿಕೆ, ಸ್ವಪ್ನ-ಸ್ವಪ್ನ ಕಾಣುವ ಅರಿವಿದ್ದೆ. **ಸುಷುಪ್ತಿ**-ಗಾಢನಿದ್ದೆ. **ಆಖ್ಯ**-ಎಂಬ, **ಅವಸ್ಥಾತ್ರಯ**-ಮೂರು ಸ್ಥಿತಿಗಳಿಗೆ, **ನಿಯಾಮಕ**-ಪ್ರೇರಕರಾದ, ಮತ್ತು **ಮದಂತರ್ಗತ** ನನ್ನಲ್ಲಿದ್ದು ನನ್ನನ್ನು ಪ್ರೇರಣೆ ಮಾಡುತ್ತಿರುವ, **ಮುಖ್ಯಪ್ರಾಣಾಂತರ್ಗತ**-ಮುಖ್ಯ ಪ್ರಾಣದೇವರಲ್ಲೂ ನಿಯಾಮಕರಾಗಿರುವ, **ವಿಶ್ವ-ತೈಜಸ-ಪ್ರಾಜ್ಞಾತ್ಮಕ** ವಿಶ್ವತೈಜಸ ಮತ್ತು ಪ್ರಾಜ್ಞ ಎಂಬ ಮೂರು ರೂಪಗಳಿಂದ ಇರುವ ಭಗವಂತನೇ ಎಂದರೆ ನಾವು ಎಚ್ಚರವಾಗಿರಲಿ, ಸ್ವಪ್ನ ಕಾಣುತ್ತಿರಲಿ, ಗಾಢನಿದ್ದೆಯಲ್ಲಿರಲಿ ಹೀಗೆ ಇಡೀ ದಿನದಲ್ಲಿ ಯಾವ ಅವಸ್ಥೆ(ಸ್ಥಿತಿ)ಯಲ್ಲಿದ್ದರೂ ನಮಗೆ ಪ್ರೇರಕನಾಗಿರುವಂಥಾ ವಿಶ್ವ-ತೈಜಸ-ಪ್ರಾಜ್ಞ ಎಂಬ ಮೂರು ರೂಪಗಳುಳ್ಳವನಾದರೂ ಒಬ್ಬನೇ ಆದ ಹೇ ಭಗವಂತನೇ ಎಂದು ತಾತ್ಪರ್ಯ.

೭. **ಎರಡನೇ ಸಂಬೋಧನೆ :** ಛಾಂದೋಗ್ಯೋಪನಿಷತ್ತಿನ ಎರಡನೇ ಅಧ್ಯಾಯದ ಹತ್ತನೇ ಖಂಡದಲ್ಲಿ ಸಪ್ತನಾಮಗಳಿಂದ ಪ್ರತಿಪಾದ್ಯವಾದ ಪ್ರದ್ಯುಮ್ನಾದಿ ಸಪ್ತ ಭಗವದ್ರೂಪಗಳ ಮಹಿಮೆ ಪ್ರತಿಪಾದಿತವಾಗಿದೆ. ಅವುಗಳಲ್ಲಿ ಉದ್ಗೀಥ ಎಂಬ ಒಂದು ನಾಮವನ್ನು ಬಿಟ್ಟರೆ ಉಳಿದವೇ ಷಟ್‌ನಾಮಗಳಾಗುತ್ತವೆ. ಅವುಗಳಿಂದ ಪ್ರತಿಪಾದ್ಯವಾದ ಪ್ರದ್ಯುಮ್ನಾದಿ ಷಣ್ಮೂರ್ತಿರೂಪಿಯಾದ ಭಗವಂತನೇ ಎಂದು ಈ ಸಂಬೋಧನೆ ರಚನೆ ಮಾಡಿದ್ದಾರೆ. ಆದ್ದರಿಂದ ಷಟ್ನಾಮಪ್ರತಿಪಾದ್ಯವಾದ ಆ ಷಣ್ಮೂರ್ತಿಗಳ ವಿಷಯಕ್ಕೆ ನೇರವಾಗಿ ಹೋಗೋಣ.

೮. **ಷಟ್ನಾಮ ಪ್ರತಿಪಾದ್ಯ ಭಗವನ್ಮೂರ್ತಿಗಳು :** ಮೇಲೆ ಹೇಳಿದ ಉಪನಿಷದ್ಭಾಗದಲ್ಲಿ ಹತ್ತನೇ ಖಂಡದಲ್ಲಿನ ನಾಲ್ಕು ಮಂತ್ರಗಳಲ್ಲಿ ಈ ಷಟ್ ನಾಮಗಳ ವರ್ಣನೆಯೂ ತತ್ಪ್ರತಿಪಾದ್ಯ ಷಣ್ಮೂರ್ತಿಗಳ ವಿಚಾರವೂ ಅಡಕವಾಗಿವೆ. ೧. ಹಿಂಕಾರಃ, ೨. ಪ್ರಸ್ತಾವಃ, ೩. ಆದಿಃ, ೪. ಪ್ರತಿಹಾರಃ, ೫. ನಿಧನಂ ಮತ್ತು

೬. ಉಪದ್ರವಃ ಎಂಬುವೇ ಪ್ರಸಕ್ತವಾದ ಷಟ್‌ಸಾಮಂಗಳು. ಇವುಗಳ ಜೊತೆ ಉದ್ಗೀಥವೂ ಸೇರಿದರೆ ಸಪ್ತಸಾಮಂಗಳಾಗುತ್ತವೆ. ಇವುಗಳಲ್ಲಿ ಹಿ, ಳ ಮತ್ತು ಓನೇ ಸಾಮಂಗಳನ್ನು ಬಿಟ್ಟರೆ ಉಳಿಕ್ಕ ಎಲ್ಲವೂ ಮೂರು–ಮೂರು ವರ್ಣಗಳುಳ್ಳ ವಾಗಿವೆ. ನಾಲ್ಕನೆಯ 'ಪ್ರತಿಹಾರ'ದಿಂದ 'ಪ್ರ'ತೆಗೆದು ಮೂರನೆಯ 'ಆದಿ'ಯ ಜೊತೆ ಸೇರಿಸಿದರೆ ಆದಿ–ಪ್ರ, ತಿಹಾರ ಎಂದು ಎರಡೂ ಮೂರು–ಮೂರೇ ಅಕ್ಷರಗಳಾಗುತ್ತವೆ. ಇನ್ನು ಆರನೆಯ 'ಉಪದ್ರವಃ' ದಿಂದ 'ವಃ' ಎಂಬ ಒಂದ ಕ್ಷರವನ್ನು ಬೇರೆಮಾಡಿಬಿಟ್ಟರೆ ಉಪದ್ರ ಎಂದಾಗಿ ಅದೂ ಮೂರಕ್ಷರದ ಹೆಸರೇ ಆಗುತ್ತದೆ. ಇನ್ನು ಕಡೆಯಲ್ಲಿ ಉಳಿದ 'ವಃ' ಎಂಬುದು ಒಂದಕ್ಷರವಾಗಿ ಕಂಡರೂ

'ವ್ಯಂಜನ–ಸ್ವರ–ಸರ್ಗೈಸ್ತು ಸೋಽಪಿ ಜ್ಞಾನಾದಿವಾಚಕಃ'

ಎಂಬ ಭಾಷ್ಯೋದಾಹೃತ ಪ್ರಮಾಣ ವಾಕ್ಯದಂತೆ ಅದರಲ್ಲೂ ವಕಾರ, ಅಕಾರ ಮತ್ತು ವಿಸರ್ಗ ಎಂದು ಮೂರು ಅಂಗಗಳು ಇದ್ದೇ ಇವೆ. ಹೀಗೆ ಏಳು ಸಾಮ ಗಳಿಂದ ಒಟ್ಟು ಇಪ್ಪತ್ತೆರಡು ಅಕ್ಷರಗಳಿದ್ದರೂ ಅವೆಲ್ಲ ಮೂರು–ಮೂರು ಅಕ್ಷರ ಗಳ ಏಳು ಹೆಸರುಗಳಾಗಿಯೂ ಕೊನೆಗೆ ಒಂದೇ ಅಕ್ಷರವಾದರೂ ಮೂರು ಅಂಶ ಗಳುಳ್ಳ ಒಂದು ಹೆಸರೂ ಆಗುತ್ತವೆ.

ಇವುಗಳಲ್ಲಿ (ಸಪ್ತಸಾಮಂಗಳಲ್ಲಿ) ಉದ್ಗೀಥ ಎಂಬ ಸಾಮ ಅಪ್ರಸಕ್ತವಾದ್ದ ರಿಂದ ಅದನ್ನು ಬಿಟ್ಟರೆ ಆರು ಸಾಮಂಗಳಾಗುತ್ತವೆ. ಈ ಆರು ಸಾಮಂಗಳಿಂದ ಆರು ಭಗವನ್ಮೂರ್ತಿಗಳು ಪ್ರತಿಪಾದ್ಯವಾಗಿವೆ. ಹೇಗೆಂದರೆ ಹಿಂಕಾರದಿಂದ ಪ್ರದ್ಯುಮ್ನನೂ, ಪ್ರಸ್ತಾವದಿಂದ ವಾಸುದೇವನೂ, ಆದಿಯಿಂದ ವರಾಹನೂ, ಪ್ರತಿಹಾರದಿಂದ ಅನಿರುದ್ಧನೂ, ನಿಧನದಿಂದ ಸಂಕರ್ಷಣನೂ, ಉಪದ್ರವದ ಮೊದಲ ಮೂರು ಅಕ್ಷರಗಳಿಂದ ನರಸಿಂಹನೂ ವಾಚ್ಯರಾಗಿದ್ದಾರೆ. (ಹೀಗೆಯೇ ಉದ್ಗೀಥದಿಂದ ನಾರಾಯಣನನೂ, ವಃ ಎಂಬ ವಿಕಾಕ್ಷರದಿಂದ ಕ್ಷೀರಾಬ್ಧಿ ಶಾಯಿಯನೂ ವಾಚ್ಯರಾಗಿದ್ದಾರೆ.)

೯. ಭಗವನ್ಮೂರ್ತಿಗಳ ಸಮತ್ವಪ್ರತಿಪಾದನೆ: ಹೀಗೆ ಆರು (ಆಥವಾ ಪಕ್ಷಾಂತರದಲ್ಲಿ ನಾರಾಯಣನನ್ನೂ ಕ್ಷೀರಾಬ್ಧಿಶಾಯಿಯನ್ನೂ ಸೇರಿಸಿಕೊಂಡರೆ ಎಂಟು) ಮೂರ್ತಿಗಳು ಬೇರೆ ಬೇರೆಯಾಗಿ ಕಂಡರೂ ಎಲ್ಲವೂ ಮೇಲೆ ಹೇಳಿದಂತೆ ಮೂರು ಮೂರು ಅಕ್ಷರಗಳುಳ್ಳ ಹೆಸರುಗಳಾಗಿಯೇ ಆಗಿರುವುದರಿಂದ ಎಲ್ಲವೂ ಸಮವೇ ಎಂಬುದು ಒಂದು ವಿವಕ್ಷೆ. ಈ ಹೆಸರುಗಳೆಲ್ಲದರಲ್ಲೂ ಇರುವ ಮೂರು ಅಕ್ಷರಗಳು ಆಯಾ ಮೂರ್ತಿಗಳಲ್ಲಿರುವ ಜ್ಞಾನಾನಂದ–ಬಲಗಳೆಂಬ ಮೂರು ಗುಣಗಳನ್ನೇ ತೋರಿಸುವುದರಿಂದಲೂ ಈ ಎಲ್ಲ ಮೂರ್ತಿಗಳೂ ಸರಿಸಮಾನ'-

ಗಳೆಂದು ಉಪನಿಷತ್ತು (೨ ಅ. ೧೦ ಖಂ. ೧ ರಿಂದ ೪ ಮಂತ್ರಗಳು) ಹೇಳು ತ್ತದೆ. ಇದನ್ನೇ ಭಾಷ್ಯೋದಾಹೃತ ಸಾಮಸಂಹಿತಾವಚನವು

ಪ್ರದ್ಯುಮ್ನಾದಿಸ್ವರೂಪೇಣ ಸ ವಿಷ್ಣುಃ ಸಪ್ತಧಾ ಸ್ಥಿತಃ ॥
ಸಮಾನಿ ತಾನಿ ಸರ್ವಾಣಿ ಜ್ಞಾನಾನಂದಬಲೈಸ್ತಥಾ ।
ಜ್ಞಾನಾದಿತ್ರಯವಾಚೀನಿ ತ್ರ್ಯಕ್ಷರಾಣ್ಯಪಿ ಸರ್ವಶಃ ॥

ಎಂದು ಹೇಳುತ್ತದೆ. (ಅರ್ಥ) ಪ್ರದ್ಯುಮ್ನಾದಿರೂಪಗಳಿಂದ ಸಪ್ತಸಾಮಪ್ರತಿ ಪಾದ್ಯನಾದ ಶ್ರೀ ವಿಷ್ಣು ಏಳು ರೂಪಗಳಿಂದ ಇದ್ದಾನೆ. ಏಳು ರೂಪಗಳಿಂದ ಇದ್ದರೂ ಏಳೂ ಒಂದಕ್ಕೊಂದು ಸರಿಸಮಾನವೇ ಆಗಿವೆಯಲ್ಲದೆ, ಅಭಿನ್ನವೂ ಆಗಿವೆ. ಏಕೆಂದರೆ ಅವುಗಳಲ್ಲಿರುವ ಮೂರು–ಮೂರು ಅಕ್ಷರಗಳು ಜ್ಞಾನಾನಂದ ಬಲಗಳೆಂಬ ಮೂರು ಗುಣಗಳನ್ನೇ ತೋರಿಸುತ್ತವೆ. ಈ ಭಗದ್ರೂಪಗಳಿಲ್ಲವೂ ಪರಸ್ಪರ ಸಮವಾಗಿದ್ದರೂ ಇವಕ್ಕೆ ಸಮವಾದುವು ಭಗವಂತ ವಿಷ್ಣುವನ್ನು ಬಿಟ್ಟರೆ ಬೇರೆ ಯಾರೂ ಇಲ್ಲ. ಆದ್ದರಿಂದ ಅವನನ್ನು ಉಪನಿಷತ್ತು 'ಆತ್ಮ ಸಮ್ಮಿತ'ನೆಂದು ಕರೆದಿದೆ. ಆತ್ಮಸಮ್ಮಿತನೆಂದರೆ ತನಗೆ ತಾನೆ ಸಮನಾಗಿದ್ದರೂ ಬೇರೆ ಯಾರೂ ಅವನ ಸದೃಶರಲ್ಲ-ಅವನೇ ಬೇರೆ, ವಿಂಕ್ಕದ್ದೆಲ್ಲವೂ ಬೇರೆ ಎಂದರ್ಥ.

೧೦. ಷಟ್ಕಾಲನಿಯಾಮಕಗಳು : ಈ ಆರು ಭಗವದ್ರೂಪಗಳಲ್ಲಿ ಪ್ರದ್ಯುಮ್ನಾದಿ ನಾಲ್ಕು ರೂಪಗಳೇ ಎಂದರೆ ಪ್ರದ್ಯುಮ್ನ, ವಾಸುದೇವ, ವರಾಹ ಮತ್ತು ಉದ್ಗೀಥಪ್ರತಿಪಾದ್ಯ ನಾರಾಯಣ ಎಂಬ ನಾಲ್ಕು ರೂಪಗಳೇ ಒಂದೊಂದು ಮೂರು–ಮೂರಾಗಿ ಒಡೆದು ಕೇಶವ–ನಾರಾಯಣಾದಿ ದ್ವಾದಶ ಮೂರ್ತಿಗಳಾದುವೆಂದೂ ಆ ಕೇಶವಾದಿ ದ್ವಾದಶರೂಪಗಳೇ ಒಂದು ಸಂವತ್ಸರದ (ವರ್ಷದ) ಚೈತ್ರಾದಿ ಹನ್ನೆರಡು ತಿಂಗಳುಗಳಿಗೆ ನಿಯಾಮಕಗಳಾಗಿವೆಯೆಂದೂ ಭಾಷ್ಯೋದಾಹೃತವಾದ

ಪ್ರದ್ಯುಮ್ನಾದ್ಯಾಸ್ತು ಚತ್ವಾರೋ ದ್ವಿಷಣ್ಮಾಸೇಷು ಸಂಸ್ಥಿತಾಃ ।
ತ್ರಿಶಃ ತ್ರಿಶಃ ಕೇಶವಾದ್ಯಾ ವಸಂತಾದಿಷು ಪಂಚಸು ॥

ಎಂಬ ಪ್ರಮಾಣವಾಕ್ಯ ತಿಳಿಸುತ್ತದೆ. (ವಾಕ್ಯದ ಅರ್ಥ) ಪ್ರದ್ಯುಮ್ನ ಮೊದ ಲಾದ ನಾಲ್ಕು ರೂಪಗಳೇ ಮೂರು–ಮೂರಾಗಿ ಒಡೆದು ಕೇಶವಾದಿ ದ್ವಾದಶ ಮೂರ್ತಿಗಳಾದರು. ಆ ದ್ವಾದಶ ಮೂರ್ತಿಗಳೇ ಹನ್ನೆರಡು (ದ್ವಿ–ಷಟ್) ಮಾಸ ಗಳಿಗೆ ನಿಯಾಮಕರಾಗಿದ್ದಾರೆ. ಹನ್ನೆರಡು ಮಾಸಗಳಲ್ಲಿ ಮಾತ್ರವಲ್ಲ, ವಸಂತಾದಿ ಐದು ಋತುಗಳಲ್ಲೂ ನಿಯಾಮಕರಾಗಿದ್ದಾರೆ. ಯದ್ಯಪಿ ಋತುಗಳು ಆರು ಇವೆ

೨. ಹಿಂಕಾರಾದಿ — ಷಟ್‌ಸಾಮಪ್ರತಿಪಾದ್ಯ — ಷಟ್‌ಕಾಲ — ನಿಯಾಮಕ — ಅನಿರುದ್ಧ — ಪ್ರದ್ಯುಮ್ನ — ಸಂಕರ್ಷಣ — ವಾಸುದೇವ — ವರಾಹ — ನರಸಿಂಹ — ಷಣ್ಮೂರ್ತ್ಯಾತ್ಮಕ ;

ಯಾದರೂ ಹೇಮಂತ ಮತ್ತು ಶಿಶಿರ ಎರಡನ್ನೂ ಸೇರಿಸಿ ಒಂದೇ ಎಂದೂ ಪರಿಗಣನೆಮಾಡಿ ಐದು ಎಂದು ಹೇಳಲಾಗಿದೆ—'ಹೇಮಂತಶಿಶಿರಯೋರೈಕ್ಯೇನ ಪಂಚತ್ವಮ್' ಎಂದು ಭಾಷ್ಯದಲ್ಲಿ ಹೇಳಿದ್ದಾರೆ. ಆದ್ದರಿಂದ ಉಪನಿಷತ್ತು (೨ ಅ. ೫ ಖಂ) 'ಋತವಃ ಪಂಚವಿಧಗ್ ಸಾಮೋಪಾಸೀತ'—ಪಂಚಋತುಗಳಲ್ಲಿ ಪಂಚಸಾಮ ಪ್ರತಿಪಾದ್ಯವಾದ ಪಂಚಭಗವನ್ಮೂರ್ತಿಗಳು ನಿಯಾಮಕಗಳಾಗಿವೆ ಯೆಂದು ಉಪಾಸನೆ ಮಾಡಬೇಕೆಂದು ಹೇಳುತ್ತದೆ. ಹೇಗೆಂದರೆ ಹಿಂಕಾರ ಪ್ರತಿಪಾದ್ಯ ನಾದ ಪ್ರದ್ಯುಮ್ನನು ವಸಂತಋತುವಿಗೂ, ಪ್ರಸ್ತಾವ ಪ್ರತಿಪಾದ್ಯನಾದ ವಾಸು ದೇವನು ಗ್ರೀಷ್ಮಋತುವಿಗೂ, ವರ್ಷಋತುವಿಗೆ (ಮಳೆಗಾಲಕ್ಕೆ) ಉದ್ಗೀಥ ಪ್ರತಿಪಾದ್ಯನಾದ ನಾರಾಯಣನೂ, ಪ್ರತಿಹಾರ ಪ್ರತಿಪಾದ್ಯನಾದ ಅನಿರುದ್ಧನು ಶರದೃತುವಿಗೂ, ನಿಧನಪ್ರತಿಪಾದ್ಯನಾದ ಸಂಕರ್ಷಣನು ಹೇಮಂತ ಮತ್ತು ಶಿಶಿರ ಎರಡು ಋತುಗಳಿಗೂ ನಿಯಾಮಕರಾಗಿದ್ದಾರೆಂದು ಉಪನಿಷತ್ತು ಹೇಳು ತ್ತದೆ. ಈ ಪ್ರಕಾರ ಪ್ರದ್ಯುಮ್ನಾದಿ ಷಟ್‌ಸಾಮಪ್ರತಿಪಾದ್ಯಗಳಾದ ಪ್ರದ್ಯು ಮ್ನಾದಿಮೂರ್ತಿಗಳೇ ಷಟ್ಕಾಲನಿಯಾಮಕಗಳೆಂದು ಹೇಳಿದಂತಾಯಿತು. ಈಗ ಸರ್ವಸಮರ್ಪಣಗದ್ಯದಲ್ಲಿರುವ ಎರಡನೇ ಸಂಬೋಧನೆಯು ಸ್ಪಷ್ಟವಾಗಿ ತಿಳಿಯು ತ್ತದೆ, ನೋಡಿ.

೧೧. ಎರಡನೆಯ ಸಂಬೋಧನೆಯ ಅರ್ಥ ತಾತ್ಪರ್ಯಗಳು : ಇದರ ಅರ್ಥವು ಸ್ಪಷ್ಟವಾಗಿರುವುದರಿಂದ ಪುನಃ ಬಿಡಿಸಿ ಹೇಳಬೇಕಾಗಿಲ್ಲ. ಯದ್ಯಪಿ ಉಪನಿಷತ್ತಿನಲ್ಲಿ ಸಾಮಗಳ ಹೆಸರುಗಳ ಕ್ರಮದಲ್ಲೇ ಭಗವನ್ಮೂರ್ತಿ ಗಳನ್ನು ಹೇಳಿದೆಯಾದರೂ ರಾಯರು ಅನಿರುದ್ಧಾದಿ ಪಂಚರೂಪಗಳೆಂದು ಹೆಚ್ಚು ಪ್ರಸಿದ್ಧಿ ಇರುವ ಮೂರ್ತಿಗಳ ಕ್ರಮವನ್ನೇ ಪ್ರಧಾನವಾಗಿಟ್ಟುಕೊಂಡು ಅದ ರಂತೆಯೇ ಮೂರ್ತಿಗಳನ್ನು ನಿರ್ದೇಶ ಮಾಡಿದ್ದಾರೆ.

ತಾತ್ಪರ್ಯ : ೧. ಪ್ರತಿಹಾರ, ೨. ಹಿಂಕಾರ, ೩. ನಿಧನ, ೪. ಪ್ರಸ್ತಾವ. ೫. ಆದಿ ಮತ್ತು ೬. ಉಪದ್ರವ ಎಂಬುವೇ ಹಿಂಕಾರಾದಿ ಷಟ್‌ಸಾಮಗಳು. ಇವು- ಗಳು ಕ್ರಮವಾಗಿ ೧. ಅನಿರುದ್ಧ, ೨. ಪ್ರದ್ಯುಮ್ನ, ೩. ಸಂಕರ್ಷಣ. ೪. ವಾಸು ದೇವ, ೫. ವರಾಹ ಮತ್ತು ೬. ನರಸಿಂಹ ಎಂಬ ಆರು ಭಗವದ್ರೂಪಗಳನ್ನು

(ಷಣ್ಮೂರ್ತಿಗಳನ್ನು) ತಿಳಿಸಿಕೊಡುತ್ತವೆ. ಅಲ್ಲದೆ ಈ ಷಣ್ಮೂರ್ತಿಗಳೇ ಕೇಶವ ನಿಂದ ಆರಂಭಿಸಿ ದಾಮೋದರನ ವರೆಗಿನ ಹನ್ನೆರಡು ರೂಪಾಂತರಗಳಿಂದ ಚೈತ್ರಾದಿ ದ್ವಾದಶ ಮಾಸಗಳಿಗೆ ನಿಯಾಮಕಗಳಾಗಿದ್ದು ಕಾಲನಿಯಾಮಕಗಳೂ ಆಗಿವೆ. ಜೊತೆಗೆ—ಎರಡು ತಿಂಗಳಿಗೆ ಒಂದು ಋತು ಎಂಬ ಲೆಕ್ಕದಂತೆ ಷಡ್ಋತುಗಳಿಗೂ ಈ ಅನಿರುದ್ಧಾದಿ ರೂಪಗಳೇ ನಿಯಾಮಕವಾಗಿರುವುದರಿಂದ 'ಷಟ್‌ಕಾಲನಿಯಾ- ಮಕ'ಗಳೂ ಆಗಿವೆ. ಹೇಗೆಂದರೆ ಪ್ರತಿಹಾರಸಾಮ ಪ್ರತಿಪಾದ್ಯನಾದ ಅನಿರುದ್ಧನು ಶರದೃತುವಿಗೂ, ನಿಧನನಾಮಕ ಸಾಮಪ್ರತಿಪಾದ್ಯನಾದ ಪ್ರದ್ಯುಮ್ನನು ವಸಂತ ಋತುವಿಗೂ, ನಿಧನವೆಂಬ ಸಾಮದಿಂದ ಪ್ರತಿಪಾದ್ಯನಾದ ಸಂಕರ್ಷಣನು ಹೇಮಂತ ಶಿಶಿರ ಎರಡು ಋತುಗಳಿಗೂ, ಪ್ರಸ್ತಾವನಾಮಕ ಸಾಮಪ್ರತಿಪಾದ್ಯನಾದ ವಾಸು ದೇವನು ಗ್ರೀಷ್ಮಋತುವಿಗೂ ಉದ್ಗೀತಾಖ್ಯ ಸಾಮಪ್ರತಿಪಾದ್ಯನಾದ ನಾರಾ ಯಣನು ವರ್ಷಾಋತುವಿಗೂ ನಿಯಾಮಕರಾಗಿದ್ದಾರೆ. ಯದ್ಯಪಿ ಈ ಆರು ಮೂರ್ತಿಗಳು ಬೇರೆ ಬೇರೆ ಇದ್ದಂತೆ ಕಂಡರೂ ಎಲ್ಲವೂ ವಸ್ತುತಃ ಆ ಭಗವಂತ ವಿಷ್ಣುವಿನ ರೂಪಗಳೇ ಆಗಿವೆ. ಆದ್ದರಿಂದ ಎಲ್ಲಾ ರೀತಿಯಲ್ಲೂ ಅವನಿಗೆ ಸರಿ ಸಮಾನವೂ ಅವನಿಂದ ಅತ್ಯಂತ ಅಭಿನ್ನವೂ (ಅಲ್ಲದೆ ವಿಷ್ಣು ರುದ್ರ ಬ್ರಹ್ಮಾದಿ ಸಕಲ ಜಗತ್ತಿನಿಂದ ಭಿನ್ನವೂ) ಆಗಿವೆಯೆಂಬುದನ್ನು ಸ್ಪಷ್ಟಪಡಿಸುವುದಕ್ಕಾಗಿ 'ಷಣ್ಮೂರ್ತ್ಯಾತ್ಮಕ' ಎಂದು 'ಆತ್ಮಕ' ಎಂಬ ಪದಪ್ರಯೋಗ ಮಾಡಿದ್ದಾರೆ. ಇದೇ ಎರಡನೆಯ ಸಂಬೋಧನೆಯ ವಿಶಿಷ್ಟಾಂಶ.

೧೨. ಮೂರನೆಯ ಸಂಬೋಧನೆ : ಮೂರನೆಯ ಸಂಬೋಧನೆಯು ಐತರೇಯೋಪನಿಷತ್ತಿನಲ್ಲೂ ಅದರ ಭಾಷ್ಯದಲ್ಲೂ ಎರಡನೇ ಆರಣ್ಯಕದ ಎರ ಡನೇ ಅಧ್ಯಾಯದ ನಾಲ್ಕನೇ ಖಂಡದಲ್ಲಿ ಪ್ರತಿಪಾದಿತವಾಗಿರುವಂತೆ ಬೃಹತೀ ಸಹಸ್ರಪ್ರತಿಪಾದ್ಯ ಭಗವದ್ರೂಪಗಳೇ ಮನುಷ್ಯರ ದೇಹದಲ್ಲಿರುವ ನಾಡಿಗಳಲ್ಲೂ ಅಭೇದದಿಂದ ಇವೆ ಎಂಬ ಪ್ರವೇಯವನ್ನು ತಿಳಿಸಿಕೊಡುತ್ತದೆ. ಆದ್ದರಿಂದ ಬೃಹತೀಸಹಸ್ರಪ್ರತಿಪಾದ್ಯ ಭಗವದ್ರೂಪಗಳ ವಿಚಾರಕ್ಕೆ ಹೋಗೋಣ.

೧೩. ಬೃಹತೀಸಹಸ್ರದ ವಿಚಾರ : ಒಂದು ಮಂತ್ರದಲ್ಲಿ ಒಟ್ಟು ಮೂವತ್ತಾರು ಅಕ್ಷರಗಳಿದ್ದರೆ ಆ ಮಂತ್ರವು ಛಂದಶ್ಶಾಸ್ತ್ರದ ಪ್ರಕಾರ ಬೃಹತೀ ಛಂದಸ್ಸಿಗೆ ಸೇರುತ್ತದೆ. ಐತರೇಯೋಪನಿಷತ್ತಿನಲ್ಲಿ ಅನೇಕ ಕಡೆಗಳಲ್ಲಿ 'ಬೃಹತೀ ಸಹಸ್ರ' ಎಂಬ ಪ್ರಯೋಗ ಬಂದಿದ್ದರೂ ಋಗ್ವೇದ, ಯಜುರ್ವೇದಾದಿ ಯಾವ ವೇದದಲ್ಲೂ ಸಾಲಾಗಿ ಅಥವಾ ಗುಂಪುಗುಂಪಾಗಿಯಾದರೂ ಸಾವಿರ ಬೃಹತೀ ಛಂದಸ್ಸಿನ ಮಂತ್ರಗಳು ಉಪಲಬ್ಧವಾಗಿಲ್ಲ. ಇದನ್ನು ತಿಳಿದ ಉಪನಿಷತ್ತೇ ಬೃಹತೀ

ಸಹಸ್ರರ ವಿವರಣೆಯನ್ನು ಹೀಗೆ ಮಾಡುತ್ತದೆ—ಯಾವ ಯಾವುದಾದರೂ ಛಂದಸ್ಸಿನ ಜೋಡಣೆಯಿಂದಲೇ ಆಗಲಿ ಒಟ್ಟು ಮೂವತ್ತಾರು ಅಕ್ಷರಗಳು ಸೇರಿದರೆ ಆದು ಬೃಹತೀ ಛಂದಸ್ಸಾಗುತ್ತದೆ. ಇಂಥಾ ಸಾವಿರ ಬೃಹತೀ ಛಂದಸ್ಸುಗಳಿಗೇ—ಆದು ಹೇಗಾದರೂ ಸೇರಿರಲಿ, ಯಾವ ಯಾವ ಛಂದಸ್ಸುಗಳೇ ಸೇರಿರಲಿ, ಆದು ಮುಖ್ಯವಲ್ಲ—ಬೃಹತೀಸಹಸ್ರವೆಂದು ಹೆಸರು. ಒಂದು ಬೃಹತೀ ಛಂದಸ್ಸಿನಲ್ಲಿ ಮೂವತ್ತಾರು ಅಕ್ಷರಗಳಿರುವುದರಿಂದ ಸಾವಿರ ಬೃಹತಿಗಳಲ್ಲಿ (ಬೃಹತೀಸಹಸ್ರದಲ್ಲಿ) ಒಟ್ಟು ಮೂವತ್ತಾರು ಸಾವಿರ ವರ್ಣಗಳು (ಅಕ್ಷರಗಳು) ಇರುತ್ತವೆಯೆಂದು ಹೇಳಿದಂತಾಯಿತು.

೧೪. ಸ್ವರವ್ಯಂಜನಗಳ ಭೇದ: ವರ್ಣಗಳಲ್ಲಿ ಸ್ವರಗಳೆಂದೂ ವ್ಯಂಜನಗಳೆಂದೂ ಎರಡು ಭೇದವಷ್ಟೆ. ವ್ಯಂಜನಗಳೊಡನೆ ಸಾಮಾನ್ಯವಾಗಿ ಸ್ವರ ಸೇರಿಕೊಂಡೇ ಇರುತ್ತವೆ. (ಮಾಧವ ಎಂಬಲ್ಲಿ ಮ, ಧ, ವ. ಎಂಬ ಮೂರು ವ್ಯಂಜನಗಳೂ, ಒಂದು 'ಅ' ಕಾರ, ಎರಡು ಆಕಾರ ಎಂದು ಮೂರು ಸ್ವರಗಳೂ ಸೇರಿಕೊಂಡಿವೆ. ಅಗ್ನಿ, ಇಂದ್ರ ಎಂಬಲ್ಲಿ ಪ್ರಾರಂಭದ ಆಕಾರ ಇಕಾರಗಳು ಸ್ವರಗಳಾದ್ದರಿಂದ ಅವುಗಳೊಡನೆ ವ್ಯಂಜನಗಳು ಸೇರಿಲ್ಲ. ಆದರೆ 'ಗ್ನಿ' ಎಂಬಲ್ಲಿ ಗ–ನ ಇ ಎಂಬ ಮೂರು ವರ್ಣಗಳೂ, ಇಂದ್ರ ಎಂಬಲ್ಲಿ ಇ ಮುಂದೆ ನಕಾರವೂ (ಅನುಸ್ವಾರವೂ) ದ್ರ ಎಂಬಲ್ಲಿ ದ, ರ, ಅ ಎಂಬ ಮೂರು ವರ್ಣಗಳೂ ಇವೆ.) ಹೀಗೆ ಬೃಹತೀಸಹಸ್ರದ ಮೂವತ್ತಾರು ಸಾವಿರ ಅಕ್ಷರಗಳಲ್ಲಿ ಮೂವತ್ತಾರು ಸಾವಿರ ಸ್ವರಗಳೂ ಮೂವತ್ತಾರು ಸಾವಿರ ವ್ಯಂಜನಗಳೂ ಇವೆಯೆಂದು ಸ್ಥೂಲವಾಗಿ ಹೇಳಿದಂತಾಯಿತು. ಬೃಹತೀಸಹಸ್ರದ ಸ್ವರಗಳಲ್ಲೇ ಬೇರೆ ಬೇರೆ ಭಗವದ್ರೂಪಗಳಿವೆಯೆಂದೂ ವ್ಯಂಜನಗಳಲ್ಲೇ ಬೇರೆ ಭಿನ್ನ ಭಗವದ್ರೂಪಗಳಿವೆಯೆಂದೂ ಐತರೇಯೋಪನಿಷತ್ತು ಹೇಳುತ್ತದೆ. ಆದರಂತೆ ಬೃಹತೀಸಹಸ್ರದಲ್ಲಿರುವ ವ್ಯಂಜನಗಳಲ್ಲೂ ಸ್ವರಗಳಲ್ಲೂ ಮೂವತ್ತಾರು ಸಾವಿರ–ಮೂವತ್ತಾರು ಸಾವಿರ ವಿಷ್ಣುರೂಪಗಳು ಪ್ರತಿಪಾದ್ಯಗಳಾಗಿ ಸನ್ನಿಹಿತವಾಗಿರುತ್ತವೆ. ಆದ್ದರಿಂದಲೇ ಬೃಹತೀಸಹಸ್ರಕ್ಕೆ ವಿಶೇಷ ಮಹತ್ವ ಇದೆ ಎಂದು ಉಪನಿಷತ್ತು ಹೇಳುತ್ತದೆ. ಅಂತೂ ಬೃಹತೀಸಹಸ್ರದ ಮೂವತ್ತಾರು ಸಾವಿರ ಅಕ್ಷರಗಳಲ್ಲಿ ವ್ಯಂಜನ ಪ್ರತಿಪಾದ್ಯ ವಿಷ್ಣುರೂಪಗಳೂ ಸ್ವರಪ್ರತಿಪಾದ್ಯರೂಪಗಳೂ ಸೇರಿ ಒಟ್ಟು ಎಪ್ಪತ್ತೆರಡು ಸಾವಿರ ಭಗವದ್ರೂಪಗಳು ಇರುತ್ತವೆಯೆಂದು ಹೇಳಿದಂತಾಯಿತು.

೧೫. ನೂರೊಂದು ನಾಡಿಗಳ ವಿಚಾರ: ಕಠೋಪನಿಷತ್ತಿನಲ್ಲಿ (೨ನೇ ಅಧ್ಯಾಯ. ೩ನೇ ವಲ್ಲಿ, ೬ ನೇ ಖಂಡ) 'ಶತಂ ಚೈಕಾ ಚ ಹೃದಯಸ್ಯ

ನಾಡ್ಯಃ' ಎಂದು ಹೇಳಿದೆ. ಇದರಿಂದ ಹೃದಯಕ್ಕೆ ಹೊಂದಿಕೊಂಡಿರುವ ನಾಡಿಗಳು ನೂರೊಂದು ಎಂದು ಗೊತ್ತಾಗುತ್ತವೆ. ಇವುಗಳಲ್ಲಿ 'ಶತಂ' ಎಂಬುದು ಒಂದು ಗುಂಪೆಂದೂ, 'ಏಕಾ' ಒಂದು ಎಂಬುದೇ ಬೇರೆ ಎಂಬುದೂ ಉಪನಿಷತ್ತಿನ ಹೇಳಿಕೆಯಿಂದಲೇ ಸ್ಪಷ್ಟವಾಗಿ ಅರ್ಥವಾಗುತ್ತದೆ. ಇನ್ನು ತಂತ್ರಸಾರದಲ್ಲಿ (೪ ಆಧ್ಯಾಯ, ೧೬೧ ಶ್ಲೋಕ)

ಮೂಲಾಧಾರಂ ಸಮಾರಭ್ಯ ತ್ವಾಮೂರ್ಧಾನಮೃಜು ಸ್ಥಿತಾ ।
ಮಧ್ಯೇ ಸುಷುಮ್ನಾ ವಿಜ್ಞೇಯಾ. . .

ಎಂದು ಹೇಳಿದಂತೆ ದೇಹದ ಮಧ್ಯದಲ್ಲಿ ಒಂದು ನಾಡಿಯು 'ಮೂಲಾಧಾರಂ' ಎಂದರೆ ಮೂತ್ರವಿಸರ್ಜನೆ ಮಾಡುವ ಸ್ಥಳದಿಂದ ಆರಂಭಿಸಿ (ಸಮಾರಭ್ಯ ತು) (ಆ ಮೂರ್ಧಾನಂ) ನಡುನೆತ್ತಿಯರ ವರೆಗೆ (ಋಜು) ನೆಟ್ಟಗೆ ಅಥವಾ ನೇರವಾಗಿ ಹೃದಯದ ಮೂಲಕವಾಗಿ, (ಸ್ಥಿತಾ) ಹಬ್ಬಿಕೊಂಡು ನಿಂತಿದೆ. ಇದಕ್ಕೇ **ಸುಷುಮ್ನಾ ನಾಡಿ** ಎಂದು ಹೆಸರೆಂದು ಹೇಳಿದೆ. ಇದೇ ಕಠೋಪನಿಷತ್ತಿನಲ್ಲಿ ಉಕ್ತವಾದ 'ಏಕಾ'ನಾಡೀ. ಈ ಸುಷುಮ್ನಾ ನಾಡಿಯು ಬಲಕ್ಕೂ ಎಡಕ್ಕೂ ಐವತ್ತು–ಐವತ್ತು ನಾಡಿಗಳು ಕವಲೊಡೆದು ಹರಡಿಕೊಂಡಿವೆ. ಬಲಭಾಗದಲ್ಲಿರುವ ಐವತ್ತು ನಾಡಿಗಳಿಗೆ **ಪಿಂಗಲನಾಡಿ**ಗಳೆಂದು ಹೆಸರಾದರೆ ಎಡಗಡೆ ಇರುವ ಐವತ್ತು ನಾಡಿಗಳಿಗೆ **ಇಡಾನಾಡಿ**ಗಳೆಂದು ಹೆಸರು. ಇದನ್ನೇ ರಾಘವೇಂದ್ರ ಸ್ವಾಮಿಗಳವರು ಸರ್ವಸಮರ್ಪಣಗದ್ಯದಲ್ಲಿ ಹೀಗೆ ಉಲ್ಲೇಖಮಾಡಿದ್ದಾರೆ—(ಕ) ಸ್ವಹೃದಯಮಧ್ಯಸ್ಥಿತ – ಸುಷುಮ್ನಾನಾಡೀ – ದಕ್ಷಿಣಪಾರ್ಶ್ವಸ್ಥಿತ – ಪಂಚಾಶತ್ ಸಂಖ್ಯಾಕ–ಪಿಂಗಲನಾಡೀಷು (ಖ) ತದುತ್ತರಪಾರ್ಶ್ವಸ್ಥಿತ....ತಾವತ್‌ಸಂಖ್ಯಾಕ ಇಡಾನಾಡೀಷು' (ಕಠಿನ ಶಬ್ದಾರ್ಥ–)ಸ್ವ–ತನ್ನ, ದಕ್ಷಿಣ–ಪಾರ್ಶ್ವ–ಬಲಭಾಗದಲ್ಲಿ, ಸ್ಥಿತ–ಇರುವ, ಪಂಚಾಶತ್–ಐವತ್ತು, ಸಂಖ್ಯಾಕ–ಸಂಖ್ಯೆಯುಳ್ಳ. ತದುತ್ತರ ಪಾರ್ಶ್ವ ಎಂದರೆ ಹೃದಯದ ಮಧ್ಯೆ ಹಾದುಹೋಗಿರುವ ಸುಷುಮ್ನಾನಾಡಿಯು ಎಡಭಾಗದಲ್ಲಿ. ತಾವತ್–ಸಂಖ್ಯಾಕ ಎಂದರೆ ಅಷ್ಟೇ ಸಂಖ್ಯೆ ಇರುವ ಎಂದರೆ ಐವತ್ತೇ ಆಗಿರುವ ಎಂದರ್ಥ–ಹೀಗೆ ಪಿಂಗಲ ನಾಡಿಗಳು ಐವತ್ತು ಮತ್ತು ಇಡಾ ನಾಡಿಗಳು ಐವತ್ತು, ಮತ್ತು ಮಧ್ಯದಲ್ಲಿರುವ ಸುಷುಮ್ನಾನಾಡಿ ಸೇರಿ ಒಟ್ಟು ನೂರೊಂದು ನಾಡಿಗಳಾದುವು.

(ದೇವರ ಪೂಜೆಮಾಡುವಾಗ ಕಲಶಪೂಜೆಯಲ್ಲಿ 'ಅಜಾದಿ ಶತಕಲಾಸಹಿತ' ಭಗವನ್ಮೂರ್ತಿಯನ್ನು ಕಲಶಮಧ್ಯದಲ್ಲಿ ಸೂರ್ಯಮಂಡಲದಿಂದ ಆವಾಹಿಸಬೇಕು ಎಂದು ಹೇಳಿದ್ದನ್ನು ನೆನಪುಮಾಡಿ ಸಂಕರ್ಷಣ ಒಡೆಯರು ಹರಿಕಥಾಮೃತ

ಸಾರದ ಟೀಕೆಯಲ್ಲಿ ಒಂದು ಕಡೆ 'ನಮ್ಮ ದೇಹದಲ್ಲಿರುವ ನೂರೊಂದು ಮುಖ್ಯ ನಾಡಿಗಳಲ್ಲಿರುವ ಭಗವದ್ರೂಪಗಳಿಗೂ ಈ ಅಜಾದಿರೂಪಗಳಿಗೂ ಐಕ್ಯಚಿಂತನೆ ಮಾಡಬೇಕೆಂದು ಹೇಳಿದ್ದಾರೆ).

೧೬- ಎಪ್ಪತ್ತೆರಡು ಸಾವಿರ ನಾಡಿಗಳ ವಿವರ : ಹೃದಯಕ್ಕೆ ಎಡ ಬಲಭಾಗದಲ್ಲಿರುವ ಇಡಾ-ಪಿಂಗಲಾ ಎಂಬ ಮೇಲೆ ಹೇಳಿದ ಐವತ್ತೂ-ಐವತ್ತೂ ನಾಡಿಗಳಿಂದಲೇ ಕವಲುಕವಲಾಗಿ ಒಡೆದು ದೇಹದ ಎರಡೂ ಪಕ್ಕಗಳಲ್ಲೂ ಮೂವತ್ತಾರು-ಮೂವತ್ತಾರು ಸಾವಿರ ನಾಡಿಗಳು ಎಲ್ಲಾ ಅಂಗಗಳಲ್ಲೂ ಹಬ್ಬಿಕೊಂಡಿವೆ. ಹೀಗೆ ದೇಹದಲ್ಲಿ ಎಡಗಡೆ ಮೂವತ್ತಾರು ಸಾವಿರನಾಡಿಗಳೂ ಬಲಗಡೆ ಮೂವತ್ತಾರು ಸಾವಿರ ನಾಡಿಗಳೂ ಇದ್ದು ಒಟ್ಟು ಎಪ್ಪತ್ತೆರಡು ಸಾವಿರ ನಾಡಿಗಳು ಇರುತ್ತವೆಯೆಂದು ಶಾಸ್ತ್ರದಲ್ಲಿ ಹೇಳಿದೆ.

೧೭. ನಾಡಿಗಳಲ್ಲಿರುವ ಭಗವದ್ರೂಪಗಳು : ಬೃಹತೀಸಹಸ್ರದ ಮೂವತ್ತಾರು ಸಾವಿರ ಸ್ವರಗಳಲ್ಲಿರುವ ಮೂವತ್ತಾರು ಸಾವಿರ ವಿಷ್ಣುವಿನ ರೂಪಗಳೇ ಬಲಭಾಗದ ಮೂವತ್ತಾರು ಸಾವಿರ ನಾಡಿಗಳಲ್ಲಿರುತ್ತವೆಯೆಂದೂ ಬೃಹತೀ ಸಹಸ್ರದ ಮೂವತ್ತಾರು ಸಾವಿರ ವ್ಯಂಜನಗಳಲ್ಲಿರುವ ಅಷ್ಟೇ ಸಂಖ್ಯೆಯ ವಿಷ್ಣು ರೂಪಗಳೇ ಎಡಭಾಗದಲ್ಲಿರುವ ಮೂವತ್ತಾರು ಸಾವಿರ ನಾಡಿಗಳಲ್ಲೂ ಇರುತ್ತವೆಯೆಂದೂ ಅಲ್ಲೇ ಏತರೇಯೋಪನಿಷತ್ತಿನಲ್ಲೇ ಹೇಳಿದೆ. ಅಂತೂ ಒಟ್ಟಿನಲ್ಲಿ ಬೃಹತೀಸಹಸ್ರದ ಎಪ್ಪತ್ತೆರಡೂ ಸಾವಿರ ಸ್ವರ-ವ್ಯಂಜನಿಗಳಲ್ಲಿರುವ ಎಪ್ಪತ್ತೆರಡೂ ಸಾವಿರ ಭಗವದ್ರೂಪಗಳೇ ಮನುಷ್ಯದೇಹದ ಎಡ-ಬಲ ಪಕ್ಕಗಳಲ್ಲಿರುವ ಎಪ್ಪತ್ತೆರಡೂ ಸಾವಿರ ನಾಡಿಗಳಲ್ಲೂ ಇರುತ್ತವೆಯೆಂದೂ ಹೇಳಿದಂತಾಯಿತು.

೧೮. ಮನುಷ್ಯನ ಆಯುಸ್ಸಿನ ದಿನಗಳ ಸಂಖ್ಯೆ : ಮನುಷ್ಯನ ಪೂರ್ಣ ಆಯುಸ್ಸು ಸಾಮಾನ್ಯವಾಗಿ ನೂರು ವರ್ಷಗಳೆಂಬುದು 'ಶತಮಾನಂ ಭವತಿ ಶತಾಯುಃ ಪುರುಷಃ' ಎಂಬ ಶ್ರುತಿವಾಕ್ಯದಿಂದಲೇ ಗೊತ್ತಾಗುತ್ತದೆ. ಒಂದು ವರ್ಷದಲ್ಲಿ ಹನ್ನೆರಡು ತಿಂಗಳುಗಳಿರುವುದರಿಂದಲೂ ಒಂದು ತಿಂಗಳಿಗೆ ಮೂವತ್ತು ದಿನಗಳೆಂದು ನಿಗದಿಯಾಗಿರುವುದರಿಂದ ಒಂದು ವರ್ಷದಲ್ಲಿ ಮುನ್ನೂರ ಆರುವತ್ತು ದಿನಗಳಿರುವುದೆಂದು ಸ್ಪಷ್ಟವಾಗುತ್ತದೆ. ಒಂದು ವರ್ಷದಲ್ಲಿ ೩೬೦ ದಿವಸಗಳಿರುವುದರಿಂದ ಮನುಷ್ಯನ ಆಯುರ್ಮಾನವಾದ ನೂರು ವರ್ಷಗಳಲ್ಲಿ ಮೂವತ್ತಾರು ಸಾವಿರ(೩೬೦ × ೧೦೦ = ೩೬,೦೦೦)ದಿವಸಗಳು ಇರುವುವೆಂದೂ ಸ್ಪಷ್ಟವಾಗುತ್ತದೆ. ಒಂದು ದಿವಸದಲ್ಲಿಯೇ ಹಗಲು-ರಾತ್ರಿಗಳೆಂದು (ಅಹೋರಾತ್ರಿಗಳೆಂದು) ಎರಡು ಭಾಗವಿರುವುದರಿಂದ ನೂರು ವರ್ಷಗಳ ಆಯುಸ್ಸಿನಲ್ಲಿ ಮೂವತ್ತಾರು ಸಾವಿರ ಹಗಲುಗಳೂ ಅಷ್ಟೇ ರಾತ್ರಿಗಳೂ ಇರುತ್ತವೆ. ಈ ೩೬,೦೦೦ ಹಗಲುಗಳಿಗೆ ಬೃಹತೀಸಹಸ್ರದ ಸ್ವರಗಳಲ್ಲಿರುವ ಅಷ್ಟೇ ಭಗವದ್ರೂಪಗಳೂ, ರಾತ್ರಿಗಳಿಗೆ ವ್ಯಂಜನಗಳಲ್ಲಿರುವ (೩೬,೦೦೦) ಭಗವದ್ರೂಪಗಳೂ ನಿಯಾಮಕಗಳಾಗಿವೆ. ಹೀಗೆ ಬೃಹತೀಸಹಸ್ರದ-ಸ್ವರಗಳಲ್ಲಿರುವ ವಿಷ್ಣುರೂಪಗಳೇ ದೇಹದ ಬಲಭಾಗದ ೩೬,೦೦೦ ನಾಡಿಗಳಲ್ಲೂ ಅಲ್ಲದೆ ಆಯುಸ್ಸಿನ ನೂರು ವರ್ಷಗಳಲ್ಲಿರುವ ೩೬,೦೦೦ ಹಗಲುಗಳಲ್ಲೂ ಸನ್ನಿಹಿತರಾಗಿರುತ್ತಾರೆ. ಅದೇ ರೀತಿ ಬೃಹತೀಸಹಸ್ರದ ೩೬,೦೦೦ ವ್ಯಂಜನಗಳಲ್ಲಿರುವ ಅಷ್ಟೇ ಸಂಖ್ಯೆಯ ಭಗವದ್ರೂಪಗಳೇ ದೇಹದ ಇಡಾ ಎಂಬ ಎಡ ಭಾಗದ ೩೬,೦೦೦ ನಾಡಿಗಳಲ್ಲೂ ಅಲ್ಲದೆ ಆಯುರ್ವರ್ಮಾನದ ೩೬,೦೦೦ ರಾತ್ರಿಗಳಲ್ಲೂ ಇರುತ್ತವೆಯೆಂದೂ ಐತರೇಯೋಪನಿಷತ್ತಿನ ಆ ಭಾಗ ಹೇಳುತ್ತದೆ. ಈ ವಿಚಾರವನ್ನೇ ಆಳವಡಿಸಿಕೊಂಡು ಶ್ರೀರಾಯರು ಮೂರನೇ ಸಂಬೋಧನೆ ರಚಿಸಿದ್ದಾರೆ. ಆದ್ದರಿಂದ ಈಗ ಮೂರನೆಯ ಸಂಬೋಧನೆಯ ಅರ್ಥಕ್ಕೆ ಹೋಗೋಣ.

೧೯. ಮೂರನೆಯ ಸಂಬೋಧನೆಯ ಅರ್ಥ : ಸ್ವಹೃದಯಮಧ್ಯಸ್ಥಿತ—ತನ್ನ (ನನ್ನ) ಹೃದಯದ ಮಧ್ಯದಲ್ಲಿ ಹಾದು ಹೋಗಿರುವ, ಸುಷುಮ್ನಾನಾಡೀ—ಸುಷುಮ್ನಾ ಎಂಬ ಪ್ರಧಾನನಾಡಿಯು, ದಕ್ಷಿಣಪಾರ್ಶ್ವಸ್ಥಿತ—ಬಲಭಾಗದಲ್ಲಿರುವ, ಪಂಚಾಶತ್‌ಸಂಖ್ಯಾಕ-ಪಿಂಗಲನಾಡೀಷು-ಐವತ್ತು ಸಂಖ್ಯೆಯುಳ್ಳ ಪಿಂಗಳನಾಡಿಗಳಲ್ಲಿ (ಆಂತರ್ಭೂತವಾಗುವ ಬಲಭಾಗದ ಮೂವತ್ತಾರು ಸಾವಿರ ನಾಡಿಗಳಲ್ಲಿಯೂ), ತದುತ್ತರಪಾರ್ಶ್ವಸ್ಥಿತ—ಆ ಸುಷುಮ್ನಾನಾಡಿಗೆ ಉತ್ತರ (ಎಡ) ಭಾಗದಲ್ಲಿರುವ, ತಾವತ್‌ಸಂಖ್ಯಾಕ-ಅಷ್ಟೇ (ಅಂದರೆ ಐವತ್ತೇ) ಸಂಖ್ಯೆಯುಳ್ಳ, ವ್ಯಂಜನಾರ್ಣಪ್ರತಿಪಾದ್ಯ-ಬೃಹತೀ ಸಹಸ್ರದ ೩೬,೦೦೦ ವ್ಯಂಜನಾಕ್ಷರಗಳಿಂದ ಪ್ರತಿಪಾದ್ಯವಾದ, ತಾವತ್‌ಸಂಖ್ಯಾಕ-ಅಷ್ಟೇ ಎಂದರೆ ಐವತ್ತು (ಅಥವಾ

೩. ಸ್ವಹೃದಯಮಧ್ಯಸ್ಥಿತ—ಸುಷುಮ್ನಾನಾಡೀ ದಕ್ಷಿಣಪಾರ್ಶ್ವಸ್ಥಿತ—ಪಂಚಾಶತ್‌ಸಂಖ್ಯಾಕ—ಪಿಂಗಲನಾಡೀಷು, ತದುತ್ತರ ಪಾರ್ಶ್ವಸ್ಥಿತ—ತಾವತ್ ಸಂಖ್ಯಾಕ—ವ್ಯಂಜನಾರ್ಣಪ್ರತಿಪಾದ್ಯ—ತಾವತ್ಸಂಖ್ಯಾಕೇಡಾನಾಡೀಷು, ತತ್ತದ್ಯೋಗ್ಯ—ತತ್ತತ್ಕಾಲಾನುಸಾರ ಪ್ರಾಪ್ತ—ತತ್ತನ್ನಾಡೀಸ್ಥಿತ—ಬೃಹತೀಛಂದಸ್ಯುಕ್‌ಸಹಸ್ರಗತ — ಷಟ್‌ತ್ರಿಂಶತ್ಸಹಸ್ರ— ಹಂಸ ಸ್ವರಾಖ್ಯಾಕ್ಷರಪ್ರತಿಪಾದ್ಯ ;

೩೬.೦೦೦) ಸಂಖ್ಯೆಯುಳ್ಳ, ಇಡಾನಾಡೀಪರು–ಐವತ್ತು ಇಡಾನಾಡಿಗಳಲ್ಲೂ ಅದರ ವಿಸ್ತಾರವಾದ ಎಡಭಾಗದ ೩೬,೦೦೦ ನಾಡಿಗಳಲ್ಲೂ, ತತ್ತದ್ಯೋಗ್ಯ–ಅವು–ಅವುಗಳಿಗೆ ಯೋಗ್ಯವಾದ (ಅಂದರೆ ಬಲಭಾಗದಲ್ಲಿ ಸ್ವರಗಳಲ್ಲಿರುವ ಭಗವನ್ಮೂರ್ತಿಗಳೂ ಎಡಭಾಗದಲ್ಲಿ ವ್ಯಂಜನಗಳಲ್ಲಿ ಸನ್ನಿಹಿತವಾದ ಭಗವನ್ಮೂರ್ತಿಗಳೂ ಎಂದರ್ಥ), ತತ್ತತ್ಕಾಲಾನುಸಾರಪ್ರಾಪ್ತ–ಆಯಾ–ವಯಸ್ಸಿಗೆ–ಹತ್ತನೇ ಇಪ್ಪತ್ತನೇ ಎಂಬತ್ತನೇ ವಯಸ್ಸಿಗೆ ಅನುಗುಣವಾಗಿ ಬರುವ, ತತ್ತನ್ನಾಡೀಸ್ಥಿತ–ಆಯಾ ಅಂದರೆ ಬಲಭಾಗದ ಆಥವಾ ಎಡಭಾಗದ ನಾಡಿಗಳಲ್ಲಿರುವ, ಬೃಹತೀಛಂದಃಸಹಸ್ರಗತ–ಬೃಹತೀಸಹಸ್ರದ ವರ್ಣಗಳಲ್ಲಿರುವ, ಷಟ್‌ತ್ರಿಂಶತ್ ಸಹಸ್ರ–ಹಂಸ–ಸ್ವರಾಖ್ಯ–ಮೂವತ್ತಾರು ಸಾವಿರ (ಹಂಸ) ವ್ಯಂಜನ ವರ್ಣಗಳಲ್ಲೂ, ಮೂವತ್ತಾರು ಸಾವಿರ ಸ್ವರಾಕ್ಷರಗಳಲ್ಲೂ ಹೀಗೆ ವ್ಯಂಜನ–ಸ್ವರ ಎಂದು ಎರಡು ಭೇದವುಳ್ಳ, ಅಕ್ಷರಪ್ರತಿಪಾದ್ಯ–ಎಪ್ಪತ್ತೆರಡು ಸಾವಿರ ಅಕ್ಷರಗಳಿಂದ ಪ್ರತಿಪಾದ್ಯವಾದ ಎಪ್ಪತ್ತೆರಡು ಸಾವಿರ ರೂಪಗಳುಳ್ಳ ಹೇ ಭಗವಂತ ಎಂಬುದೇ ಮೂರನೆಯ ಸಂಬೋಧನೆಯ ಅರ್ಥ.

ತಾತ್ಪರ್ಯ: ನಮ್ಮ ಹೃದಯದ ಮಧ್ಯವರ್ತಿಯಿಂದ ಸುಷುಮ್ನಾನಾಡಿ ಹಾದುಹೋಗಿದೆ. ಈ ಸುಷುಮ್ನಾನಾಡಿಗೆ ಬಲಪಾರ್ಶ್ವದಲ್ಲಿ ಐವತ್ತು ಪಿಂಗಲ ನಾಡಿಗಳೂ ಎಡಪಾರ್ಶ್ವದಲ್ಲಿ ಐವತ್ತು ಇಡಾ ನಾಡಿಗಳೂ ಹರಡಿಕೊಂಡಿವೆ. ಇವೆಲ್ಲ ನಮ್ಮ ದೇಹದ ಮುಖ್ಯವಾದ ನೂರೊಂದು ನಾಡಿಗಳು. ಪಿಂಗಲನಾಡಿಗಳಿಂದ ಬಲಭಾಗದಲ್ಲೂ ಇಡಾನಾಡಿಗಳಿಂದ ಎಡಭಾಗದಲ್ಲೂ ಕವಲೊಡೆದು ಮೂವತ್ತಾರು–ಮೂವತ್ತಾರು ಸಾವಿರ ನಾಡಿಗಳು ಹರಡಿ ಹಬ್ಬಿಕೊಂಡಿವೆ. ಹೀಗೆ ದೇಹದಲ್ಲಿ ಒಟ್ಟು ಎಪ್ಪತ್ತೆರಡು ಸಾವಿರ ನಾಡಿಗಳಿವೆ.

ಮನುಷ್ಯನ ಪೂರ್ಣಾಯುರ್ಮಾನದ ನೂರು ವರ್ಷಗಳಲ್ಲಿ ೩೬,೦೦೦ ದಿವಸಗಳೂ,(ದಿವಸಗಳು ಹಗಲುರಾತ್ರಿ ಎಂದು ಎರಡು ಭಾಗವಾಗಿರುವುದರಿಂದ) ಅಷ್ಟೇ ಸಂಖ್ಯೆಯ ಹಗಲುಗಳೂ, ಅಷ್ಟೇ ರಾತ್ರಿಗಳೂ ಇರುತ್ತವೆ. ಆದ್ದರಿಂದ ಇವೂ ಒಟ್ಟು ೭೨,೦೦೦ ಆದುವು.

ಬೃಹತೀಸಹಸ್ರದಲ್ಲಿ ೩೬,೦೦೦ ಅಕ್ಷರ (ವರ್ಣ)ಗಳಿರುವುದರಿಂದ ೩೬,೦೦೦ ಸ್ವರಗಳೂ ಅಷ್ಟೇ ಸಂಖ್ಯೆಯ ವ್ಯಂಜನಗಳೂ ಇದ್ದು ಅವೂ ಒಟ್ಟು ಸೇರಿ ೭೨,೦೦೦ ಆದುವು ; ಈ ಎಪ್ಪತ್ತೆರಡು ಸಾವಿರ ಸ್ವರ–ವ್ಯಂಜನಗಳಲ್ಲೂ ೭೨,೦೦೦ ಬೇರೆ ಬೇರೆ ವಿಷ್ಣುರೂಪಗಳಿರುತ್ತವೆ. ಅಷ್ಟೇ ಅಲ್ಲ.

ಬೃಹತೀಸಹಸ್ರದ ೩೬,೦೦೦ ಸ್ವರಗಳಲ್ಲಿರುವ ವಿಷ್ಣುರೂಪಗಳೇ ನಮ್ಮ

ದೇಹದಲ್ಲಿರುವ ಬಲಭಾಗದ ನಾಡಿಗಳಲ್ಲೂ, ಆಯುರ್ಮಾನದ ಹಗಲುಗಳಲ್ಲೂ ಇರುತ್ತವೆ. ಅದೇ ರೀತಿ ವ್ಯಂಜನಗತ ೩೬,೦೦೦ ವಿಷ್ಣುರೂಪಗಳೇ ನಮ್ಮ ಎಡ ಭಾಗದ ೩೬,೦೦೦ ನಾಡಿಗಳಲ್ಲೂ, ನಮ್ಮ ಆಯುರ್ಮಾನದ ಅಷ್ಟೇ ಸಂಖ್ಯೆಯ ರಾತ್ರಿಗಳಲ್ಲೂ ಇರುತ್ತವೆ ಹೀಗೆ ಬೃಹತೀಸಹಸ್ರಗತ ೭೨,೦೦೦ ವಿಷ್ಣುರೂಪಗಳೇ ನಮ್ಮ ದೇಹದ ೭೨,೦೦೦ ನಾಡಿಗಳಿಗೂ ನಮ್ಮ ಆಯುರ್ಮಾನದ ೭೨ ೦೦೦ ಹಗಲು–ರಾತ್ರಿಗಳಿಗೂ ನಿಯಾಮಕಗಳಾಗಿವೆ ಎಂದು ತಿಳಿಸುವುದೇ ಈ ಸಂಬೋಧನೆಯ ಮುಖ್ಯ ತಾತ್ಪರ್ಯ.

ಅಷ್ಟುಮಾತ್ರವಲ್ಲ. ಈ ಪ್ರಕಾರ ಬೃಹತೀಸಹಸ್ರಗತ ಭಗವದ್ರೂಪಗಳಿಗೂ ನಮ್ಮ ದೇಹಗತ ನಾಡಿಗಳಲ್ಲಿರುವ ಭಗವದ್ರೂಪಗಳಿಗೂ ಆಯುರ್ಮಾನದ ಅಹೋರಾತ್ರ ನಿಯಾಮಕ ವಿಷ್ಣುರೂಪಗಳಿಗೂ ಐಕ್ಯ ಚಿಂತನೆ ಮಾಡಿದರೆ ಆ ವಿಷ್ಣುವನ್ನು ಸತತ ನೂರು ವರ್ಷ ಅವಿಚ್ಛಿನ್ನವಾಗಿ ಆರಾಧನೆ ಮಾಡಿದಂತಾಗುತ್ತದೆಯೆಂದು ಐತರೇಯ ಭಾಷ್ಯದಲ್ಲಿ ಹೇಳಿರುವುದರಿಂದ ಈ ವಿಚಾರವನ್ನು ಜೀವನದಲ್ಲಿ ಒಮ್ಮೆಯಾದರೂ ನೆನೆದುಕೊಳ್ಳಲಿ, ನೆನೆದುಕೊಂಡು ನಾವು ಉದ್ಧಾರವಾಗಲೆಂಬ ಮಹೋದ್ದೇಶದಿಂದಲೇ ಮುಂತ್ರಾಲಯ ಪ್ರಭುಗಳು ಈ ಪ್ರಮೇಯಾಂಶವನ್ನು ಈ ಸುಬೋಧನಾರೂಪವಾಗಿ ಇದರಲ್ಲಿ ಸೇರಿಸಿದ್ದಾರೆಂದು ನನಗೆ ಭಾಸವಾಗುತ್ತದೆ.

೨೦. ನಾಲ್ಕನೆಯ ಸಂಬೋಧನೆ: ನಾಲ್ಕನೆಯ ಸಂಬೋಧನೆಯಲ್ಲಿ ರಾಯರು 'ಸವನತ್ರಯ'ದ ವಿಚಾರವನ್ನು ಅಳವಡಿಸಿದ್ದಾರೆ, ಆ ಸವನತ್ರಯದ ವರ್ಣನೆಯು ಛಾಂದೋಗ್ಯೋಪನಿಷತ್ತಿನಲ್ಲಿ ಮೂರನೇ ಅಧ್ಯಾಯದ ಹದಿನಾರನೇ ಖಂಡದ ೧ರಿಂದ ೭ರವರೆಗಿನ ಏಳು ಮಂತ್ರಗಳಲ್ಲಿ ನಿರೂಪಿತವಾಗಿದೆ. ಆದ್ದರಿಂದ ಈಗ ಆ ವಿಚಾರಕ್ಕೇ ಹೋಗೋಣ.

೨೧. **ಸವನತ್ರಯ:** ಸಂಸ್ಕೃತದಲ್ಲಿ 'ಷುಞ್ ಅಭಿಷವೇ' ಎಂದು ಧಾತು ಪಾಠವಿದೆ. ಅದರಂತೆ ಸು ಅಥವಾ ಸೂ ಎಂಬ ಧಾತುವಿಗೆ ಸೋಮರಸವನ್ನು ಹಿಂಡು ಅಥವಾ ಹಿಂಡಿದ ಸೋಮರಸವನ್ನು ಅರ್ಪಿಸು ಎಂಬ ಅರ್ಥವಿದೆ. ಸವನ ಎಂಬುದು ಸು-ಧಾತುವಿನ ಲ್ಯುಡಂತರೂಪ ಅಥವಾ ಭಾವನಾಮ. ಆದರಿಂದ ಸವನ ಎಂದರೆ ಸೋಮರಸವನ್ನು ಹಿಂಡುವಿಕೆ ಮತ್ತು ಹಿಂಡಿದ ರಸವನ್ನು ಭಗವಂತನಿಗೆ ಅಥವಾ ಇಷ್ಟದೇವತೆಗೆ ಸಮರ್ಪಿಸುವುದು ಎಂದರ್ಥ. ಯಜ್ಞ-ಯಾಗಗಳಲ್ಲಿ ಈ ಸವನ ಕರ್ಮವನ್ನು ಬೆಳಗ್ಗೆ ಮಧ್ಯಾಹ್ನ ಮತ್ತು ಸಂಜೆ ಹೀಗೆ ಮೂರು ಕಾಲಗಳಲ್ಲೂ, ಸಂಧ್ಯಾರ್ಘ್ಯವನ್ನು ಕೊಡುವಂತೆಯೇ, ಸಮರ್ಪಿಸುತ್ತಾರೆ. ಬೆಳಗ್ಗೆ

ಕೊಡುವುದಕ್ಕೆ ಪ್ರಾತಃಸವನವೆಂದೂ, ಮಧ್ಯಾಹ್ನ ಕೊಡುವುದಕ್ಕೆ ಮಾಧ್ಯಂದಿನ ಸವನವೆಂದೂ, ಸಂಜೆ ಕೊಡುವುದಕ್ಕೆ ಸಾಯಂಸವನವೆಂದೂ ಹೆಸರು. ಇದು ಯಜ್ಞದ ಸವನಗಳ ವಿಚಾರವಾಯಿತು. ಛಾಂದೋಗ್ಯೋಪನಿಷತ್ತಿನಲ್ಲಿ ಈ ಸವನ ತ್ರಯವನ್ನು ನಮ್ಮ ಜೀವನಕ್ಕೇ ಆಧ್ಯಾತ್ಮಿಕವಾಗಿ ಅಳವಡಿಸಿ ಅದನ್ನು ಭಗವಂತನಲ್ಲಿ ಹೇಗೆ ಸಮರ್ಪಿಸಬೇಕೆಂದು ತೋರಿಸಿದೆ.

೨೨. ಆಧ್ಯಾತ್ಮಿಕ ಕಾಲತ್ರಯ: ಈ ವಿಚಾರವನ್ನು ಉಪನಿಷತ್ತು **ಪುರುಷೋ ವಾವ ಯಜ್ಞಃ** ಎಂದು ಆರಂಭಿಸಿದೆ. ಇದಕ್ಕೆ-ಪುರುಷ ಜೀವನವೇ ಒಂದು ಮಹಾ(ದೊಡ್ಡ)ಯಜ್ಞವೆಂದು ಅರ್ಥ. ಅದನ್ನೇ ಮುಂದೆ ವಿವರಿಸುತ್ತದೆ. ಮನುಷ್ಯನ ಜೀವನದ ಪರಮಾವಧಿಯು ನೂರ ಹದಿನಾರು ವರ್ಷಗಳೆಂದು ಸೀಮಿತವಾಗಿದೆ. ಹಗಲನ್ನು ಬೆಳಗ್ಗೆ, ಮಧ್ಯಾಹ್ನ, ಸಂಜೆಯೆಂದು ವಿಭಾಗಿಸುವಂತೆಯೇ ಜೀವನಾವಧಿಯನ್ನು ಮೂರು ವಿಭಾಗವಾಗಿ ಹಂಚಿಕೊಳ್ಳಬೇಕು. ಜನನಾರಭ್ಯ ಮೊದಲ ಇಪ್ಪತ್ತನಾಲ್ಕು ವರ್ಷಗಳೇ ಪ್ರಾತಃಕಾಲ. ಮುಂದಿನ ನಲವತ್ತನಾಲ್ಕು ವರ್ಷಗಳು (ಎಂದರೆ ೨೫ರಿಂದ ೬೮ರ ವರೆಗಿನವು) ಮಧ್ಯಾಹ್ನವಾದರೆ ಕಡೆಯ ನಲವತ್ತೆಂಟು ವರ್ಷಗಳೇ (ಅರ್ಥಾತ್ ೬೯ರಿಂದ ೧೧೬ರವರೆಗಿನವು) ಅಥವಾ ಮರಣ ಕಾಲದವರೆಗಿನ ಕಾಲವೇ ಸಾಯಂಕಾಲ ಎನ್ನಿಸುತ್ತವೆ.

೨೩. ಇಂದ್ರಿಯಾಭಿಮಾನಿಗಳು: ನಾವು ನೋಡುವುದು, ಕೇಳುವುದು, ಕೂಡುವುದು ವಿಳುವುದು ಮೊದಲಾದ ಎಲ್ಲ ಕಾರ್ಯಗಳನ್ನು ಪಂಚಜ್ಞಾನೇಂದ್ರಿಯಗಳಿಂದಲೂ ಪಂಚಕರ್ಮೇಂದ್ರಿಯಂಗಳಿಂದಲೂ, ಯೋಚನೆಯನ್ನೂ ವಿಚಾರಣೆಯನ್ನೂ ಮನಸ್ಸಿನ ಮೂಲಕವೂ–ಹೀಗೆ ಏಕಾದಶೇಂದ್ರಿಯಂಗಳಿಂದಲೇ ಮಾಡುತ್ತೇವಷ್ಟೆ. ಈ ಹನ್ನೊಂದು ಇಂದ್ರಿಯಂಗಳಿಗೂ ಬೇರೆ-ಬೇರೆ ಪ್ರೇರಕರಾದ ಅಭಿಮಾನಿಗಳೆಂಬ ದೇವತೆಗಳಿರುತ್ತಾರೆ. ಯಜ್ಞದಲ್ಲಿ ಸವನತ್ರಯಂಗಳಿಗೆ ವಸು-ರುದ್ರ-ಆದಿತ್ಯರೆಂಬ ದೇವತೆಗಳು ಪ್ರೇರಕರಾಗಿದ್ದಾರೆಂದು ಹೇಳುತ್ತಾರೆ. ಅದರಂತೆ ನಮ್ಮ ಇಂದ್ರಿಯಾಭಿಮಾನಿದೇವತೆಗಳಿಗೇ ಬೇರೆ ಬೇರೆ ಕಾಲಗಳಲ್ಲಿ ವಸು-ರುದ್ರ-ಆದಿತ್ಯರೆಂಬ ನಾಮಧೇಯಂಗಳಾಗುತ್ತವೆ. ಹೇಗೆಂದರೆ ೨೪ ವರ್ಷಗಳವರೆಗೆ ವಸುಗಳಿಂದೂ ಮುಂದೆ ೪೮ನೇ ವಯಸ್ಸಿನ ಪೂರ್ತಿ ರುದ್ರರೆಂದೂ, ಆನಂತರ ಆಮರಣಾಂತ ಆದಿತ್ಯರೆಂದೂ ಆ ಇಂದ್ರಿಯಾಭಿಮಾನಿಗಳೇ ಕರೆಯಲ್ಪಡುತ್ತಾರೆ.

೨೪. ಆಧ್ಯಾತ್ಮಿಕ ಸವನತ್ರಯ: ಬಾಹ್ಯಯಜ್ಞದಲ್ಲಿ ಸೋಮರಸವನ್ನು ಯಜ್ಞದೇವತೆಗೆ ದಿವಸದಲ್ಲಿ ಮೂರಾವರ್ತಿ ಸಮರ್ಪಿಸಿ ಪ್ರಾತರ್ಮಧ್ಯಂದಿನ-ಸಾಯಂಸವನಗಳನ್ನು ನಡೆಸುವಂತೆಯೇ ಆಧ್ಯಾತ್ಮಿಕ ಯಜ್ಞದಲ್ಲೂ ಸವನ

೪. ತನ್ನಿಷ್ಠ — ತನ್ನಿಯಾಮಕ — ಪ್ರಾತರ್ಮಧ್ಯಂದಿನಸಾಯಮಾಖ್ಯಸವನತ್ರಯ—ತತ್ತತ್ಕಾಲೀನ—ತದಭಿಮಾನಿ—
ವಸುರುದ್ರಾದಿತೋಪಾಸ್ಯ ;

ತ್ರಯವನ್ನು ಆಚರಿಸಬೇಕೆಂದು ಉಪದೇಶಿಸಿದ ಉಪನಿಷತ್ತು ಆ ವಿಧಾನವನ್ನೂ ವಿವರಿಸಿದೆ. ಹುಟ್ಟಿದಾರಭ್ಯ ಇಪ್ಪತ್ತನಾಲ್ಕು ವರ್ಷಗಳು ತುಂಬುವವರೆಗೂ ವಸು ನಾಮಕರಾದ ಇಂದ್ರಿಯಾಭಿಮಾನಿಗಳೇ ನಮ್ಮಿಂದ ಎಲ್ಲ ಕಾರ್ಯಗಳನ್ನು ಮಾಡಿಸಿ ನಿವೃತ್ತರಾಗುತ್ತಾರೆ. ಆದಕಾರಣ ನಾವು ನಮ್ಮ ಇಪ್ಪತ್ತೈದನೆಯ ವಯಸ್ಸಿನಲ್ಲಿ ಅದುವರೆಗೆ ಮಾಡಿದ ಎಲ್ಲ ಕಾರ್ಯಗಳನ್ನು–ಎಂದರೆ ಹುಟ್ಟಿದ್ದು, ಬೆಳೆದದ್ದು, ಉಸಿರಾಡುವುದರಿಂದ ಹಿಡಿದು ಚೌಲ, ಉಪನಯನ, ವಿದ್ಯಾಭ್ಯಾಸ ವಿವಾಹಗಳವರೆಗೆ ಸಮಸ್ತವನ್ನೂ–ಆ ವಸುನಾಮಕ ಇಂದ್ರಿಯಾಭಿಮಾನಿಗಳ ಪ್ರೇರಣೆಯ ಮೂಲಕ ಮಾಡಿದೆವೋ ಎಲ್ಲವೂ ಭಗವತ್ಸೇವಾರೂಪವೇ ಆಗಲಿ ಎಂದು ಶ್ರೀ ಹರಿಯಲ್ಲಿ ಸಮರ್ಪಿಸಬೇಕು. ಇದೇ ಆಧ್ಯಾತ್ಮಿಕ ಪ್ರಾತಸ್ಸವನ. (ನೋಡುವುದು, ಕೇಳುವುದು ಮೊದಲಾದ ನಿತ್ಯಜೀವನದ ಕಾರ್ಯಗಳು ಹೇಗೆ ಭಗವತ್ಸೇವೆಯಾಗುತ್ತವೆ ಎಂಬ ವಿಚಾರ ಮುಂದೆ ಪ್ರಾರ್ಥನಾಭಾಗದಲ್ಲಿ ಶುಭಕರ್ಮಸಮರ್ಪಣೆಯ ವಿಧಾನದ ಗ-ವಿಭಾಗದಲ್ಲಿ ಬರುವುದು.) ಅದೇ ರೀತಿ ೨೫ನೇ ವಯಸ್ಸಿನಿಂದ ೪೮ನೇ ವಯಸ್ಸಿನವರೆಗೆ ರುದ್ರನಾಮಕ ಇಂದ್ರಿಯಾಭಿಮಾನಿಗಳೇ ನಮಗೆ ಪ್ರೇರಕರಾಗಿರುತ್ತಾರೆ. ಅವರ ಪ್ರೇರಣೆಯಿಂದ ನಡೆಸಿದ ಎಲ್ಲ ಕಾರ್ಯಗಳನ್ನು–ಪತ್ನೀಪುತ್ರಾದಿಗಳ ಪೋಷಣೆ, ಜೀವನ ನಿರ್ವಹಣೆ, ಅತಿಥಿ-ಅಭ್ಯಾಗತರ ಪೂಜೆ, -ಪೂಜೆ-ಪುರಸ್ಕಾರಾದಿ ಸಮಸ್ತ ಕರ್ಮಗಳನ್ನೂ ಆರವತ್ತೊಂಬತ್ತನೇ ವಯಸ್ಸಿನಲ್ಲಿ ಇನ್ನೊಮ್ಮೆ ಶ್ರೀ ವಿಷ್ಣುವಿನಲ್ಲಿ ಸಮರ್ಪಿಸಬೇಕು. ಅದೇ ಆಧ್ಯಾತ್ಮಿಕ ಮಧ್ಯಂದಿನ ಸವನವೆನಿಸುತ್ತದೆ. ಕೊನೆಗೆ ಮರಣ ಸಮಯದವರೆಗೂ ನಮ್ಮ ಇಂದ್ರಿಯಾಭಿಮಾನಿಗಳು ಆದಿತ್ಯರೆಂದು ಹೆಸರುಳ್ಳವರಾಗಿರುತ್ತಾರೆ. ಆ ಆದಿತ್ಯರೆಂಬ ದೇವತೆಗಳಿಂದ ಪ್ರೇರಿತರಾಗಿ ಮಾಡಿದ ಸಕಲಕೃತ್ಯಗಳನ್ನು ಮರಣಸೂಚನೆ ಗೊತ್ತಾದ ಕೂಡಲೇ ಮತ್ತೊಮ್ಮೆ ಭಗವಂತನಲ್ಲಿ ಸಮರ್ಪಿಸಬೇಕು. ಅದೇ ಸಾಯಂಸವನವೆನಿಸುತ್ತದೆ. ಹೀಗೆ ಮಾಡಿದರೆ ಇಡೀ ಜೀವನವೇ ಭಗವತ್ಸೇವೆಯಾಗಿ ಪರಿಣಮಿಸಿ ನಮ್ಮ ಬದುಕೇ ಸಾರ್ಥಕವಾಗುತ್ತದೆಯೆಂಬುದೇ ಛಾಂದೋಗಶ್ರುತಿಯ ಸಂದೇಶ. ಈಗ ಗದ್ಯದ ಅರ್ಥ ಸುಲಭವಾಗಿ ತಿಳಿಯುತ್ತದೆ, ನೋಡಿ.

೨೫. ನಾಲ್ಕನೆಯ ಸಂಬೋಧನೆಯ ಅರ್ಥ–ತನ್ನಿಷ್ಠ-ದೇಹದಲ್ಲಿ

ರಂವ. ತನ್ನಿಯಾಮಕ–ದೇಹನಿಯಾಮಕರಾದ, ಪ್ರಾತರ್ಮಧ್ಯಂದಿನ–ಸಾಯಂ ವಾಖ್ಯ–ಸವನತ್ರಯ–ಪ್ರಾತಸ್ಸವನ, ಮಧ್ಯಂದಿನ ಸವನ ಮತ್ತು ಸಾಯಂ ಸವನ–ಗಳೆಂಬ ಜೀವನದ ಮೂರು ಹಂತಗಳನ್ನೂ, ತತ್ತತ್ಕಾಲೀನ-ಆಯಾಕಾಲಕ್ಕೆ ಸಂಬಂಧಪಟ್ಟ, ತದಭಿಮಾನಿ–ವಸು–ರುದ್ರ–ಆದಿತ್ಯೋಪಾಸ್ಯ–ಪ್ರಾರಂಭದ ೨೪ ವರ್ಷಕಾಲ ವಸುಗಳೆಂದು ಕರೆಯಲ್ಪಡುವ ಇಂದ್ರಿಯಾಭಿಮಾನಿ ದೇವತೆಗಳಿಂದಲೂ ಮುಂದಿನ ೪೪ ವರ್ಷಕಾಲ ರುದ್ರನಾಮಕ ಅಭಿಮಾನಿಗಳಿಂದಲೂ ಅನಂತರ ಮರಣ ಪರ್ಯಂತ ಆದಿತ್ಯನಾಮಕರಾದ ಇಂದ್ರಿಯಾಭಿಮಾನಿಗಳಿಂದಲೂ ಆರಾಧಿಸಲ್ಪಡುವ ಹೇ ಭಗವಂತ–ಎಂದು ಅರ್ಥ. ಮನುಷ್ಯರಾದ ನಾವು ಸಮರ್ಪಣೆ ಮಾಡಲಿ–ಬಿಡಲಿ ದೇವತೆಗಳಂತೂ ಮಾಡೇ ಮಾಡುತ್ತಾರೆಂಬುದನ್ನು 'ಉಪಾಸ್ಯ' ಶಬ್ದ ತೋರಿಸುತ್ತದೆ.

ತಾತ್ಪರ್ಯ : ನಮ್ಮ ಇಡೀ ಜೀವನವೇ ಒಂದು ಆಧ್ಯಾತ್ಮಿಕ ಮಹಾಯಜ್ಞದ ಸ್ವರೂಪವಾಗಿರುವುದರಿಂದ ನಾವು ಜೀವನದಲ್ಲಿ ಮಾಡಿದ ಎಲ್ಲ ಕೃತ್ಯಗಳೂ ಯಜ್ಞಾನುಷ್ಠಾನದಂತೆ ಭಗವತ್ಪೂಜೆಯೇ ಆಗಿವೆ ಎಂಬ ಅನುಸಂಧಾನದಿಂದ ಅವನ್ನು ಭಗವಂತನಲ್ಲಿ ಅರ್ಪಿಸೋಣದರಿಂದಲೇ ನಿರಾಯಾಸವಾಗಿ ಮಹಾಯಜ್ಞ ಮಾಡಿದ ಫಲ ಲಭ್ಯವಾಗುತ್ತದೆಯೆಂಬ ಛಾಂದೋಗ್ಯೋಪನಿಷದುಕ್ತ ರಹಸ್ಯವನ್ನೇ ಈ ಚಿಕ್ಕವಾಕ್ಯ ನಿರೂಪಣೆ ಮಾಡುತ್ತದೆ. ಯಜ್ಞದಲ್ಲಿ ಸೋಮರಸವನ್ನು ದಿನಕ್ಕೆ ಮೂರಾವರ್ತಿ–ಬೆಳಗ್ಗೆ, ಮಧ್ಯಾಹ್ನ, ಸಂಜೆ-ಅರ್ಪಣೆ ಮಾಡುತ್ತಾರೆ ; ಇದಕ್ಕೆ ಸವನತ್ರಯವೆಂದು ಹೆಸರು. ಅದೇ ಪ್ರಕಾರ ನಾವೂ ನಮ್ಮ ಜೀವನದ ಮೂರು ಹಂತಗಳಲ್ಲಿ ನಮ್ಮ ಸಮಸ್ತಕೃತ್ಯಗಳನ್ನು ಭಗವಂತನಲ್ಲಿ ಸಮರ್ಪಿಸಬೇಕು ; ಅದೇ ಆಧ್ಯಾತ್ಮಿಕ ಸವನತ್ರಯ.

ನಾವು ಸಕಲ ಕಾರ್ಯಗಳನ್ನೂ ಇಂದ್ರಿಯಗಳ ಸಹಾಯದಿಂದಲೇ ಮಾಡಬೇಕಲ್ಲವೆ. ಆ ಇಂದ್ರಿಯಗಳಿಗೆ ಪ್ರೇರಕರಾದ ದೇವತೆಗಳು ನಮ್ಮ ವಯಸ್ಸಿನ ಪ್ರಕಾರ ವಸು-ರುದ್ರ-ಆದಿತ್ಯರೆಂದು ಮೂರು ನಾಮಧೇಯವುಳ್ಳವರಾಗಿರುತ್ತಾರೆ. ಜನ್ಮಾರಭ್ಯ ಇಪ್ಪತ್ತನಾಲ್ಕನೇ ವಯಸ್ಸಿನವರೆಗೆ ವಸುಗಳೆಂಬ ಇಂದ್ರಿಯಾಭಿಮಾನಿಗಳು ಪ್ರೇರಿಸುತ್ತಾರೆ. ಅವರ ಮೂಲಕ ಮಾಡಿದ್ದೆಲ್ಲವನ್ನೂ ೨೫ನೇ ವಯಸ್ಸಿನಲ್ಲಿ ಭಗವಂತನಲ್ಲಿ ಸಮರ್ಪಿಸಿದರೆ ಪ್ರಾತಸ್ಸವನ ಮಾಡಿದಂತಾಯಿತು. ಮುಂದೆ ಳಳ ವರ್ಷ ರುದ್ರರೆಂಬ ಇಂದ್ರಿಯಾಭಿಮಾನಿಗಳು ಪ್ರೇರಕರಾಗಿರುತ್ತಾರೆ. ಆ ರುದ್ರರ ಮೂಲಕ ಆ ನಲವತ್ತನಾಲ್ಕು ವರ್ಷಗಳಲ್ಲಿ ಮಾಡಿದ ಸಕಲ ಕೃತ್ಯಗಳನ್ನು ೬೯ನೇ ವಯಸ್ಸಿನಲ್ಲಿ ಭಗವಂತನಲ್ಲಿ ಪುನಃ ಸಮರ್ಪಿಸಬೇಕು. ಇದೇ ಮಧ್ಯಂದಿನ ಸವನ.

೫. ಪರಮಾಣುಸಂಬಂಧಿ — ತಾವತ್ಸಂಖ್ಯಾಕಾಹರ್ನಿಯಾಮಕ —ಅಹರ್ನಾಮಕ—ಮುಖ್ಯಪ್ರಾಣೋಪಾಸ್ಯ—ರಮಾಯುಕ್ತ–ಪುರುಷ ರೂಪಾತ್ಮಕ ;

ಅಲ್ಲಿಂದ ಮುಂದೆ ಸಾಯುವ ಪರ್ಯಂತ ನಮ್ಮ ಇಂದ್ರಿಯಗಳ ಪ್ರೇರಕರು ಆದಿತ್ಯನಾಮಕರಾಗಿರುತ್ತಾರೆ. ೬೯ನೇ ವಯಸ್ಸಿನಿಂದ ಆರಂಭಿಸಿ ಮರಣಕಾಲದ ವರೆಗೆ ನಾವು ಏನೇನು ಕರ್ಮಗಳನ್ನು ಈ ಆದಿತ್ಯರ ಮುಖಾಂತರ ಮಾಡುವೆವೋ ಅದನ್ನು ಮರಣಾತ್ಪೂರ್ವದಲ್ಲಿ ಎಂದಾದರೂ ಶ್ರೀ ಹರಿಯಲ್ಲಿ ಅರ್ಪಿಸಿಬಿಡುವುದೇ ಸಾಯಂಸವನ. ಹೀಗೆ ಮಾಡುವುದರಿಂದ ನಮ್ಮ ಜೀವನವೇ ಸಾರ್ಥಕವಾಗುತ್ತದೆ. ಆದರೆ ಇಷ್ಟು ತಿಳಿವಳಿಕೆಯಿಲ್ಲದ ಅಲ್ಪಮತಿಗಳಿಗೆ ಈ ಗದ್ಯವನ್ನು ಪ್ರತಿನಿತ್ಯ ಪಠಿಸಿದ ಮಾತ್ರದಿಂದಲೇ ಆ ಫಲ ಲಭ್ಯವಾಗುವುದೆಂದು ತಿಳಿಸುವುದಕ್ಕಾಗಿಯೇ ರಾಯರು ಈ ವಾಕ್ಯ ಜೋಡಿಸಿದ್ದಾರೆ.

೨೬, ಐದನೇ ಸಂಬೋಧನೆಯ ಅರ್ಥ–ಪರಮಾಣು ಸಂಬಂಧಿ- ಪರಮಾಣುಗಳಿಗೆ ಸಂಬಂಧಿಸಿದ, **ತಾವತ್ ಸಂಖ್ಯಾಕ** ಅಷ್ಟೇ ಸಂಖ್ಯೆಯುಳ್ಳ, **ಅಹರ್ನಿಯಾಮಕ** ಹಗಲುಗಳಿಗೆ ನಿಯಾಮಕರಾದ, **ಅಹರ್ನಾಮಕ** 'ಅಹರ್' ಎಂಬ ಹೆಸರುಳ್ಳ **ಮುಖ್ಯ ಪ್ರಾಣೋಪಾಸ್ಯ**-ಮುಖ್ಯ ಪ್ರಾಣದೇವರಿಂದ ಉಪಾಸನೆ ಮಾಡಲ್ಪಡುವ, **ರಮಾಯುಕ್ತ ಪುರುಷರೂಪಾತ್ಮಕ** ಲಕ್ಷ್ಮೀದೇವಿ ಸಮೇತನಾದ ಪುರುಷರೂಪಾತ್ಮಕನಾದ ಹೇ ಭಗವಂತ.

೨೭. ಐದನೇ ಸಂಬೋಧನೆಗೆ ವಿವರಣೆ : ಒಂದು ದಿವಸವು (ದಿನವು) ಅಹೋರಾತ್ರಿಗಳೆಂದು ಎರಡು ಭಾಗವುಳ್ಳದ್ದಾಗಿದೆಯಷ್ಟೆ. ರಾತ್ರಿಗೆ ದುರ್ಗಾದೇವಿಯು ಅಭಿಮಾನಿಯಾಗಿದ್ದಾಳೆ ; ಅದೇ ರೀತಿ ಹಗಲಿಗೆ ವಾಯು ದೇವರು ಅಭಿಮಾನಿಗಳು. ಹಗಲಿಗೆ ಅಹಂ (ಅಹಃ) ಎಂಬ ಹೆಸರಿರುವುದರಿಂದ ವಾಯುದೇವರಿಗೂ ಅಹರ್ ಎಂಬ ಹೆಸರೇ ಬಂದಿದೆ. ಅಹರ್ ಎಂಬ ಪದವು 'ಹಾ=ಬಿಡು, ತ್ಯಜಿಸು ಎಂಬ ಧಾತುವಿನ ರೂಪಾಂತರವಾಗಿದ್ದು, ವಿರುದ್ಧಾರ್ಥಕವಾದ್ದರಿಂದ (ಹಾ-ಬಿಡು, ಹೇಯ-ಬಿಡತಕ್ಕದ್ದು, ಬಿಡಲು ಯೋಗ್ಯವಾದುದು; ಅದಕ್ಕೆ ವಿರುದ್ಧವಾದುದು ಅಹೇಯ ಅಥವಾ ಅಹರ್) ಅಹೇಯ–ಬಿಡಲು ಶಕ್ಯವಿಲ್ಲದ್ದು ಎಂಬ ಅರ್ಥವುಳ್ಳದ್ದಾಗಿದೆ. ವಾಯುದೇವರನ್ನು ಬಿಟ್ಟು ಎಂದರೆ ವಾಯುದೇವರ ಸಹಾಯವಿಲ್ಲದೆ ಯಾವ ಪ್ರಾಣಿಯೂ ಬದುಕಲು ಸಾಧ್ಯವೇ ಇಲ್ಲವಾದ್ದರಿಂದ ಅವರು 'ಅಹೇಯ'ರಾಗಿದ್ದು ಅಹರ್-ನಾಮಕರೂ ಆಗಿದ್ದಾರೆ.

ಪದಾರ್ಥಗಳಲ್ಲಿ ಅಡಗಿರುವ ಪರಮಾಣುಗಳನ್ನು ಎಣಿಸುವುದು ಸರ್ವಥಾ ಸಾಧ್ಯವಿಲ್ಲವಾದ್ದರಿಂದ ಅವು ಹೇಗೆ ಅಸಂಖ್ಯವಾಗಿವೆಯೋ ಅದೇ ರೀತಿ ಕಾಲಮಾನದಲ್ಲಿ ಬರುವ ಹಗಲುಗಳೂ ಅಸಂಖ್ಯವಾಗಿವೆ ; ಇದನ್ನೇ ಗದ್ಯದಲ್ಲಿರುವ 'ತಾವತ್‌ಸಂಖ್ಯಾಕ' ಎಂಬ ಪದಗಳು ಹೇಳುತ್ತವೆ. ಹಾಗೆ ಅಸಂಖ್ಯಾಕವಾದ ಹಗಲುಗಳಿಗೆ ನಿಯಾಮಕರೂ (ಅಹರ್ನಿಯಾಮಕ), ಅಹೇಯರಾದ್ದರಿಂದ 'ಅಹರ್ನಾಮಕರೂ' ಆದ ಮುಖ್ಯ ಪ್ರಾಣದೇವರು ರಾತ್ರಿಗೆ ಅಭಿಮಾನಿಯಾದ ದುರ್ಗಾರೂಪಿ ರವಾಯುಕ್ತನಾದ ಕಾಲನಿಯಾಮಕನಾದ ಪುರುಷರೂಪೀ ಪರಮಾತ್ಮನನ್ನು ಉಪಾಸನೆಮಾಡುತ್ತಿರುತ್ತಾರೆ. ಈ ಪ್ರಕಾರ—ಪರಮಾಣುಗಳಂತೆ ಅಸಂಖ್ಯವಾದ ಅಹಸ್ಸುಗಳಿಗೆ (ಹಗಲುಗಳಿಗೆ) ಅಭಿಮಾನಿಗಳಾದ ವಾಯುದೇವರಿಂದ ಉಪಾಸ್ಯಮಾನನಾದ ಮುತ್ತು ರಾತ್ರ್ಯಾಭಿಮಾನಿಯಾದ ದುರ್ಗಾಸಮೇತನಾದ ಹೇ ಪುರುಷರೂಪಿ ಪರಮಾತ್ಮನೇ ಎಂಬುದೇ ಇದನೇ ಸಂಬೋಧನೆಯು ಮುಖ್ಯಾಂಶ.

೨೮. ಆರನೇ ಸಂಬೋಧನೆ— ಕ್ಲಿಷ್ಟಪದಗಳ ವಿವರಣೆ—ಸಂಸ್ಕೃತದಲ್ಲಿ **ಪ್ರಾದೇಶ** ಎಂಬುದು ಒಂದು ಪಾರಿಭಾಷಿಕ ಶಬ್ದ. ಸಾಮಾನ್ಯವಾಗಿ (ಬಲಗೈ) ಹೆಬ್ಬೆಟ್ಟಿನ ತುದಿಯಿಂದ ಹಿಡಿದು ತರ್ಜನೀಬೆಟ್ಟಿನ (ತೋರು ಬೆರಳಿನ) ತುಟ್ಟತುದಿಯವರೆಗೆ (ಬೆಟ್ಟುಗಳನ್ನು ಚಾಚಿದಾಗ) ಇರುವ ಉದ್ದಕ್ಕೇ 'ಪ್ರಾದೇಶ' ಎಂದು ಹಸರು[1] : ಇದನ್ನೇ ಕನ್ನಡದಲ್ಲಿ 'ಚೋಟುದ್ದ' ಎನ್ನುತ್ತಾರೆ. 'ಇಷ್ಟು ಅಳತೆಯುಳ್ಳ' ಅಥವಾ 'ಇಷ್ಟು ಉದ್ದದ' ಎಂಬ ಅರ್ಥದಲ್ಲಿ **ಮಾತ್ರ** (ಚ್) ಎಂಬ ಪ್ರತ್ಯಯ[2] ಬರುತ್ತದೆ. ಆದರಿಂದ 'ಪ್ರಾದೇಶ-ಮಾತ್ರ' ಎಂದರೆ (ನಾಭಿಯಿಂದ) ಚೋಟುದ್ದ ಎತ್ತರದಲ್ಲಿರುವ ಅಥವಾ ದೂರದಲ್ಲಿರುವ ಎಂದರ್ಥವಾಗುತ್ತದೆ. ನಮ್ಮ ಹೃದಯವು ನಾಭಿಯಿಂದ ಸುಮಾರು ಚೋಟುದ್ದ ಎತ್ತರದಲ್ಲಿದೆಯೆಂಬುದು ಎಲ್ಲರಿಗೂ ತಿಳಿದ ವಿಷಯ. ಆದ್ದರಿಂದಲೇ ಗದ್ಯದಲ್ಲಿ 'ಹೃದಯ'ಕ್ಕೆ 'ಪ್ರಾದೇಶಮಾತ್ರ' ಎಂಬ ವಿಶೇಷಣ ಕೊಟ್ಟಿದ್ದಾರೆ.

ಇನ್ನು ನಮ್ಮ ಸ್ಥೂಲದೇಹದ ಹೃದಯವು ನಮ್ಮ ಹೆಬ್ಬೆಟ್ಟಿನ ಗಾತ್ರದಷ್ಟಿರುತ್ತದೆಯೆಂಬುದು ಕಠೋಪನಿಷತ್ಭಾಷ್ಯದಲ್ಲಿ (೨ ಅ. ೩ ವ. ೧೭ ಮಂ) ಉದಹರಿಸಿರುವ 'ದೇಹಾಂಗುಷ್ಠಮಿತೋ ದೇಹೇ' ಎಂಬ ಪ್ರಮಾಣವಾಕ್ಯದಿಂದ

1. ಪ್ರಾದೇಶ–ತಾಲ–ಗೋಕರ್ಣಾ–ಸ್ತರ್ಜನ್ಯಾದಿಯುತೇ ತತೇ । ಅಂಗುಷ್ಠೇ (ಅಮರ, ಮನುಷ್ಯ ವರ್ಗ)

2. 'ಪ್ರಮಾಣೇ ದ್ವಯಸಚ್‌ದಘ್ನಿಚ್‌ಮಾತ್ರಚಃ ' (ಪಾ. ೫–೨–೩೭)

೬. ಪ್ರಾದೇಶಮಾತ್ರ—ಹೃದಯಾತ್ಮಕ — ಪ್ರಾದೇಶಪರಿಮಿತ ಸ್ಥಾನೇಶಾತ್ಮಕ ;

ಗೊತ್ತಾಗುತ್ತದೆ. ಈ ವಾಕ್ಯಕ್ಕೆ 'ಸ್ಥೂಲದೇಹದಲ್ಲಿರುವ ಹೃದಯ (ಕಮಲ)ವು ಆ ದೇಹದ (ಬಲಗೈ) ಹೆಬ್ಬೆಟ್ಟಿನ ಗಾತ್ರದಷ್ಟಿರುತ್ತದೆ' ಎಂದರ್ಥ. 'ಪ್ರಾದೇಶ' ಎಂದರೆ ಲಕ್ಷಣಾವೃತ್ತಿಯಿಂದ 'ಹೆಬ್ಬೆಟ್ಟು' ಎಂದೂ ಅರ್ಥವಾಗುತ್ತದೆ. ಆದ್ದರಿಂದ ಸ್ಥೂಲದೇಹದ ಹೃದಯದ ಅಳತೆಯನ್ನು ಈ ಗದ್ಯದಲ್ಲಿ 'ಪ್ರಾದೇಶ ಪರಿಮಿತ' ಎಂದು ಹೇಳಿದ್ದಾರೆ ; ಇದಕ್ಕೆ 'ಹೆಬ್ಬೆಟ್ಟಿನಷ್ಟು ಅಳತೆಯುಳ್ಳ' ಎಂದರ್ಥವಾಗುತ್ತದೆ. ಹೀಗೆ ಹೃದಯದ ಒಳಭಾಗವೇ ಈ 'ಪ್ರಾದೇಶಪರಿಮಿತ ಸ್ಥಾನ'ವಾಗಿದೆ,

ಈ ಸ್ಥೂಲದೇಹದ ಹೃದಯದ ಒಳಭಾಗವನ್ನು ಆವರಿಸಿಕೊಂಡು (ವ್ಯಾಪಿಸಿಕೊಂಡು) 'ಪ್ರಾದೇಶ' ನಾಮಕ ಪರಮಾತ್ಮನು ಅಲ್ಲೇ ನೆಲೆಸಿದ್ದಾನೆಂಬುದು ಬೃಹದ್ಭಾಷ್ಯೋದಾಹೃತ (೬ನೇ ಅಧ್ಯಾಯ. ೧ನೇ ಪಡಾಚಾರ್ಯ ಬ್ರಾಹ್ಮಣದಲ್ಲಿ ೭ನೇ ಖಂಡ) ಈ ಪ್ರಮಾಣದಿಂದ ಸಿದ್ಧವಾಗುತ್ತದೆ—

ಹೃದಯೇ ಸರ್ವಶೋ ವ್ಯಾಪೀ ಪ್ರಾದೇಶಃ ಪುರುಷೋತ್ತಮಃ ।
ಜೀವಾನಾಂ ಸ್ಥಾನಮುದ್ದಿಷ್ಟಃ ಸರ್ವದೈವ ಸನಾ (ದಾ)ತನಃ ॥

(ಅರ್ಥ) ಸನಾತನನಾದ ಶ್ರೀಹರಿಯು ಆಯಾಯಾ ಜೀವರ ಸ್ಥೂಲದೇಹದಲ್ಲಿರುವ ಹೃದಯದಲ್ಲಿ ವ್ಯಾಪಿಸಿಕೊಂಡು ನೆಲೆಸಿದ್ದಾನೆ. ಆದರೆ ಆ ಹೃದಯವೇ ಪ್ರಾದೇಶಮಾತ್ರ ಪರಿಮಾಣವುಳ್ಳದ್ದಾದ್ದರಿಂದ (ಹೆಬ್ಬೆಟ್ಟಿನಷ್ಟೇ ಇರುವುದರಿಂದ) ಅದರಲ್ಲಿರುವ ಭಗವಂತನೂ ಅಷ್ಟೇ (ಹೆಬ್ಬೆಟ್ಟಿನಷ್ಟೇ) ಗಾತ್ರವುಳ್ಳವನಾಗಿದ್ದು 'ಪ್ರಾದೇಶ' ನಾಮಕನಾಗಿದ್ದಾನೆ. ಅಷ್ಟು ಸೂಕ್ಷ್ಮ ರೂಪದಿಂದಿದ್ದರೂ ಆ ಭಗವಂತನೇ ಸಕಲ ಜೀವಿಗಳಿಗೂ ಆಶ್ರಯನಾಗಿದ್ದಾನೆ. (ಇದೇ ಆ ಭಗವಂತನಲ್ಲಿರುವ ಅಚಿಂತ್ಯಾದ್ಭುತ ಶಕ್ತಿ.)

ಇಷ್ಟು ವಿಚಾರವನ್ನು ತಿಳಿದುಕೊಂಡರೆ ಆರನೆಯ ಸಂಬೋಧನೆಯು ಸುಲಭವಾಗಿ ಅರ್ಥವಾಗುತ್ತದೆ ; ನೋಡಿ.

೨೯. ಆರನೇ ಸಂಬೋಧನೆ–(ಪದಶಃ ಅರ್ಥ)—ಪ್ರಾದೇಶಮಾತ್ರ=(ನಾಭಿಯಿಂದ) ಚೋಟುದ್ದ ದೂರ (ಮೇಲ್ಭಾಗದಲ್ಲಿ) ಇರುವ, ಹೃದಯಾತ್ಮಕ–ಸ್ಥೂಲದೇಹದ ಹೃದಯರೂಪವಾದ, ಪ್ರಾದೇಶಪರಿಮಿತ

ಸ್ಥಾನ= (ಸ್ಥೂಲದೇಹದ ಕೈಯಿನ) ಹೆಬ್ಬೆಟ್ಟಿನ ಗಾತ್ರದ ಅಳತೆಯಷ್ಟು ವಿಸ್ತಾರವುಳ್ಳ ಹೃದಯವೆಂಬ ಸ್ಥಾನಕ್ಕೆ, ಈಶಾತ್ಮಕ–ಒಡೆಯನಾದ (ಎಂದರೆ ಅಲ್ಲಿ ವ್ಯಾಪಿಸಿಕೊಂಡು ನೆಲೆಸಿರುವ) ಪ್ರಾದೇಶದಷ್ಟೇ ಗಾತ್ರವಿರುವುದರಿಂದ 'ಪ್ರಾದೇಶ'ನಾಮಕನೂ, ಹೃದಯದಲ್ಲಿ ವಾಸಿಸುವುದರಿಂದ[1] 'ಹೃದಯ' ನಾಮಕನೂ ಆದ ಹೇ ಭಗವಂತನೇ ! ಎಂದು ಅರ್ಥ.

ತಾತ್ಪರ್ಯ—ನಮ್ಮ ಸ್ಥೂಲದೇಹದೊಳಗಿರುವ ಹೃದಯ(ಕಮಲ)ವು (ಪಾದೇಶಮಾತ್ರ) ನಾಭಿಯ ಮೇಲೆ ಚೋಟುದ್ದ ದೂರದಲ್ಲಿ ಮೇಲ್ಭಾಗದಲ್ಲಿ ಇದೆ. ಆ ಹೃದಯದ ವಿಸ್ತಾರವು ಕಠೋಪನಿಷದ್ಭಾಷ್ಯದ ಪ್ರಕಾರ ಸ್ಥೂಲದೇಹದ (ಬಲಗೈ) ಹೆಬ್ಬೆಟ್ಟಿನ ಗಾತ್ರದಷ್ಟೇ ಇರುತ್ತದೆ (ಪ್ರಾದೇಶ ಪರಿಮಿತಸ್ಥಾನ). ಈ ಹೃದಯದ ಒಳಭಾಗವಷ್ಟನ್ನೂ ಆವರಿಸಿಕೊಂಡು ಇರುವ ಭಗವಂತನ ಗಾತ್ರವೂ (ಪ್ರಾದೇಶಪರಿಮಿತ) ಹೆಬ್ಬೆಟ್ಟಿನ ಗಾತ್ರವೇ ಇರುತ್ತದೆ. ಆದ್ದರಿಂದ ಆ ಭಗವದ್ರೂಪಕ್ಕೂ 'ಪ್ರಾದೇಶ' ಎಂಬ ಹೆಸರೇ ಬಂದಿದೆ. ಮತ್ತು ಹೃದಯದಲ್ಲಿರುವುದರಿಂದ ಹೃದಯ ಎಂಬ ಹೆಸರೂ ಅನ್ವಯಿಸುತ್ತದೆ. ಈ ಪ್ರಕಾರ ನಾಭಿಯಿಂದ ಚೋಟುದ್ದ ಮೇಲ್ಭಾಗದಲ್ಲಿರುವ ಹೃದಯದ ಒಳಗಿರುವ, ಹೆಬ್ಬೆಟ್ಟಿನಷ್ಟು ಪರಿಮಾಣವುಳ್ಳ ಸ್ಥಾನ(ಸ್ಥಳ)ದಲ್ಲಿ ಒಂದು ಭಗವದ್ರೂಪವು ಅಷ್ಟು ಮಾತ್ರವೇ ಗಾತ್ರವುಳ್ಳದ್ದಾಗಿ ಹೃದಯದ ಒಳಭಾಗವಷ್ಟನ್ನೂ ವ್ಯಾಪಿಸಿಕೊಂಡು ಅಲ್ಲೇ ನೆಲೆಸಿದೆ. ಅದರ ಗಾತ್ರ 'ಪ್ರಾದೇಶ'ದಷ್ಟೇ ಇರುವುದರಿಂದ 'ಪ್ರಾದೇಶ' ಎಂದೂ ಹೃದಯದಲ್ಲಿ ನೆಲೆಸಿರುವುದರಿಂದ 'ಹೃದಯ' ಎಂದೂ ಅದಕ್ಕೆ ಹೆಸರು. ಈ ಪ್ರಕಾರ ಸ್ಥೂಲದೇಹದ ಹೃದಯದಲ್ಲಿ ನೆಲೆಸಿರುವ 'ಹೃದಯ' ನಾಮಕನೂ 'ಪ್ರಾದೇಶ'ನಾಮಕನೂ ಆದ ಹೇ ಭಗವಂತ ! ಎಂಬುದೇ ಆರನೆಯ ಸಂಬೋಧನೆಯ ಅರ್ಥ.

೩೦. ಏಳನೆಯ ಸಂಬೋಧನೆಯ ವಿವರಣೆ : ಮೇಲೆ ಹೇಳಿದ 'ಪ್ರಾದೇಶ'ನಾಮಕ ಭಗವದ್ರೂಪವಲ್ಲದೆ 'ಮೂಲೇಶ' ಮತ್ತು 'ಅಗ್ರೇಶ' ಎಂಬ ಬೇರೆ ಎರಡು ರೂಪಗಳೂ ಹೃದಯದಲ್ಲೇ ಸನ್ನಿಹಿತವಾಗಿವೆಯೆಂದು ಬೃಹದ್ಭಾಷ್ಯೋದಾಹೃತ (೬ ಅಧ್ಯಾ. ೧ ಬ್ರಾ. ೭ ಮಂ) ಪ್ರಮಾಣದಲ್ಲೇ (ಮುಂದೆ) ಹೀಗೆ ಪ್ರತಿಪಾದಿತವಾಗಿದೆ—

1. ಹೃದಿ, ಅಯತೇ ವ್ಯಾಪ್ಯ ತಿಷ್ಠತೀತಿ ಹೃದಯಃ । ಹೃತ್+ಅಯ=ಹೃದಯ
2. ಹೃದಯೇ ಸರ್ವಶೋ ವ್ಯಾಪೀ–ಬೃಹದ್ಭಾಷ್ಯ

ಹೃತ್ಕರ್ಣಿಕಾ*ಮೂಲಗತಃ ಸ್ವಾಂ (ಸೋಂ)ಗುಷ್ಠಾಗ್ರಪ್ರಮಾಣಕಃ ।
ಮೂಲೇಶ ಇತಿ ನಾಮಾಸ್ಮಿನ್ ಸರ್ವೇ ಜೀವಾಃ ಪ್ರತಿಷ್ಠಿತಾಃ ॥ ೨ ॥

(ಅರ್ಥ) ಹೃದಯಕಮಲದ ಕರ್ಣಿಕೆಯ (ಅಂಡಕೋಶದ ಪೀಠದ) ಬುಡದಲ್ಲಿ ತನ್ನ ಹೆಬ್ಬೆಟ್ಟಿನಷ್ಟು ಗಾತ್ರವುಳ್ಳ ಮೂಲೇಶನೆಂಬ ಹೆಸರುಳ್ಳ ಭಗವದ್ರೂಪವು ಇರುತ್ತದೆ. ಈ ಮೂಲೇಶನಲ್ಲೇ ಸಕಲಜೀವರೂ ಆಶ್ರಿತರಾಗಿದ್ದಾರೆ. (ಮೂಲ–ಬುಡಕ್ಕೆ, ಈಶ–ಒಡೆಯನಾದ್ದರಿಂದ ಅವನಿಗೆ ಮೂಲೇಶ ಎಂಬ ಹೆಸರು ಅನ್ವರ್ಥವಾಗಿದೆ.)

ಅಂಗುಷ್ಠಮಾತ್ರೋ ಪುರುಷೇ ಕರ್ಣಿಕಾಗ್ರಸ್ಥಿತೋ ಹರಿಃ ।
ಪ್ರವಿಶಂತಿ ಸುಷುಪ್ತಾ ತು ಪ್ರಬುಧ್ಯಂತೇ ತತಸ್ತ್ವಥಾ ॥ ೩ ॥
ಸೋಽಯಂ ಶ್ರೀರೂಪೋ ಭಗವಾನ್ ಹೃದಯಾಖ್ಯಃ
ಪ್ರಕೀರ್ತಿತಃ ॥ ೪ ॥

(ಅರ್ಥ) ಹೃದಯಕಮಲದ ಕರ್ಣಿಕೆಯ* ತುದಿಯಲ್ಲಿ ಹೆಬ್ಬೆಟ್ಟಿನ ಗಾತ್ರದಷ್ಟಿರುವ 'ಅಗ್ರೇಶ'ನಾಮಕನಾದ ಭಗವಂತನಲ್ಲೇ ಸಕಲ ಜೀವರೂ ಗಾಢನಿದ್ರಾಕಾಲದಲ್ಲಿ (ಸುಷುಪ್ತ್ಯವಸ್ಥೆಯಲ್ಲಿ) ಹೋಗಿ ಆಶ್ರಿತರಾಗಿರುತ್ತಾರೆ ಮತ್ತು ಅವನಿಂದಲೇ ಎಚ್ಚರಗೊಳ್ಳುತ್ತಾರೆ. ಹೀಗೆ ಹೃದಯದಲ್ಲಿರುವ ಮೂರು ಭಗವದ್ರೂಪಗಳಿಗೂ (ಪ್ರಾದೇಶ, ಮೂಲೇಶ, ಅಗ್ರೇಶ) ಹೃದಯವೆಂಬ ವ್ಯವಹಾರವೇ ಸಲ್ಲುತ್ತದೆ. (ಅಗ್ರ–ತುದಿಯು, ಈಶ–ಒಡೆಯನಾದ್ದರಿಂದ ಅವನಿಗೆ 'ಅಗ್ರೇಶ'–ನೆಂಬ ಹೆಸರು ಅನ್ವರ್ಥವಾಗಿದೆ.)

ಈ ಪೈಕಿ ಮೂಲೇಶನೆಂಬ ಹೃದಯಕಮಲದ ಕರ್ಣಿಕೆಯ ಮೂಲ (ಬುಡ)ದಲ್ಲಿರುವ ಭಗದ್ರೂಪವನ್ನು ಕುರಿತೇ ಏಳನೆಯ ಸಂಬೋಧನೆ ಮಾಡಲಾಗಿದೆ.

೩೧. ಮೂಲೇಶನ ಬಗ್ಗೆ ಹೆಚ್ಚಿನ ವಿಚಾರ : ಮೂಲೇಶ ಎಂಬ ಭಗವದ್ರೂಪವು ಹೃದಯಕಮಲದ ಕರ್ಣಿಕೆಯ ಬುಡದಲ್ಲಿ ಇರುತ್ತಾನೆಂದು ಬೃಹದ್ಭಾಷ್ಯದ ವಾಕ್ಯ ತಿಳಿಸುತ್ತದೆ. ಆದರೆ ಹೃದಯಕಮಲವೇ—ಸ್ಥೂಲದೇಹದ ಹೃದಯಕಮಲವೆಂದೂ, ಸ್ವರೂಪದೇಹದ ಹೃದಯಕಮಲವೆಂದೂ ಎರಡು ಇವೆ. ಆದ್ದರಿಂದ ಎರಡು ಹೃದಯಕಮಲಗಳ ಕರ್ಣಿಕೆಗಳ ಬುಡದಲ್ಲೂ ಬೇರೆ ಬೇರೆ ಎರಡು 'ಮೂಲೇಶ' ನಾಮಕ ಭಗವದ್ರೂಪಗಳಿವೆಯೆಂಬ ಅಭಿ

*ಕರ್ಣಿಕಾ ಎಂದರೆ ಪದ್ಮದ ದಳಗಳ ಮಧ್ಯಭಾಗದಲ್ಲಿರುವ ಪರಾಗಕೋಶದ ನಡುವಿನ ಪೀಠ ಎಂದರ್ಥ.

೭. ದೇಹಾಂತರ್ಗತ—ದೇಹಾಂಗುಷ್ಠ ಪರಿಮಿತ–ಜೀವಾಂತರ್ಗತ — ಜೀವಾಂಗುಷ್ಠ ಪರಿಮಿತ— ಸ್ವಹೃದಯಕಮಲಕರ್ಣಿಕಾಮೂಲಸ್ಥಿತ ಮೂಲೇಶಾತ್ಮಕ ;

ಪ್ರಾಯವನ್ನು ಪ್ರಕಟಪಡಿಸುತ್ತಾ ಶ್ರೀರಾಯರು 'ಹೃದಯಕಮಲಕರ್ಣಿಕಾಮೂಲ ಸ್ಥಿತ' ಎಂಬುದಕ್ಕೆ ಎರಡು ಬೇರೆ ಬೇರೆ ವಿಶೇಷಣಗಳನ್ನೇ ಕೊಟ್ಟು ಸ್ಪಷ್ಟಪಡಿಸಿದ್ದಾರೆ. ಇಲ್ಲದಿದ್ದರೆ ಒಂದು ಅಕ್ಷರವನ್ನೂ ವ್ಯರ್ಥವಾಗಿ ಉಪಯೋಗಿಸದ ರಾಯರು ಇಷ್ಟು ಪದಗಳನ್ನು ಎಂದಿಗೂ ಪ್ರಯೋಗಿಸುತ್ತಿರಲಿಲ್ಲ. ಜೊತೆಗೆ ಬೃಹದ್ಭಾಷ್ಯೋದಾಹೃತ ಪ್ರಮಾಣದಲ್ಲಿ 'ಸ್ವಾಂಗುಷ್ಠಾಗ್ರಪ್ರಮಾಣಕಃ' ಎಂದು ಹೇಳಿದೆಯೇ ಹೊರತಾಗಿ ಅಂಗುಷ್ಠದ ಪ್ರಮಾಣವನ್ನು ಹೇಳಲಿಲ್ಲ. ಅದರ ವಿವರವನ್ನು ಕಠೋಪನಿಷದ್ಭಾಷ್ಯದಲ್ಲಿ ಹೇಳಿದ (೨ ಅಧ್ಯಾ. ೩ ವಲ್ಲಿ, ೧೭ನೇ ಮಂತ್ರ) "ದೇಹಾಂಗುಷ್ಠಮಿತೋ ದೇಹೇ ಜೀವಾಂಗುಷ್ಠಮಿತೋ ಹೃದಿ' ಎಂಬ ಪ್ರಮಾಣವು ತಿಳಿಸುತ್ತದೆ. ಅದನ್ನೇ ಶ್ರೀರಾಯರು (ಅ) 'ದೇಹಾಂತರ್ಗತ ದೇಹಾಂಗುಷ್ಠಪರಿಮಿತ' ಎಂದೂ (ಆ) ಜೀವಾಂತರ್ಗತ–ಜೀವಾಂಗುಷ್ಠಪರಿಮಿತ' ಎಂದೂ ಬಿಡಿಸಿ ತೋರಿಸಿದ್ದಾರೆ.(ಅ) ಸ್ಥೂಲದೇಹದ ಹೃದಯಕಮಲವು ಸ್ಥೂಲ ದೇಹದ (ಬಲಗೈ) ಹೆಬ್ಬೆಟ್ಟಿನ ಅಳತೆಯುಳ್ಳದ್ದಾಗಿರುತ್ತದೆಯೆಂದೂ, (ಆ) ಜೀವನ ಸ್ವರೂಪದೇಹದಲ್ಲಿರುವ ಹೃದಯಕಮಲವು ಆ ಜೀವನ ಸ್ವರೂಪದೇಹದ (ಬಲಗೈ) ಹೆಬ್ಬೆಟ್ಟಿನಷ್ಟು ಅಳತೆಯುಳ್ಳದ್ದಾಗಿ ಬಹಳ ಸೂಕ್ಷ್ಮವಾಗಿರುತ್ತದೆಯೆಂದೂ ತಿಳಿಸುತ್ತಾರೆ.

ಈ ಪ್ರಕಾರ ಎರಡು ಬೇರೆ ಬೇರೆ ಅಳತೆಗಳುಳ್ಳ ಎರಡು ಹೃದಯಕಮಲಗಳ ಕರ್ಣಿಕೆಗಳ ಬುಡದಲ್ಲೂ ಇರುವ 'ಮೂಲೇಶ' ನಾಮಕನಾದ ಭಗವಂತನೇ ಎಂಬುದೇ ಈ ಏಳನೆಯ ಸಂಬೋಧನೆಯ ಅರ್ಥ. ಇಷ್ಟು ತಿಳಿದುಕೊಂಡರೆ ಈಗ ಮೂಲದ ಅರ್ಥ ಸ್ಪಷ್ಟವಾಗಿ ತಿಳಿಯುತ್ತದೆ, ನೋಡಿ.

೩೨. ಏಳನೆಯ ಸಂಬೋಧನೆಯ ಪದಶಃ ಅರ್ಥ : ದೇಹಾಂತರ್ಗತ–ಸ್ಥೂಲ ದೇಹದಲ್ಲಿರುವ, **ದೇಹಾಂಗುಷ್ಠ–ಪರಿಮಿತ**–ಸ್ಥೂಲ ದೇಹದ (ಬಲಗೈ) ಹೆಬ್ಬೆಟ್ಟಿನಷ್ಟೇ ಅಳತೆಯುಳ್ಳ, **ಸ್ವಹೃದಯಕಮಲ**–ತನ್ನ ಸ್ಥೂಲ ದೇಹದ ಹೃದಯಕಮಲದ, **ಕರ್ಣಿಕಾಮೂಲ ಸ್ಥಿತ**–ಅಂಡಕೋಶದ ಪೀಠದ ಬುಡದಲ್ಲಿರುವ, **ಮೂಲೇಶಾತ್ಮಕ**–ಮೂಲೇಶನೆಂದು ಹೆಸರುಳ್ಳ ಶ್ರೀಹರಿಯ (ಪ್ರಥಮ) ರೂಪವೇ ; **ಜೀವಾಂತರ್ಗತ**–ಜೀವನ ಸ್ವರೂಪದೇಹದಲ್ಲಿರುವ,

ಜೀವಾಂಗುಷ್ಠ ಪರಿಮಿತ–ಜೀವನ ಸ್ವರೂಪದೇಹದ (ಬಲಗೈ)ಹೆಬ್ಬೆಟ್ಟಿನಷ್ಟೇ ಪರಿಮಾಣವುಳ್ಳ (ಅಳತೆಯುಳ್ಳ). **ಸ್ವಹೃದಯಕಮಲ**–ತನ್ನ ಸ್ವರೂಪ ದೇಹದ ಹೃದಯಕಮಲದ, **ಕರ್ಣಿಕಾಮೂಲಸ್ಥಿತ**–ಕರ್ಣಿಕೆಯ ಬುಡದಲ್ಲಿ ರುವ. **ಮೂಲೇಶಾತ್ಮಕ**–ಪರಮಸೂಕ್ಷ್ಮವಾದ ಮೂಲೇಶನೆಂಬ ಹೆಸರಿನಿಂದ ಜೀವನಿಗೆ ಆಶ್ರಯನಾಗಿರುವ ಹೇ ಭಗವಂತನ ಎರಡನೆಯ ರೂಪವೇ–ಎಂಬುದು ಏಳನೆಯ ಸಂಬೋಧನೆಯ ಅರ್ಥ.

೩೩. ತಾತ್ಪರ್ಯ : ನಮ್ಮ ದೇಹದಲ್ಲಿ ಎರಡು ಹೃದಯಗಳಿರುತ್ತವೆ. ಸ್ಥೂಲದೇಹದಲ್ಲಿ ಒಂದು ಹೃದಯವೂ ಜೀವನ ಸ್ವರೂಪದೇಹದಲ್ಲಿ ಇನ್ನೊಂದೂ ಇರುತ್ತವೆ. ಆ ಹೃದಯಗಳು ಕಮಲದ ಮೊಗ್ಗಿನ ಆಕಾರವುಳ್ಳವಾದ್ದರಿಂದ ಅವನ್ನು ಹೃದಯಕಮಲವೆಂದು ಕರೆಯುವುದು ವಾಡಿಕೆ. ಸ್ಥೂಲದೇಹದ ಹೃದಯವು ಈ ಸ್ಥೂಲದೇಹ ಬಂದಾಗ ಈ ಜನ್ಮದಲ್ಲಿ ಮಾತ್ರ ಬಂದಿದ್ದು ಈ ದೇಹ ದೊಡನೆಯೇ ಮರಣಾನಂತರ ನಾಶವಾಗಿ ಹೋಗುತ್ತದೆ. ಹೀಗೆ ಬೇರೆ ಬೇರೆ ಜನ್ಮ ಬಂದಂತೆಲ್ಲಾ ಈ ಸ್ಥೂಲದೇಹದ ಹೃದಯಗಳೂ ಹೊಸ ಹೊಸದಾಗಿ ಬಂದು ದೇಹದೊಡನೆ ಅವೂ ನಾಶವಾಗುತ್ತವೆ. ಈ ಸ್ಥೂಲದೇಹದ ಹೃದಯವು ಆ ದೇಹದ ಹೆಬ್ಬೆಟ್ಟಿನಷ್ಟು ದಪ್ಪವಾಗಿರುತ್ತದೆ. ಅದರ ಕರ್ಣಿಕೆಯ (ಮಧ್ಯದ ಪೀಠದ) ಬುಡದಲ್ಲಿ 'ಮೂಲೇಶ' ಎಂಬ ಭಗವಂತನ ಒಂದು ರೂಪವಿರುತ್ತದೆ. ಅದೇ (ಮೂಲೇಶನೇ) ಹೃದಯದ ಸಕಲಕಾರ್ಯಗಳನ್ನೂ ನಡೆಸುತ್ತಾ ದೇಹ ಧಾರಣೆಗೆ ಕಾರಣವಾಗಿದೆ. ಮರಣಾನಂತರ ದೇಹವೇ ನಾಶವಾದಾಗ ಈ ಹೃದಯವೂ ನಾಶವಾಗುವುದರಿಂದ ಸ್ಥೂಲದೇಹದ ಮೂಲೇಶನು ಸ್ವರೂಪದೇಹದ ಮೂಲೇಶನಲ್ಲಿ ಸೇರಿಹೋಗುತ್ತಾನೆಂದು ತಿಳಿಯಬೇಕು.

ಇನ್ನು ಜೀವನ ಸ್ವರೂಪದೇಹದಲ್ಲೂ ಬೇರೊಂದು ಹೃದಯಕಮಲವಿರುತ್ತದೆ. ಜೀವನ ಸ್ವರೂಪದೇಹವೂ ಅನಾದಿನಿತ್ಯವಾದ್ದರಿಂದ ಈ ಹೃದಯಕಮಲವೂ ಅನಾದಿನಿತ್ಯವಾದುದು. ಆದ್ದರಿಂದ ಈ ಸ್ವರೂಪದೇಹಕ್ಕಾಗಲೀ ಅದರ ಹೃದಯಕ್ಕಾಗಲಿ ಹೊಸದಾಗಿ ಉತ್ಪತ್ತಿಯಾಗುವ ಅಥವಾ ನಾಶವಾಗುವ ವಿಚಾರವೇ ಇಲ್ಲ. ಜೀವನಿಗೆ ಹೊಸ ಹೊಸ ದೇಹಗಳು ಬಂದಂತೆ ಈ ಸ್ವರೂಪದೇಹಕ್ಕೂ ಹೊಸ ಹೊಸ **'ಸ್ಥೂಲದೇಹಗಳು'** ಬರುತ್ತವೆಯೇ ಹೊರತು ಈ ಮೂಲ ಸ್ವರೂಪದೇಹವೂ ಹೃದಯವೂ ಹಾಗೆಯೇ ಇರುತ್ತವೆ. ಆದರೆ ಸ್ಥೂಲದೇಹವು ಹೇಗೆ ದೊಡ್ಡದೋ ಹಾಗೆ ಅದರ ಹೃದಯವೂ ಅಂಗುಷ್ಠಗಾತ್ರವಾಗಿ ದೊಡ್ಡದಾಗಿರುತ್ತದೆ. ಜೀವನ ಸ್ವರೂಪದೇಹವೇ ಅತ್ಯಂತ ಸೂಕ್ಷ್ಮವಾಗಿರುವುದರಿಂದ

೮. ತಾವತ್ಪರಿಮಿತ–ಕರ್ಣಿಕಾಗ್ರಸ್ಥಿತ–ಬಿಂಬರೂಪೇ ಜೀವೇಶ !

ಅದರ ಹೃದಯ ಕಮಲವು ಅದರ ಹೆಬ್ಬೆಟ್ಟಿನಷ್ಟೇ ಇದ್ದು ಕಣ್ಣಿಗೆ ಗೋಚರವಾಗದಷ್ಟು ಅತ್ಯಂತ ಚಿಕ್ಕದಾಗಿರುತ್ತದೆ. ಆ ಸ್ವರೂಪದೇಹದ ಹೃದಯಕಮಲದ ಕರ್ಣಿಕೆಯ ಬುಡದಲ್ಲಿರುವ ಮೂಲೇಶನಂತೂ ಅತ್ಯಂತ ಚಿಕ್ಕರೂಪವುಳ್ಳವನು ; **ಅಣೋರಣೀಯಾನ್**. ಈ ಮೂಲೇಶನೇ ಜೀವನಿಗೆ ಆಧಾರಭೂತನಾಗಿ ಅನಾದಿ ಕಾಲದಿಂದ ಇದ್ದು ಮೋಕ್ಷಾನಂತರವೂ ಜೀವನ ಜೊತೆಯಲ್ಲೇ ಇರುತ್ತಾನೆ. ಹೀಗೆ ಎರಡು ಬೇರೆ ಬೇರೆ ಮೂಲೇಶಗಳೂ ನಮ್ಮ ಧ್ಯಾನಕ್ಕೆ ಯೋಗ್ಯವಾಗಿ ಧ್ಯೇಯ ಮೂರ್ತಿಗಳಾಗಿವೆ. ಆದ್ದರಿಂದ ಆ ಎರಡನ್ನೂ ಕುರಿತು 'ಮೂಲೇಶಾತ್ಮಕ' ಎಂದು ಸಂಬೋಧನೆ ಮಾಡಿದ್ದಾರೆಂದು ತಿಳಿಯಬೇಕು.

೩೪. ಎಂಟನೆಯ ಸಂಬೋಧನೆಯ ವಿವರಣೆ : ನಮ್ಮ ಜೀವದ ಸ್ವರೂಪದೇಹಕ್ಕೆ ಸಂಬಂಧಿಸಿದ ಹೃದಯಕಮಲದ ಕರ್ಣಿಕೆಯ ಬುಡಭಾಗದಲ್ಲಿ (ಮೂಲಭಾಗದಲ್ಲಿ) ಅತಿಸೂಕ್ಷ್ಮರೂಪಿಯಾದ 'ಮೂಲೇಶ'ನೆಂಬ ಭಗವದ್ರೂಪವು ಇರುವಂತೆ ಆ ಕರ್ಣಿಕೆಯ ಅಗ್ರ (ತುದಿಯ) ಭಾಗದಲ್ಲಿ ನಮ್ಮ ಬಿಂಬರೂಪಿಯಾದ 'ಜೀವೇಶ'ನೆಂಬ ಭಗವದ್ರೂಪವಿದೆ. ಈ ಎಂಟನೆಯ ಸಂಬೋಧನೆಯಲ್ಲಿ ಪರಮಮುಖ್ಯನಾದ ಬಿಂಬಮೂರ್ತಿಯಾದ ಆ 'ಜೀವೇಶ'ನಾಮಕ ಪರಮಾತ್ಮನನ್ನೇ ಸಂಬೋಧಿಸಿ ಈ ಸಂಬೋಧನಾಭಾಗವನ್ನು ಸಮಾಪ್ತಿ ಮಾಡುತ್ತಾರೆ. ಆರನೇ–ಏಳನೇ ಸಂಬೋಧನೆಗಳಲ್ಲಿ ಹೇಳಿದ ವಿಷಯಗಳೇ ಈ ಭಾಗಕ್ಕೂ ಹಿನ್ನೆಲೆಯಾಗಿರುವುದರಿಂದ ಈ ಸಂಬೋಧನೆಯೂ ಸುಲಭವಾಗಿಯೇ ಅರ್ಥವಾಗುವುದು. ಆದ್ದರಿಂದ ನೇರವಾಗಿ ಪದಶಃ ಅರ್ಥಕ್ಕೇ ಹೋಗಬಹುದು.

೩೫. ಪದಶಃ ಅರ್ಥ–ತಾವತ್ಪರಿಮಿತ : ಅಷ್ಟೇ ಪರಿಮಿತಿ (ಅಳತೆ) ಯುಳ್ಳ , ಎಂದರೆ ಸ್ವರೂಪದೇಹದ ಹೃದಯಕಮಲಕ್ಕೆ ಸಂಬಂಧಿಸಿದ್ದಾದ ಕಾರಣ "ಜೀವಾಂಗುಷ್ಠಮಿತೋ ಹೃದಿ" ಎಂಬ ಪ್ರಮಾಣಾನುಸಾರ ಜೀವನ ಸ್ವರೂಪದೇಹದ ಹೆಬ್ಬೆಟ್ಟಿನಷ್ಟೇ ಅಳತೆಯುಳ್ಳ, **ಕರ್ಣಿಕಾಗ್ರಸ್ಥಿತ**–ಸ್ವರೂಪದೇಹದ ಹೃದಯಕಮಲದ ಕರ್ಣಿಕೆಯ (ಪರಾಗಕೋಶದ ನಡುಪೀಠದ) ತುದಿಯಲ್ಲಿರುವ ; **ಬಿಂಬರೂಪೇ**–ಬಿಂಬಮೂರ್ತಿ ರೂಪಿಯಾದ, **ಜೀವೇಶ**–ಜೀವನ ಸ್ವರೂಪದೇಹಕ್ಕೇ ಒಡೆಯನಾದ್ದರಿಂದ ಜೀವೇಶ ಎಂದು ಕರೆಯಲ್ಪಡುವ ಹೇ ಭಗವಂತನೇ ಎಂದು ಅರ್ಥ. (ಜೀವ–ಜೀವನಿಗೆ, ಈಶ–ಒಡೆಯ.)

೩೬. ತಾತ್ಪರ್ಯ : ಜೀವನ ಸ್ವರೂಪದೇಹದ ಹೃದಯಕಮಲದ

ಕರ್ಣಿಕೆಯ ಅಗ್ರ (ತುದಿಯ) ಭಾಗದಲ್ಲಿಯೂ ಭಗವಂತನ ಬೇರೆ ಒಂದು ರೂಪವಿದೆ. ಇದು ಜೀವನ ಸ್ವರೂಪದೇಹದ ಹೆಬ್ಬೆಟ್ಟಿನ ಗಾತ್ರದಷ್ಟೇ—ಬಹಳ ಸೂಕ್ಷ್ಮವಾಗಿ ಇರುತ್ತದೆ. ಈ ಭಗವದ್ರೂಪವೇ ನಮ್ಮ ಬಿಂಬರೂಪಿಪರಮಾತ್ಮ. ಇವನು ನಮ್ಮ ಜೀವಕ್ಕೇ ಒಡೆಯನಾದ್ದರಿಂದ ಇವನಿಗೆ 'ಜೀವೇಶ'ನೆಂದು ಹೆಸರು. ಈ ಪ್ರಕಾರ ನಮ್ಮ ಜೀವನ ಸ್ವರೂಪದೇಹದ ಹೃದಯಕಮಲದ ಕರ್ಣಿಕಾಗ್ರದ ತುದಿಯಲ್ಲಿ ನೆಲೆಸಿರುವ ಸ್ವರೂಪದೇಹದ ಹೆಬ್ಬೆಟ್ಟಿನ ಗಾತ್ರದಷ್ಟೇ ಆಕಾರದಿಂದಿರುವ ಜೀವೇಶನಾಮಕನಾದ ಬಿಂಬಮೂರುತಿಯಾದ ಹೇ ಭಗವಂತನೆ ಎಂಬುದೇ ಈ ಎಂಟನೆಯ ಸಂಬೋಧನೆಯ ಮುಖ್ಯಾಂಶ. ಇಲ್ಲಿಗೆ ಸಂಬೋಧನಾ ಭಾಗವೆಂಬ ಪೂರ್ವಾರ್ಧವು ಮುಕ್ತಾಯವಾಯಿತು.

II. ಪ್ರಾರ್ಥನಾಭಾಗದ ವಿವರಣೆ

೩೭. ಕರ್ಮ ಮಾಡಲೇಬೇಕು, ಗತ್ಯಂತರವಿಲ್ಲ : ಮನುಷ್ಯ ಬದುಕಿ ಬಾಳಿ ನೂರು ವರ್ಷಗಳವರೆಗೆ ಬದುಕಿದ್ದರೂ ಉದ್ದಕ್ಕೂ ಸ್ವವರ್ಣಾಶ್ರಮೋಚಿತವಾದ ಕರ್ಮಗಳನ್ನು ಮಾಡುತ್ತಾ ಇರಬೇಕೆಂಬುದು "ಕುರ್ವನ್ನೇವೇಹ ಕರ್ಮಾಣಿ ಜಿಜೀವಿಷೇಚ್ಛತಗ್ ಸಮಾಃ" ಎಂಬ ಈಶಾವಾಸ್ಯಶ್ರುತಿಯ (ಈ. ಉ. ೨ ಮಂತ್ರ) ಶಾಸನ. ಆದರೆ ಎಷ್ಟು ಎಚ್ಚರಿಕೆಯಿಂದ ಮಾಡಿದರೂ ಹೆಜ್ಜೆ ಹೆಜ್ಜೆಗೂ ಸಾವಿರಾರು ತಪ್ಪುಗಳು ಆಗೇ ಆಗುತ್ತವೆ. ಹನ್ನೆರಡು ವರ್ಷ ವಯಸ್ಸಾಗುವುದೇ ತಡ, ಪ್ರತಿಯೊಬ್ಬನೂ ಒಂದೊಂದು ದಿನಕ್ಕೆ ಕನಿಷ್ಠ ಹತ್ತು ಜನ್ಮ ಎತ್ತುವಷ್ಟು ಪಾಪಗಳನ್ನು ಮಾಡುತ್ತಾನೆಂದು ಶಾಸ್ತ್ರವೇ ಹೇಳುತ್ತದೆ. ಆದರೂ ಕರ್ಮಮಾಡದೆ ಬಿಡುವಂತಿಲ್ಲ, ಮಾಡಿಯೇ ತೀರಬೇಕು. ಹಾಗಾದರೆ ಇದಕ್ಕೆ ಪರಿಹಾರವೇನು ? ಎಂದರೆ ಅದನ್ನೂ ಆ ಶ್ರುತಿಯೇ 'ನ ಕರ್ಮ ಲಿಪ್ಯತೇ ನರೇ" ಎಂದು ಹೇಳುತ್ತದೆ. ಅದಕ್ಕೆ ಹೀಗೆ ಅರ್ಥ–ಮಾಡಿದ್ದು ತಪ್ಪೋ ಒಪ್ಪೋ ಎಲ್ಲವನ್ನೂ ಆ ಭಗವಂತನಿಗೆ ಸಮರ್ಪಿಸಿಬಿಡು. ಆಗ ನೀನು ಮನುಷ್ಯಮಾತ್ರನೇ ಆದರೂ ನಿನ್ನನ್ನು ಆ ಕರ್ಮಪ್ರಾಪ್ತ ಪಾಪಗಳು ಬಾಧಿಸುವುದಿಲ್ಲ ಎಂದು ಅರ್ಥ. ಇದನ್ನು ತಿಳಿದೇ ಶಾಸ್ತ್ರಮರ್ಯಾದಾಭಿಜ್ಞರಾದ ಹಿರಿಯರು

ಅಪರಾಧಸಹಸ್ರಾಣಿ ಕ್ರಿಯಂತೇಹರ್ನಿಶಂ ಮಯಾ ।
ತಾನಿ ಸರ್ವಾಣಿ ಮೇ ದೇವ ! ಕ್ಷಮಸ್ವ ಪುರುಷೋತ್ತಮ ॥

ಎಂದರೆ ಹೇ ಭಗವಂತ, ಹಗಲೂ ರಾತ್ರಿಯೂ ನಾನು ಲೆಕ್ಕವಿಲ್ಲದಷ್ಟು ಸಾವಿರಾರು ತಪ್ಪುಗಳನ್ನು ಮಾಡುತ್ತಿರುತ್ತೇನೆ. ಅವೆಲ್ಲವನ್ನೂ ಕ್ಷಮಿಸು ಎಂದು ಮೊರೆ

ಯಿಟ್ಟುಕೊಳ್ಳುತ್ತಾರೆ. ಅರ್ಥಾತ್ ಸಕಲ ಕರ್ಮಗಳನ್ನೂ ಭಗವಂತನಲ್ಲಿ ಸಮರ್ಪಿಸಿದರೆ ನಾವು ಕರ್ಮಬಂಧನದಿಂದ ಪಾರಾಗುತ್ತೇವೆ.

೩೮. ಸಕಲ ಕರ್ಮಗಳನ್ನೂ ಸಮರ್ಪಿಸಬೇಕು: 'ನೀನು ಮಾಡಿದ್ದು ತಪ್ಪೋ ಒಪ್ಪೋ ಸಕಲವನ್ನೂ ನನ್ನಲ್ಲಿ ಸಮರ್ಪಿಸು' ಎಂದು ಶ್ರೀಕೃಷ್ಣನೇ "ಯತ್ಕರೋಷಿ" ಎಂಬ ಶ್ಲೋಕದಲ್ಲಿ[1] ಅನೇಕ ಯುಚ್ಛಬ್ದಗಳ ಪ್ರಯೋಗದಿಂದ ಹೇಳಿದ್ದಾನೆ. ಹಾಗೆ ತಪ್ಪು-ಒಪ್ಪು, ಪುಣ್ಯ-ಪಾಪಗಳೆಂಬ ದ್ವಂದ್ವಕರ್ಮಗಳನ್ನು ಪರಮಾತ್ಮನಿಗೆ ಸಮರ್ಪಿಸದಿದ್ದರೆ, ಶ್ರೀಸಂಕರ್ಷಣ ಒಡೆಯರು ಹರಿಕಥಾಮೃತಸಾರದ ಟೀಕೆಯಲ್ಲಿ (೧೮ನೇ ಸಂಧಿಯ ೩೧ನೇ ಪದ್ಯದ ಅವತಾರಿಕೆಯಲ್ಲಿ) ತೋರಿಸಿರುವಂತೆ ನಾವು ಇತೋ ಭ್ರಷ್ಟ ತತೋ ಭ್ರಷ್ಟರಾಗುತ್ತೇವೆ. ಏಕೆಂದರೆ ಭಗವಂತನಿಗೆ ಸಮರ್ಪಿಸದಿದ್ದರೆ "ಪುಣ್ಯವು ಉಳಿಯೋದಿಲ್ಲ, ಪಾಪವೂ ಅಳಿಯೋದಿಲ್ಲ. ಆದ್ದರಿಂದ ಪುಣ್ಯ ಉಳಿಯಬೇಕಾದರೂ ಪಾಪ ಅಳಿಯಬೇಕಾದರೂ ದ್ವಂದ್ವಕರ್ಮ ಪರಮಾತ್ಮನಿಗೆ ಸಮರ್ಪಿಸಬೇಕು." ಈ ವಿಚಾರವನ್ನೇ ಜಗನ್ನಾಥ ದಾಸರು 'ಇಷ್ಟಾನಿಷ್ಟಕರ್ಮಫಲ ಸಾರಭೋಕ್ತನಿಗರ್ಪಿಸಲು ಸ್ವೀಕಾರ ಮಾಡುವ' ನೆಂದೂ (೧೮ ಸಂ. ೩೭ ಪದ್ಯ) "ನಿರ್ಮಲನು ನೀನಾಗಿ ಕರ್ಮ ವಿ-ಗಿ ಕರ್ಮಗಳನು ನಿರಂತರದಲಿ ಸು-ಗಿ ಧರ್ಮನಾಮಕಗರ್ಪಿಸುತ ನಿಷ್ಕಲುಷ ನೀನಾಗು" (೧೯ಸಂ. ೧೩ದ) ಎಂದೂ ಹರಿಕಥಾಮೃತಸಾರದಲ್ಲಿ ಹೇಳಿದ್ದಾರೆ.

೩೯. ಶುಭಕರ್ಮಗಳನ್ನೇಕೆ ಅರ್ಪಿಸಬೇಕು : ನಾವು ಮಾಡಿದ ಪುಣ್ಯಕರ್ಮಗಳನ್ನು ಭಗವಂತನಲ್ಲಿ ಸಮರ್ಪಿಸದಿದ್ದರೆ ಆಗುವ ಹಾನಿಯನ್ನು ಸಂಕರ್ಷಣ ಒಡೆಯರು ಉದಹರಿಸಿರುವ ಒಂದು ಶ್ಲೋಕವು (೧೮ ಸಂ. ೩೧ ಪದ್ಯ) ಲೌಕಿಕ ದೃಷ್ಟಾಂತದೊಡನೆ ಸ್ಪಷ್ಟವಾಗಿ ತೋರಿಸಿಕೊಡುತ್ತದೆ.

ಯಥಾ ಹ್ಯನಾಥವೃಕ್ಷಾದಿ ಪೀಡ್ಯತೇ ನಿಖಿಲೈರಪಿ ।...
ತಸ್ಮಿನ್ನನರ್ಪಿತಂ ಪುಣ್ಯಂ ತದ್ವಿಲುಂಪಂತಿ ದಾನವಾಃ ॥

(ಅರ್ಥ) ಬೀದಿಯ ಸಾಲುಮರಗಳಲ್ಲಿ ಬಿಟ್ಟ ಹಣ್ಣು-ಹಂಪಲುಗಳನ್ನು ಸಿಕ್ಕಿದವರು ಹೇಗೆ ದೋಚಿಕೊಂಡು ಹೋಗಿಬಿಡುತ್ತಾರೋ ಹಾಗೆಯೇ ಭಗವಂತನಿಗೆ ಸಮರ್ಪಿಸದೇ ಇರುವ ಪುಣ್ಯವನ್ನು ದೈತ್ಯದಾನವರು ಅಪಹರಿಸಿಕೊಂಡು ಹೋಗುತ್ತಾರೆ. ನಮಗೆ ಏನೂ ಉಳಿಯುವುದಿಲ್ಲ. ಆದಕ್ಕೆ ಪ್ರತಿಯಾಗಿ ಕಾವಲು

1. ಭಗವದ್ಗೀತೆ, ೯ ಅಧ್ಯಾ. ೨೭. ಶ್ಲೋ.

ಗಾರರು ಇರುವ ಮರಗಳನ್ನು ಮುಟ್ಟುವುದಿರಲಿ, ನೋಡುವುದಕ್ಕೂ ಹೇಗೆ ಜನಗಳು ಅಂಜುತ್ತಾರೋ ಹಾಗೆಯೇ ಶ್ರೀಹರಿಗೆ ಸಮರ್ಪಿಸಿದ ಪುಣ್ಯವು ಭದ್ರವಾಗಿರುವುದು ಮಾತ್ರವಲ್ಲ. ಅನಂತವೂ ಆಗುತ್ತದೆ. ಏಕೆಂದರೆ ನಾವು ಮಾಡಿದ ಪುಣ್ಯದಲ್ಲಿ ನಮಗೆ ಸಲ್ಲಬೇಕಾದ ಕಿಂಚಿದ್ಭಾಗವನ್ನು ಶ್ರೀ ಹರಿ ನಮಗೆ ಕೊಟ್ಟು ಮಿಕ್ಕ ಭಾಗವನ್ನೆಲ್ಲಾ ಆ ಪುಣ್ಯಕರ್ಮ ಮಾಡಲು ನಮ್ಮನ್ನು ಪ್ರೇರಣೆಮಾಡಿದ ತತ್ತ್ವಾಭಿಮಾನಿಗಳಿಗೆ ತಾರತಮ್ಯಾನುಸಾರ ಹಂಚಿಬಿಡುತ್ತಾನೆ. ಹೀಗೆ ಆ ಪುಣ್ಯ ಭದ್ರವಾಗಿ ಉಳಿಯುತ್ತದೆ, ಆದಕಾರಣ ನಾವು ಮಾಡುವ ಸಕಲ ಶುಭಕರ್ಮಗಳನ್ನೂ ಭಗವಂತನಲ್ಲಿ ಸಮರ್ಪಿಸಿಲೇ ಬೇಕೆಂದು ಸಿದ್ಧವಾಯಿತು.

೪೦. ಅಶುಭಕರ್ಮಗಳನ್ನೂ ಸಮರ್ಪಿಸಬೇಕು : ಕೆಲವರು ಹೀಗೆ ವಾದಿಸುವುದುಂಟು-ಭಗವಂತನಲ್ಲಿ ಶುಭಕರ್ಮಗಳನ್ನು ಅರ್ಪಿಸಿದರೆ ಹೇಗೆ ಅನಂತವಾಗುವುವೋ ಅದೇ ರೀತಿ ಅಶುಭಕರ್ಮಗಳೂ ಅನಂತವಾಗಿ ಹಾನಿಯಾಗುವುದರಿಂದ ಅವನ್ನು ಅರ್ಪಿಸಬಾರದು ಎನ್ನುವರು. ಆದರೆ ಅವರ ಯುಕ್ತಿಯೇ ಸಮಂಜಸವಾಗಿಲ್ಲ, ಏಕೆಂದರೆ ನಾವು ಅಶುಭಕರ್ಮಗಳನ್ನು 'ಪ್ರೀತ'ನಾಗುವುದಕ್ಕಾಗಿ ಅರ್ಪಿಸುತ್ತಿಲ್ಲ, ಪ್ರತ್ಯುತ ಕ್ಷಮಾಪಣೆ ಕೇಳುವುದಕ್ಕಾಗಿ-ದೋಷವನ್ನು ದೂರ ಮಾಡುವುದಕ್ಕಾಗಿ ಪ್ರಾರ್ಥಿಸುತ್ತಿದ್ದೇವೆ. ಆದಕಾರಣ ಜಗನ್ನಾಥದಾಸರು ಹರಿಕಥಾಮೃತಸಾರದಲ್ಲಿ(ಸಂಧಿ ೧೮, ಪದ್ಯ ೩೪) ಹೇಳುವಂತೆ "ಕಾಯರೊಡಲನಾಳಂಗಳಿಂದ ಮಾತ್ರದಿ ಓಡುವುದು ದುರಿತ ॥" (ಕಾಯರೊಡಲ=ಕಪ್ಪು ಶರೀರವುಳ್ಳ) ಶ್ರೀಕೃಷ್ಣನ ದಾಸರು ಅರ್ಥಾತ್ ಕೃಷ್ಣಾರ್ಪಣ ಎಂದ ಕೂಡಲೇ ಸಕಲ ಪಾಪಗಳೂ ಲೇಪವಾಗದೆ ದೂರ ಓಡುವುವು. ಅಷ್ಟು ಮಾತ್ರವೇ ಅಲ್ಲ ; ನಮ್ಮ ಪುಣ್ಯವನ್ನು ತತ್ತ್ವಾಭಿಮಾನಿ ದೇವತೆಗಳಿಗೆ ಹೇಗೆ ಹಂಚುವನೋ ಅದೇ ಪ್ರಕಾರ ನಮ್ಮ ಪಾಪಗಳನ್ನೂ, ನಮಗೆ ಕೊಡುವ ಅಲ್ಪಭಾಗ ನಮಗೆ ಕೊಟ್ಟು ಮಿಕ್ಕಿದ್ದನ್ನು, ಆ ಪಾಪಕರ್ಮಗಳನ್ನು ಮಾಡುವಂತೆ ನಮ್ಮನ್ನು ಪ್ರೇರಿಸಿದ ಕಲ್ಯಾದಿತತ್ತ್ವಾಭಿಮಾನಿ ದೈತ್ಯರಿಗೆ ಅವರ ತಾರತಮ್ಯಾನುಸಾರ ಹಂಚಿಬಿಡುವನು. ಆದ್ದರಿಂದ ಆ ಪಾಪಗಳು ನಮ್ಮನ್ನು ಬಾಧಿಸುವುದಿಲ್ಲ. ಈ ವಿಚಾರವನ್ನೇ ಹರಿಕಥಾಮೃತಸಾರದಲ್ಲಿ ಹೀಗೆ ಹೇಳಿದ್ದಾರೆ. —"ವಿಧಿ ನಿಷೇಧಗಳೆರಡು ವುರೆಯದೆ । ವುಧುವಿರೋಧಿಯ ಪಾದಕರ್ಪಿಸು-ಗಿ ಲ ದಿತಿ ವುಕ್ಕಳಿಗೀವ ಪುಣ್ಯವ, ಪಾಪ ದೈತ್ಯರಿಗೆ. "(೧೮ಸಂ, ೩೧ ಪ.) (ವುಧುವಿರೋಧಿ-ವುಧುಸೂದನ, ವಿಷ್ಣು. ಅದಿತಿ ವುಕ್ಕಳು=ದೇವತೆಗಳು.) ಜಗನ್ನಾಥದಾಸರ ಹೇಳಿಕೆಗೆ ಹಿನ್ನೆಲೆಯಾಗಿರುವ ಪ್ರಮಾಣಶ್ಲೋಕವನ್ನು ಸಂಕರ್ಷಣ ಒಡೆಯರ ಟೀಕೆಯಲ್ಲಿ ಕಾಣಬಹುದು.

ಸಂಕೀರ್ಣನಾನಾವಿಧಪಾತಕಾನಾಂ
ನಿವೃತ್ತಿಮಿಚ್ಛನ್ ಶರಣಂ ವ್ರಜೇದ್ಧರಿಮ್ ।
ದಯಾಲುರೇತಾನಿ ನಿಬರ್ಹ್ಯ ಶೀಘ್ರಂ
ಗುರೂಣಿ ಪಾಪಾನಿ ಲಘೂಕರೋತಿ ॥

[ಕಠಿನ ಶಬ್ದಾರ್ಥ–**ಸಂಕೀರ್ಣ**-ಸಂಗ್ರಹವಾದ, ಒಟ್ಟಿಗೆ ಸೇರಿದ. **ನಿವೃತ್ತಿ**–ನಿವಾರಣೆ. **ವ್ರಜೇತ್**-ಹೋಗಬೇಕು. **ದಯಾಲುಃ**–ಕೃಪಾಳುವಾದ, ದಯಾಶೀಲನಾದ ಭಗವಂತ **ಏತಾನಿ**-ಇವುಗಳನ್ನು (ಪಾಪಗಳನ್ನು) **ನಿಬರ್ಹ್ಯ**-ಓಡಿಸಿ, ದೂರಮಾಡಿ, **ಗುರೂಣಿ** ಭಾರವಾದುವನ್ನು. **ಲಘೂಕರೋತಿ** ಹಗುರ ಮಾಡುತ್ತಾನೆ.

ತಾತ್ಪರ್ಯ : ನಾನಾವಿಧವಾದ ಅನೇಕ ಪಾಪಗಳು ಒಟ್ಟಿಗೆ ಸೇರಿಕೊಂಡರೆ ಅದನ್ನು ಸುಲಭವಾಗಿ ನಿವಾರಣೆ ಮಾಡಬೇಕಾದರೆ ಭಗವಂತ ವಿಷ್ಣುವನ್ನು ಪೊರೆಹೋಗಬೇಕು. ದಯಾಪೂರ್ಣನಾದ ಆ ಸ್ವಾಮಿಯು ಮಹತ್ತರವಾದ ಆ ಪಾಪಗಳನ್ನೆಲ್ಲಾ (ದೈತ್ಯರಿಗೆ ಹಂಚಿಬಿಟ್ಟು) ನಮ್ಮ ಭಾಗಕ್ಕೆ ಸ್ವಲ್ಪವೇ ಉಳಿಯುವಂತೆ ಮಾಡಿ ಹಗುರ ಮಾಡುತ್ತಾನೆ.

ಆದಕಾರಣ ಅಶುಭಕರ್ಮಗಳನ್ನೂ ಸಹ ಭಗವಂತನಲ್ಲಿ ಸಮರ್ಪಿಸಿ ಕ್ಷಮಾಯಾಚನೆ ಮಾಡಬೇಕು. ಆದರಿಂದ ಪಾಪಗಳ ಉಪಟಳ ಕಡಿಮೆಯಾಗುತ್ತದೆಯೆಂದು ಸಿದ್ಧವಾಯಿತು. ಇಷ್ಟು ವಿಚಾರಗಳನ್ನು ನೆನಪಿಟ್ಟುಕೊಂಡರೆ ಸರ್ವಸಮರ್ಪಣಗದ್ಯದ ಪ್ರಾರ್ಥನಾಭಾಗ ಸುಲಭವಾಗಿ ಅರ್ಥವಾಗುತ್ತದೆ.

೪೧. ಪ್ರಾರ್ಥನಾಭಾಗದಲ್ಲೇ ಎರಡು ಭಾಗವಿದೆ : ಮೇಲೆ ಹೇಳಿದಂತೆ ಶುಭಕರ್ಮಗಳನ್ನು ಸಮರ್ಪಿಸುವ ವಿಧಾನವೇ ಬೇರೆ, ಅಶುಭಕರ್ಮಗಳನ್ನು ಸಮರ್ಪಿಸುವ ವಿಧಾನವೇ ಬೇರೆಯಾದ್ದರಿಂದ ಅದಕ್ಕೆ ಅನುಗುಣವಾಗಿ ಪ್ರಾರ್ಥನಾಭಾಗವೂ ಎರಡು ಪ್ರಕಾರ ಬೇರೆಬೇರೆಯಾಗಿಯೇ ಇದೆ. "ತ್ವದಧಿಷ್ಠಾನಾದಿ ಕಾಲತಃ". ಎಂದು ಆರಂಭವಾಗಿ "ಸ್ವರೂಪಾನಂದಾವಿರ್ಭಾವವೈಚಿತ್ರ್ಯಾನಂದಪ್ರದ ಜ್ಞಾನೇನ ತ್ವಯಿ ಸಮರ್ಪಿತೇನ ತ್ವತ್ಪ್ರೀತ್ಯಾಸ್ತು" ಎಂಬುದರ ವರೆಗಿರುವುದು ಶುಭಕರ್ಮಗಳನ್ನು ಸಮರ್ಪಿಸುವ ವಿಧಾನ. ಮುಂದೆ "ತತ್ತಥಾ" ಎಂದಾರಂಭವಾಗಿ "ದುಃಖಾತಿಶಯಪ್ರದಾತೇತಿ ಜ್ಞಾನೇನ ತ್ವಯಿ ಸಮರ್ಪಿತೇನ ತ್ವತ್ಪ್ರೀತ್ಯಾಸ್ತು" ಎಂಬುದು ಅಶುಭಕರ್ಮಗಳನ್ನು ಸಮರ್ಪಿಸುವ ವಿಧಾನ. ಈಗ ಒಂದೊಂದಾಗಿ ಎರಡು ವಿಧಾನಗಳ ಅರ್ಥವಿವರಣೆಗೆ ಹೋಗೋಣ.

i. ಶುಭಕರ್ಮಗಳನ್ನು ಸಮರ್ಪಿಸುವ ವಿಧಾನ

೪೨. ಕಠಿಣ ಪದಗಳ ಅರ್ಥ : ತ್ವತ್–ನಿನ್ನ ಎಂದರೆ ಬಿಂಬರೂಪಿಯಾದ ಭಗವಂತನ ಎಂದರ್ಥ. **ಅನುಷ್ಠಾನ**–ನೆರೆಸುವಿಕೆ **ಮದೀಯೇ**–ನನ್ನ, ನನಗೆ ಸೇರಿದ ('ಮದ್ಧೈ'ಗೆ ವಿಶೇಷಣ') **ತತ್ಪ್ರೇರಿತೇನ**–ಆ ಶುಭಕರ್ಮದಿಂದ ಪ್ರೇರಿತನಾದ ('**ಮುಖ್ಯಪ್ರಾಣೇನ**' ಎಂಬುದಕ್ಕೆ ವಿಶೇಷಣ) **ಅನುಕಾರಿತ** (ದ್ವಾರಾನುಕಾರಿತ–ದ್ವಾರಾ ಅನುಕಾರಿತ)–ಅನುಸರಣ ಮಾಡಲ್ಪಟ್ಟ, ಅದರಂತೆಯೇ ಪರಾಡಿದ. **ಅವಸ್ಥಾತ್ರಯ**–ಜಾಗ್ರತ್ ಸ್ವಪ್ನ ಸುಷುಪ್ತಿ ಎಂಬ ಮೂರನಿಸ್ಥಿತಿ (ಅವಸ್ಥೆ)ಗಳನ್ನು. ಸ್ಮೃತಿ–ಸ್ಮರಣೆ, ನೆನಪು. **ಪ್ರದಾನಕ**-ಕೊಡುವಂಥಾ. **ಪೂರ್ವತಃ**–ಮೊದಲು (ಮುಂಚೆ) **ತದುಪಾಸಕೇನ-ತತ್**–ಆ ಭಗವಂತನನ್ನು. **ಉಪಾಸಕೇನ**–ಉಪಾಸನೆ ಮಾಡುವಂಥಃ (ಇದು ಮುಂದಿರುವ "ಆನಂದಪ್ರದಜ್ಞಾನೇನ" ಎಂಬುದಕ್ಕೆ ವಿಶೇಷಣ). **ಚತುರ್ಗುಣಾದ್ಯುಪಾಸನ** (ಚತುರ್ಗುಣ + ಆದಿ + ಉಪಾಸನ) = ಭಗವಂತನಲ್ಲಿ **ಸತ್**–ನಿರ್ದೋಷನು, **ಚಿತ್**–ಜ್ಞಾನ ಸ್ವರೂಪ, **ಆನಂದ**–ಸುಖಸ್ವರೂಪ ಮತ್ತು **ಆತ್ಮ** = ಸರ್ವಸ್ವಾಮೀ ಎಂಬ ನಾಲ್ಕು ಗುಣಗಳಿವೆಯೆಂದು ; ಮನುಷ್ಯೋತ್ತಮರು ಈ ನಾಲ್ಕು ಗುಣಗಳೂ ನಿರತಿಶಯವಾಗಿ ಪರಮಾತ್ಮನಲ್ಲಿ ಇವೆಯೆಂದು ಉಪಾಸನೆಮಾಡಬೇಕು. ಇದು ಕನಿಷ್ಠ ಪಕ್ಷ. ಅವರಿಗಿಂತ ಉತ್ತಮಾಧಿಕಾರಿಗಳು ಅದಕ್ಕೂ ಹೆಚ್ಚು ಹೆಚ್ಚು ಗುಣಗಳನ್ನು ಉಪಾಸನೆಮಾಡಬೇಕು. ಚತುರ್ಮುಖಬ್ರಹ್ಮನೂ ಮಾಯು ದೇವರೂ ವೇದೋಕ್ತ ಸಕಲಗುಣಗಳನ್ನು ಉಪಾಸನೆಮಾಡಬೇಕೆಂದು ಬ್ರಹ್ಮ ಸೂತ್ರಗಳಲ್ಲಿ ಪ್ರತಿಪಾದಿತವಾಗಿದೆ. ಅವರು ಉಪಾಸನೆ ಮಾಡುವ ಗುಣಗಳು ಹೆಚ್ಚು ಹೆಚ್ಚಿದಂತೆ ಅವರಿಗೆ ಹೆಚ್ಚು ಹೆಚ್ಚು ಸ್ವರೂಪಾನಂದವೂ ಅಭಿವ್ಯಕ್ತವಾಗುತ್ತದೆ. ಇದನ್ನೇ ಸಂಕ್ಷೇಪವಾಗಿ ಅಣುಭಾಷ್ಯದಲ್ಲಿ (೩ ಅಧ್ಯಾ.) ಹೀಗೆ ಹೇಳಿದ್ದಾರೆ—

ಸಚ್ಚಿದಾನಂದ-ಆತ್ಮೇತಿ ಮಾನುಷೈಸ್ತು ಸುರೇಶ್ವರೈಃ ।
ಯಥಾಕ್ರಮಂ ಬಹುಗುಣೈರ್ ಬ್ರಹ್ಮಣಾ ತ್ವಖಿಲೈರ್ಗುಣೈಃ ॥
ಉಪಾಸ್ಯಃ ಸರ್ವವೇದೈಶ್ಚ ...

ಚತುರ್ಗುಣ : ಸತ್, ಚಿತ್, ಆನಂದ, ಆತ್ಮ ಎಂಬ ನಾಲ್ಕು ಗುಣಗಳಿಂದ, **ಆದಿ**–ಮೊದಲುಮಾಡಿ ಹೆಚ್ಚು ಹೆಚ್ಚು ಗುಣಗಳನ್ನು ತಮ್ಮ ತಮ್ಮ ಯೋಗ್ಯತಾನುಸಾರ, **ಉಪಾಸನ**–ಉಪಾಸನೆ ಮಾಡುವುದರಿಂದ ಎಂದರ್ಥ. **ಜಿಜ್ಞಾ**

ಸಾದಿಭಿಃ-ಜಿಜ್ಞಾಸಾ-ಶಾಸ್ತ್ರವನ್ನು ಯುಕ್ತ್ಯನುಸಂಧಾನಪೂರ್ವಕ ವಿಚಾರ ಮಾಡೋಣ ಎಂದರೆ ಅಧ್ಯಯನ ಮಾಡುವುದು, **ಆದಿಭಿಃ**-ಮೊದಲಾದವುಗಳಿಂದ. ಶ್ರವಣ-ಮನನ-ನಿದಿಧ್ಯಾಸನ (ಅಥವಾ ಧ್ಯಾನ) ಎಂಬ ಸಾಧನೆಗಳಿಂದ ಎಂದರ್ಥ. ಶಾಸ್ತ್ರವನ್ನು ಕುರುಡಾಗಿ ಓದದೆ ವಿಚಾರಪೂರ್ವಕವಾಗಿ ತಿಳಿದುಕೊಳ್ಳುವುದೇ ಜಿಜ್ಞಾಸಾ. ಆ ವಿಚಾರವನ್ನು ಗುರುಮುಖೇನ ಕೇಳುವುದು ಶ್ರವಣ ; ಕೇಳಿದ್ದನ್ನು ಮತ್ತೆ ಮತ್ತೆ ಚಿಂತನೆ ಮಾಡುವುದು ಮನನ ; ಅದರಿಂದ ಕಲಿತ ವಿದ್ಯೆ ದೃಢವಾಗುತ್ತದೆ. ಅಮೇಲೆ ಆದರಂತೆ ಧ್ಯಾನಮಾಡೋಣವೇ ನಿಧಿಧ್ಯಾಸನ. ಇವುಗಳಿಂದ ಜ್ಞಾನವು ಪರಿಪಕ್ವವಾಗುತ್ತದೆ. **ಪಂಚವಿಧಮುಕ್ತಿಯೋಗ್ಯಾನಾಂ;** 'ದೇವರ್ಷಿಪಿತೃಪ ನರಾ ಇತಿ ಮುಕ್ತಾಸ್ತ್ರಿ ಪಂಚಧಾ' ಎಂದು ತತ್ವಸಂಖ್ಯಾನದಲ್ಲಿ[1] ಹೇಳಿದಂತೆ **ದೇವ**-ದೇವತೆಗಳು (ಉತ್ತಮ ವರ್ಗದವರು), **ಋಷಿ**-ಋಷಿಗಳು, **ಪಿತೃ**-ಪಿತೃಗಳು, **ಪ**-ಚಕ್ರವರ್ತಿಗಳು, (ಮಧ್ಯಮ ವರ್ಗದವರು) **ನರಾಃ**-ಮಿಕ್ಕಿನವರು (ಅಧಮರು) ಎಂಬ ಐದು ಪಂಗಡದವರಿದ್ದಾರೆ. **ಲಿಂಗಾಪಗಮೇ ಲಿಂಗ**-ಲಿಂಗದೇಹವು, **ಅಪಗಮೇ**-ವಿರಜಾನದೀ ಸ್ನಾನದಿಂದ ಕಳಚಿ ಹೋದ ಬಳಿಕ ಎಂದರ್ಥ. **ಆನಂದಾವಿರ್ಭಾವ-ವೈಚಿತ್ರ್ಯ**-ಸ್ವರೂಪಾನಂದವು ಅಪರವರು ಮಾಡಿದ ಭಗವದ್ಯುಣೋಪಾಸನೆಗೆ ತಕ್ಕಂತೆ ನೂರು-ನೂರು ಪಟ್ಟು ಹೆಚ್ಚುತ್ತಾ ಹೋಗಿ ಚತುರ್ಮುಖಬ್ರಹ್ಮದೇವರಿಗೆ ಅತ್ಯಂತ ಅಧಿಕವಾಗಿ (ನೂರಕ್ಕೆ ನೂರುಪಟ್ಟು) ಇರುತ್ತದೆ. ಆದ್ದರಿಂದಲೇ ಅವರಿಗೆ 'ಶತಾನಂದ'ರೆಂದು ಹೆಸರು. ಆನಂದತಾರತಮ್ಯವು ತೈತ್ತಿರೀಯೋಪನಿಷತ್ತಿನ ಆನಂದವಲ್ಲಿಯಲ್ಲಿಯೂ (೨ನೇ ವಲ್ಲಿ) ಬೃಹದಾರಣ್ಯಕೋಪನಿಷತ್ತಿನಲ್ಲಿ ಜ್ಯೋತಿರ್ಬ್ರಾಹ್ಮಣದಲ್ಲೂ (ಅಧ್ಯಾಯ ೬, ಬ್ರಾಹ್ಮಣ ೩) ಪ್ರತಿಪಾದಿತವಾಗಿದೆ. ಹೀಗೆ ಆವಿರ್ಭಾವವಾಗುವ 'ಆನಂದ'ದಲ್ಲಿ ತಾರತಮ್ಯವೆಂಬ ವೈಚಿತ್ರ್ಯವು ಅಥವಾ ಭಿನ್ನತೆಯು ಇರುವುದು. ಅಂಥಾ ತಾರತಮ್ಯೋಪೇತವಾದ ಆನಂದವನ್ನು ಆವರವರು ಮಾಡಿದ ಅಧ್ಯಯನ ಶ್ರವಣ-ಮನನ-ಉಪಾಸನಾ ರೂಪವಾದ ಜ್ಞಾನವು ಕೊಡುತ್ತದೆ. ಇಂಥಾ ಜ್ಞಾನವು ಕೇವಲ ಶುಭಕರ್ಮಗಳಿಂದಲೇ ಲಭಿಸುವುದಲ್ಲದೆ ಅಶುಭಕರ್ಮದಿಂದ ಅಲ್ಲ. ಆದಕಾರಣ ನಾನು ಮಾಡಿದ ಸಕಲ ಶುಭಕರ್ಮಗಳೂ ಕ್ರಮೇಣ ಜ್ಞಾನೋದಯವಾಗುವಂತೆಯೂ ಅದರಿಂದ ಮುಕ್ತಿಯಲ್ಲಿ ನನ್ನ ಯೋಗ್ಯತಾನುಸಾರ ಆನಂದಾನುಭವಕ್ಕೂ ಕಾರಣವಾಗಲಿ ಎಂದು ನಿನ್ನಲ್ಲಿ ಸಮರ್ಪಿಸುತ್ತೇನೆಂಬುದೇ ಈ ವಿಧಾನದ ಮುಖ್ಯಸಾರ.

---

1. ತತ್ವಸಂಖ್ಯಾನ ಆಚಾರ್ಯರ ದಶಪ್ರಕರಣಗಳಲ್ಲಿ ಅತ್ಯಂತ ಚಿಕ್ಕ ಪ್ರಕರಣ ಗ್ರಂಥ.

(ಕ)ತ್ವದಧಿಷ್ಠಾನಾದಿಕಾಲತಃಪ್ರಾಪ್ತ—ಮದೀಯೇ ಶುಭಾಶುಭ—ಕರ್ಮಣೋರ್ಮಧ್ಯೇ ಶುಭಕರ್ಮಾನುಸಾರತಃ ತತ್ಪ್ರೇರಿತೇನ ಮುಖ್ಯ-ಪ್ರಾಣೇನ ತತ್ತಾ್ವಭಿಮಾನಿದೇವತಾದ್ವಾರಾನುಕಾರಿತಾವಸ್ಥಾತ್ರಯ ನಿಯಾಮಕ — ಅನುಭವಕಾಲಘಟಿತ — ಶ್ರೀವಿಷ್ಣುಸ್ವಾತಂತ್ರ್ಯ — ಸ್ಮೃತಿ ಪ್ರದಾನಕ;

ಈ ವಾಕ್ಯವು ಬಹಳ ಉದ್ದವಾಗಿರುವುದಲ್ಲದೆ ಅನೇಕ ವಿಷಯಗಳು ಒಂದೊಂದು ಪದಾವಳಿಯಲ್ಲೂ ಅಡಕವಾಗಿರುವುದರಿಂದ ಆ ದೊಡ್ಡ ವಾಕ್ಯವನ್ನೇ ಚಿಕ್ಕ ಚಿಕ್ಕ ಭಾಗಗಳಾಗಿ ವಿಭಾಗಿಸಿಕೊಂಡು ಅವಕ್ಕೆ ಪದಶಃ ಅರ್ಥ ಹೇಳುತ್ತಾ ಅಲ್ಲಲ್ಲೇ ಅದರ ಸ್ಥೂಲಾಭಿಪ್ರಾಯವನ್ನು ವಿವರಿಸುತ್ತಲೂ ಹೋಗುತ್ತೇನೆ.

೪೩. **ಕವಿಭಾಗದ ಪದಶಃ ಅರ್ಥ (ಕ)ತ್ವದಧಿಷ್ಠಾನ-ಆದಿಕಾಲತಃ** ನೀನು ನನ್ನ ಸ್ವರೂಪದೇಹದಲ್ಲಿ ನೆಲೆಸಿದ ಕಾಲದಿಂದ ಆರಂಭಿಸಿ, **ಪ್ರಾಪ್ತ**-ಉಂಟಾದ ಅಥವಾ ಒದಗಿಬಂದ ಅಥವಾ ಲಭಿಸಿದ, **ಮದೀಯೇ**-ನನ್ನ, **ಶುಭ-ಅಶುಭ-ಕರ್ಮಣೋಃ ಮಧ್ಯೇ**-ಸತ್ಕರ್ಮ ಮತ್ತು ದುಷ್ಕರ್ಮಗಳ ಮಧ್ಯದಲ್ಲಿ, **ಶುಭಕರ್ಮಾನುಸಾರತಃ** ಶುಭಕರ್ಮಗಳನ್ನು ಅನುಸರಿಸಿ, **ತತ್ಪ್ರೇರಿತೇನ ಮುಖ್ಯಪ್ರಾಣೇನ**-ಆದರಿಂದ (ಎಂದರೆ ಹಿಂದೆ ಪ್ರಸಕ್ತವಾದ ಶುಭಕರ್ಮಗಳಿಂದ) ಪ್ರೇರಿತನಾದ ಮುಖ್ಯಪ್ರಾಣನಿಂದ, **ತತ್ತಾ್ವಭಿಮಾನಿದೇವತಾದ್ವಾರಾ ಅನುಕಾರಿತ**-ತತ್ತಾ್ವಭಿಮಾನಿದೇವರ ಮೂಲಕ ಪ್ರೇರಿಸಲ್ಪಟ್ಟ(ಮಾಡಿಸಲ್ಪಟ್ಟ), **ಅವಸ್ಥಾತ್ರಯನಿಯಾಮಕ**-ಜಾಗ್ರತ್-ಸ್ವಪ್ನ-ಸುಷುಪ್ತಿಗಳೆಂಬ ಅವಸ್ಥಾತ್ರಯಕ್ಕೆ ನಿಯಾಮಕವಾದ, **ಅನುಭವಕಾಲಘಟಿತ**-ಆಯಾ ಜಾಗ್ರದಾದ್ಯವಸ್ಥೆಗಳಲ್ಲಿ ನಮ್ಮ ಅನುಭವಕ್ಕೆ ಬಂದ (ಅಥವಾ ಅನುಭವದಿಂದ ಸಿದ್ಧವಾದ), **ಶ್ರೀವಿಷ್ಣುಸ್ವಾತಂತ್ರ್ಯ ಸ್ಮೃತಿ ಪ್ರದಾನಕ**-ಶ್ರೀ ವಿಷ್ಣುವೇ (ಒಬ್ಬನೇ) ಸರ್ವ ಸ್ವತಂತ್ರ, ಮಿಕ್ಕವರು ಅವನ ಅಧೀನ ಎಂಬ ಸ್ಮರಣೆಯನ್ನು (ನೆನಪನ್ನು) ತಂದುಕೊಡುವ (ಇದು ಮುಂದಿರುವ **'ಕರ್ಮ'** ಶಬ್ದಕ್ಕೆ ವಿಶೇಷಣ.)

೪೪. **ಈ ಭಾಗದ ವಿವರಣೆ** : ಭಗವಂತ ಅನಾದಿಕಾಲದಿಂದಲೂ ನಮ್ಮ ಸ್ವರೂಪದೇಹದಲ್ಲಿ ಬಿಂಬರೂಪಿಯಾಗಿ ಇದ್ದೇ ಇದ್ದಾನೆ, ಅನಂತಕಾಲದವರೆಗೂ ಹಾಗೆಯೇ ಬಿಂಬರೂಪಿಯಾಗಿಯೇ ಇರುವನು. ಆದರೆ ನಾವು ಅಸೃಜ್ಯರಾಶಿಯಲ್ಲಿದ್ದಾಗ ನಮಗೆ ಯಾವ ಪ್ರವೃತ್ತಿಯೂ ಇರುವುದಿಲ್ಲ, ಸೃಜ್ಯರಾಶಿಗೆ ಬಂದಾಗಲೇ

ನಮಂಗೆ ಕಾರ್ಯದಲ್ಲಿ ಪ್ರವೃತ್ತಿಯಂಟಾಗುತ್ತದೆ. ಆದ್ದರಿಂದ ತ್ವದಧಿಷ್ಠಾನಾದಿ ಕಾಲತಃ ಎಂದರೆ ನೀನು ಹೊಸದಾಗಿ ನನಗೆ ಬಿಂಬರೂಪಿಯಾದಾಗ ಎಂದರ್ಥವಲ್ಲ; ನಾನು ಎಂದು ಸೃಜ್ಯರಾಶಿಗೆ ಬಂದು ಕಾರ್ಯದಲ್ಲಿ ಪ್ರವೃತ್ತನಾದೆನೋ ಅಂದಿನಾರಭ್ಯ ಇವತ್ತಿನವರೆಗೂ ಎಂದರ್ಥ. ಅಂದಿನಾರಭ್ಯ ಇವತ್ತಿನವರೆಗೂ ನಾನು ಎಣಿಸಲಾರದಷ್ಟು (ಅಸಂಖ್ಯ) ಕರ್ಮಗಳನ್ನು ಮಾಡಿದ್ದೇನೆ. ಆ ಕರ್ಮಗಳಲ್ಲಿ ಕೆಲವು ಶುಭಕರ್ಮಗಳು ಇವೆಯಾದರೂ ಅಶುಭಕರ್ಮಗಳೇ ಹೆಚ್ಚಾಗಿವೆ. ಅದು ತಿಳಿದ ವಿಷಯವೇ ಆಗಿದೆ. ಹೀಗೆ ನನ್ನ ಪ್ರವೃತ್ತಿಯಿಂದ ಶುಭ-ಅಶುಭಗಳೆರಡೂ ನನಗೆ ಹತೋಟಿಯಿಲ್ಲದೆ–ನನ್ನ ಹಿಡಿತ ಮೀರಿ–ಒದಗಿಬಂದಿವೆಯೆಂಬುದನ್ನು **'ಪ್ರಾಪ್ತ'** ಪದ ಸೂಚಿಸುತ್ತದೆ. ಹೀಗೆ ಒದಗಿಬಂದ ಶುಭ-ಅಶುಭ ಎರಡೂ ವಿಧ ಕರ್ಮಗಳ ಪೈಕಿ ಶುಭಕರ್ಮಗಳು ಅತ್ಯಲ್ಪವಾದರೂ ಅವುಗಳಿಂದಲೇ ಭಗವಂತ ಪ್ರೀತನಾಗುವುದರಿಂದ ಮೊದಲು ಕೇವಲ ಶುಭಕರ್ಮಗಳನ್ನೇ ನಿನ್ನಲ್ಲಿ ಸಮರ್ಪಿಸುತ್ತೇನೆ, ಎಂಬುದು ಪ್ರಾರ್ಥನೆಯು ಮೊದಲ ಹಂತ.

೪೫. ಮುಖ್ಯ ಪ್ರಾಣನ ಕಾರ್ಯ : ಸಕಲ ಜೀವರು ಮಾಡುವ ಸಕಲ ಸತ್ಕರ್ಮಗಳನ್ನೂ ಭಗವಂತನಲ್ಲಿ ಸಮರ್ಪಿಸುವುದು ಮುಖ್ಯಪ್ರಾಣದೇವರ ಒಂದು ಕರ್ತವ್ಯ ; ಇದನ್ನು 'ತಸ್ಮಿನ್ನಪೋ ಮಾತಾರಿಶ್ವಾ ದಧಾತಿ' ಎಂಬ ಈಶಾವಾಸ್ಯ ಶ್ರುತಿ (ಈ. ಉಪ. ೪ ಮಂತ್ರ) ತಿಳಿಸುತ್ತದೆ. ಈ ವಾಕ್ಯಕ್ಕೆ ಮುಖ್ಯಪ್ರಾಣನ ಪ್ರೇರಣೆಯಿಂದಲೇ ಸಕಲ ಜೀವಿಗಳೂ ಸಕಲ ಸತ್ಕರ್ಮಗಳನ್ನೂ ಮಾಡುವುದರಿಂದ ತನ್ನ ಪ್ರೇರಣೆಯಿಂದ ಆದ-(ಆ-ಚೆನ್ನಾಗಿ, **ಪ** = ಕಾಪಾಡತಕ್ಕದ್ದಾದ್ದರಿಂದ **ಆಪಃ** ಎಂದು ಕರೆಯಲ್ಪಡುವ) ಸಕಲಸತ್ಕರ್ಮಗಳನ್ನೂ ಅವರು ಭಗವಂತನಲ್ಲಿ ಸಮರ್ಪಿಸುತ್ತಾರೆ ಎಂದರ್ಥ. ಹಿಂದೆ ಆ ರೀತಿ ನಾನು ಮಾಡಿದ ಶುಭ ಕರ್ಮಗಳಿಂದ ಪ್ರೇರಿತರಾದ ಮುಖ್ಯಪ್ರಾಣದೇವರು ನನ್ನನ್ನು ಸತ್ಕರ್ಮ ಮಾಡಲು ಪ್ರೇರಿಸುವ ನಿಮಿತ್ತ ತತ್ವಾಭಿಮಾನಿಗಳ ದ್ವಾರಾ ನನಗೆ ಜಾಗ್ರತ್-ಸ್ವಪ್ನಾದಿ ಅವಸ್ಥೆಗಳನ್ನು ಕೊಡುತ್ತಾರೆ . (ಸಂಶಯ) ಈ ಅವಸ್ಥಾತ್ರಯಗಳನ್ನು ಕೊಡಲು ತತ್ತ್ವದೇವತೆಗಳ ಮಧ್ಯಸ್ಥಿಕೆ ಏಕೆ ಬೇಕು ? ಎನ್ನಬಹುದಲ್ಲವೆ. (ಪರಿಹಾರ) ಒಬ್ಬ ಅಧಿಕಾರಿಯು ಎಲ್ಲ ಕೆಲಸಗಳನ್ನು ತಾನೇ ಮಾಡಲು ಶಕ್ತನಾದರೂ –ಉದಾಹರಣೆಗೆ ಪತ್ರದ ಕರಡು ಪ್ರತಿಮಾಡುವುದು, ಅದನ್ನು ಬೆರಳಚ್ಚು ಮುದ್ರಿಸುವುದು ಇತ್ಯಾದಿ–ಆಯಾ ಕೆಲಸಕ್ಕೆ ನಿಯುಕ್ತರಾದ ಕೆಳ ಅಧಿಕಾರಿಗಳ ಮುಖಾಂತರವೇ ಮಾಡಿಸುತ್ತಾನೆ. ಹಾಗೆಯೇ ಪ್ರಾಣದೇವರಿಗೆ ತಾನೇ ಕಣ್ಣಿನಿಂದ ನೋಡುವಂತೆ ಪ್ರೇರಿಸುವ ಶಕ್ತಿಯಿದ್ದರೂ ಚಕ್ಷುರಿಂದ್ರಿಯಕ್ಕೆ ಸೂರ್ಯನೇ ಅಭಿಮಾನಿಯಾಗಿ ನಿಯುಕ್ತನಾದ್ದರಿಂದ ಆ ಸೂರ್ಯನ ಮುಖಾಂತರವೇ ನೋಡುವ ಕಾರ್ಯ ನಡೆಸುತ್ತಾರೆ, (ಸಂಶಯ) ಹಾಗಾದರೆ ಸೂರ್ಯನೇ ಮಾಡುತ್ತಾನೆ ಎಂದೇಕೆ ಹೇಳಬಾರದು ? ಮುಖ್ಯಪ್ರಾಣನನ್ನೇಕೆ ತರಬೇಕು ? ಎಂದು ಪ್ರಶ್ನಿಸಬಹುದಲ್ಲವೇ ? (ಪರಿಹಾರ) ಆದರೆ ಮುಖ್ಯಪ್ರಾಣ ದೇಹದಲ್ಲಿದ್ದರೆ ಮಾತ್ರ ಎಂದರೆ ಜೀವ (ಉಸಿರು) ಇದ್ದರೆ ಮಾತ್ರ ಕಣ್ಣು ಕಿವಿ ಎಲ್ಲವೂ ಕೆಲಸಮಾಡುತ್ತವೆ ; ಮುಖ್ಯ ಪ್ರಾಣ ಹೊರಟು ಹೋದರೆ ಯಾವ ಅಂಗವು ಇದ್ದರೂ ಏನೂ ಮಾಡುವುದಿಲ್ಲ. ಆದ್ದರಿಂದಲೇ ಮುಖ್ಯಪ್ರಾಣನು ತತ್ವಾಭಿಮಾನಿಗಳ ದ್ವಾರಾ ಜಾಗ್ರತ್-ಸ್ವಪ್ನ–ಸುಷುಪ್ತ್ಯವಸ್ಥೆಗಳನ್ನು ಪ್ರೇರಿಸುತ್ತಾರೆ ಎಂದು ಗದ್ಯದಲ್ಲಿ ಹೇಳಿದ್ದಾರೆ.

೪೬. ಅನುಭವದಿಂದ ತಿಳಿದ ವಿಚಾರಗಳು : ಈ ಅವಸ್ಥೆಗಳಲ್ಲಿ ವಿವೇಕಿಯಾದ ಪುರುಷನಿಗೆ ತನ್ನ ಹತೋಟಿಯಲ್ಲಿ ಏನೂ ಇಲ್ಲ ಎಂಬ ಅನುಭವ ಬರದೇ ಇರುವುದಿಲ್ಲ. ಏಕೆಂದರೆ ತೂಕಡಿಕೆ ಬಂದಾಗ ಮಲಗದೇ ಇರುವುದು ಸಾಧ್ಯವಿಲ್ಲ. ಆದರೆ ಎಷ್ಟೋ ವೇಳೆ ಮಲಗಿದ್ದರೂ ನಿದ್ದೆ ಬರುವುದಿಲ್ಲ. ಸ್ವಪ್ನಗಳಂತೂ ನಮ್ಮನ್ನು ಹೇಳಿ ಕೇಳಿ ಬರುವುದಿಲ್ಲ. ನಾವು ಗಾಢನಿದ್ರೆಯಲ್ಲಿ ಮಲಗಿದ್ದಾಗಲೂ ನಮ್ಮ ಉಸಿರು ತನಗೆ ತಾನು ಆಡುತ್ತಿರುತ್ತದೆ, ಆದ್ದರಿಂದಲೇ ಉಸಿರಾಟ ನಮ್ಮ ಅಧೀನದಲ್ಲಿಲ್ಲವೆಂದು ಅರ್ಥವಾಗುತ್ತದೆ. ಹೀಗೆ ನಮ್ಮ ಅನೇಕ ಅನುಭವಗಳಿಂದಲೇ–ನಾವು ಸ್ವತಂತ್ರರಲ್ಲ, ನಮಗೆ ನಿಯಾಮಕನು ಬೇರೊಬ್ಬ ಇದ್ದಾನೆಂದೂ ತಿಳಿಯುತ್ತದೆ. ಆ ನಿಯಾಮಕನು ಸಾಕ್ಷಾತ್ ಭಗವಂತ, ಅವನೊಬ್ಬನೇ ಸ್ವತಂತ್ರ. ಮಿಕ್ಕವರೆಲ್ಲರೂ ಅವನ ಅಧೀನ ಎಂಬ ವಿಚಾರ, ಶಾಸ್ತ್ರದಿಂದ ಕೇಳಿ ತಿಳಿದದ್ದು, ಹೆಜ್ಜೆ ಹೆಜ್ಜೆಗೂ ನಮ್ಮ ಅನುಭವಕ್ಕೆ ಬರುತ್ತಿರುತ್ತದೆ. ಹೀಗೆ ಜಾಗ್ರದಾದ್ಯವಸ್ಥೆಗಳ ಅನುಭವವೇ ನಮಗೆ ವಿಷ್ಣುವೊಬ್ಬನೇ ಸ್ವತಂತ್ರನೆಂಬ ಸ್ಮರಣೆಯನ್ನು ತಂದುಕೊಡುತ್ತದೆ ಎಂಬುದು ಪ್ರಾರ್ಥನೆಯ ಎರಡನೆಯ ಹಂತ. ಈ ಪ್ರಕಾರ ನಮ್ಮ ಅನುಭವವೇ ವಿಷ್ಣುಸ್ವಾತಂತ್ರ್ಯದ ಸ್ಮರಣೆಯನ್ನು ತಂದು ಕೊಡುವುದು ನಮ್ಮ ಶುಭಕರ್ಮದ ಫಲ, ಅದನ್ನು ಪ್ರಾಣದೇವರೇ ಕೊಡುವರೆಂದೂ ತಿಳಿಯಬೇಕು.

೪೭. ಖ ಭಾಗಕ್ಕೆ ಪೀಠಿಕೆ : ಮೇಲೆ (ಕ) ಭಾಗದಲ್ಲಿ ಅವಸ್ಥಾತ್ರಯಗಳ ಅನುಭವದಿಂದಲೇ ವಿವೇಕಶಾಲಿಗಳಿಗೆ ಅವರು ಮಾಡಿದ ಶುಭಕರ್ಮಗಳ ಫಲರೂಪವಾಗಿ ವಿಷ್ಣುಸ್ವಾತಂತ್ರ್ಯದ ಸ್ಮರಣೆ ಬರುತ್ತದೆಯೆಂದು ಹೇಳಿದರು. ಈ (ಖ) ಭಾಗದಲ್ಲಿ–ನಾವು ಮಾಡುವ ಸಕಲಕರ್ಮಗಳೂ ವಿಷ್ಣುಪೂಜೆಯೇ ಆಗಿವೆ

(ಖ) ನಿತ್ಯ-ನೈಮಿತ್ತಿಕ-ಕಾಮ್ಯಭೇದೇನ ತ್ರಿವಿಧವಿದ್ಯಾಶ್ರಿತ — ಸ್ವವರ್ಣಾಶ್ರಮೋಚಿತ—ಸಂಕಲ್ಪಿತಭಗವತ್ಪೂಜಾತ್ಮಕ—ಕರ್ಮಜನ್ಯ ಫಲೇನ,

---

ಯೆಂಬ ಅನುಸಂಧಾನದಿಂದ ಮಾಡಿದರೆ ಅವುಗಳೇ 'ಕರ್ಮಣಾ ಜ್ಞಾನವಾ ತನೋತಿ' ಎಂಬ ಶ್ರುತಿಯಂತೆ[2] ಅಪರೋಕ್ಷಜ್ಞಾನಕ್ಕೆ ಸಾಧನವಾಗುತ್ತವೆ ಎಂದು ಪ್ರತಿಪಾದಿಸುತ್ತಾರೆ.

೪೮ (ಖ) ಭಾಗದ ಪದಶಃ ಅರ್ಥ :

ನಿತ್ಯ-ನೈಮಿತ್ತಿಕ-ಕಾಮ್ಯಭೇದೇನ = ನಿತ್ಯಕರ್ಮ, ನೈಮಿತ್ತಿಕ ಕರ್ಮ, ಕಾಮ್ಯಕರ್ಮ ಎಂದು, **ತ್ರಿವಿಧವಿದ್ಯಾಶ್ರಿತ**–ಶಾಸ್ತ್ರದಲ್ಲಿ ಹೇಳಿದಂತೆ ಮೂರು ಬಗೆಯಾಗಿರುವ, **ಸ್ವವರ್ಣಾಶ್ರಮೋಚಿತ**–ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಶೂದ್ರ ಎಂಬುದು ನಾಲ್ಕು ವರ್ಣಗಳು, ಬ್ರಹ್ಮಚಾರಿ, ಗೃಹಸ್ಥ, ವಾನಪ್ರಸ್ಥ, ಸಂನ್ಯಾಸಿ ಎಂಬುದು ನಾಲ್ಕು ಆಶ್ರಮಗಳು; ಆಯಾ ವರ್ಣದವರೂ ಆಯಾ ಆಶ್ರಮದವರೂ ತಮ-ತಮಗೆ ವಿಹಿತವಾದ ಕರ್ಮಗಳನ್ನೇ ಮಾಡಬೇಕು, ಪರಧರ್ಮವನ್ನು ಮಾಡಬಾರದು[1] ಎಂದು ಹೇಳಿರುವುದರಿಂದ ನಮ್ಮ ವರ್ಣಕ್ಕೆ ನಮ್ಮ ಆಶ್ರಮಕ್ಕೆ ಉಚಿತವಾದ ಕರ್ಮಗಳನ್ನೇ ಮಾಡಬೇಕು (ಸ್ವವರ್ಣಾಶ್ರಮೋಚಿತ ಎಂಬುದು ಮುಂದಿರುವ **'ಕರ್ಮ'**ಕ್ಕೆ ವಿಶೇಷಣ. ಅದೇ ರೀತಿ **'ಸಂಕಲ್ಪಿತ ಭಗವತ್ಪೂಜಾತ್ಮಕ'** ಎಂಬುದೂ 'ಕರ್ಮ'ಕ್ಕೆ ವಿಶೇಷಣ). **ಸಂಕಲ್ಪಿತ ಭಗವತ್ಪೂಜಾತ್ಮಕ** 'ಪ್ರಾತಃ ಪ್ರಭೃತಿ ಸಾಯಾಂತಂ ಸಾಯಾದಿ ಪ್ರಾತರಂತತಃ । ಯತ್ಕರೋಮಿ ಜಗನ್ನಾಥ ತದಸ್ತು ತವ ಪೂಜನಮ್'.—ಎಂಬಂತೆ ಸಕಲೇಂದ್ರಿಯಗಳು ಮಾಡುವ ಸಕಲಕರ್ಮಗಳೂ ಭಗವಂತನ ಸೇವಾರೂಪವೇ ಆಗಿವೆಯೆಂಬ ಅನುಸಂಧಾನ **ಪೂರ್ವಕ** ಮಾಡಲ್ಪಟ್ಟ ಎಂದರ್ಥ, **ಕರ್ಮಜನ್ಯ-ಫಲೇನ**–ಕರ್ಮಗಳಿಂದ ಲಭಿಸುವ ಫಲರೂಪವಾದ, (ಇದೂ ಮುಂದಿರುವ 'ಆನಂದಪ್ರದಜ್ಞಾನೇನ' ಎಂಬುದಕ್ಕೆ ವಿಶೇಷಣವಾಗಿದೆ.)

೪೯. ತ್ರಿವಿಧವಿದ್ಯಾಶ್ರಿತಕರ್ಮಗಳು : ನಾವು ಮಾಡುವ ಸಕಲ

---

1. ಪರಧರ್ಮೋ ಭಯಾವಹಃ–ಭಗವದ್ಗೀತೆ (೩ ಅ. ೩೫ ಶ್ಲೋ)
2. ಬ್ರಹ್ಮಸೂತ್ರ ಭಾಷ್ಯದಲ್ಲಿ (೩ ಅ. ೩ ಪಾ. ೭ ಸೂ.) ಉದಾಹೃತವಾದ ಶ್ರುತಿ ವಾಕ್ಯ.

ಕರ್ಮಗಳನ್ನೂ ನಿತ್ಯ ನೈಮಿತ್ತಿಕ ಮತ್ತು ಕಾಮ್ಯ ಎಂದು ಮೂರು ಗುಂಪಾಗಿ ವಿಭಾಗಿಸಬಹುದು. ನಾವು ಪ್ರತಿನಿತ್ಯ ಮಾಡುವ ಸಂಧ್ಯಾವಂದನೆ, ಪೂಜೆ ಇತ್ಯಾದಿಗಳೂ, ಅಪ್ಪೇಕೆ ಸ್ನಾನ, ಪಾನ,ಅಶನ(ಭೋಜನ)ಗಳಿಂದ ಹಿಡಿದು ಎಲ್ಲವೂ **ನಿತ್ಯ ಕರ್ಮಗಳು.** ಉಪನಯನ, ವಿವಾಹ, ಉಪಾಕರ್ಮ, ಚಾತುರ್ಮಾಸ್ಯ, ಹಬ್ಬ —ಹಾಡಿಗಳು ಮೊದಲಾದ ಏನೋ ಒಂದು ವಿಶೇಷ ನಿಮಿತ್ತ(ಕಾರಣ)ದಿಂದ ಮಾಡುವ ಕರ್ಮಗಳು, **ನೈಮಿತ್ತಿಕಕರ್ಮ** ಎನಿಸುತ್ತವೆ. ಇದಕ್ಕೆ ಪ್ರತಿಯಾಗಿ ಮಕ್ಕಳಾಗಲಿ, ಕೆಲಸ ಸಿಗಲಿ, ರೋಗ ಪರಿಹಾರವಾಗಲಿ ಇವೇ ಮೊದಲಾದ ಏನಾದರೊಂದು ವಿಶೇಷವಾದ ಉದ್ದೇಶದಿಂದ ಮಾಡುವ (ಕಾಮ್ಯ–ಅಪೇಕ್ಷೆ ಕಾಮ್ಯ = ವಿಶೇಷ ಅಪೇಕ್ಷೆಯಿಂದ ಮಾಡುವ) ಸೇವೆ–ಸೂತ್ರಗಳಿಗೆ, ಹವನ–ಹೋಮಗಳಿಗೆ **ಕಾಮ್ಯಕರ್ಮ**ಗಳೆಂದು ಹೆಸರು. ನಾವು ಯಾವ ಕರ್ಮವನ್ನೇ ಮಾಡಲಿ ಎಲ್ಲವೂ ಹರಿಸೇವೆಯೇ ಎಂಬ ಭಾವನೆಯಿಂದ (ಅಥವಾ ಸಂಕಲ್ಪದಿಂದ) ಮಾಡಿದರೆ ಅವು ಶ್ರೀಹರಿಸೇವೆಯೇ ಆಗುವುದಲ್ಲದೆ ಕ್ರಮವಾಗಿ ಅಪರೋಕ್ಷ ಜ್ಞಾನಕ್ಕೆ ಸಾಧನವೇ ಆಗುತ್ತವೆ.

೫೦. ವರ್ಣಾಶ್ರಮೋಚಿತಧರ್ಮಗಳು : ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂಬುದೇ ನಾಲ್ಕು ವರ್ಣಗಳು (ಚತುರ್ವರ್ಣಗಳು). ಹಾಗೆಯೇ ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ ಮತ್ತು ಸನ್ಯಾಸ ಎಂದು ನಾಲ್ಕು ಆಶ್ರಮಗಳು. ಶಾಸ್ತ್ರಗಳಲ್ಲಿ ಪ್ರತಿಯೊಂದು ವರ್ಣದವರಿಗೂ ಬೇರೆ ಬೇರೆ ಧರ್ಮಗಳು ವಿಹಿತವಾಗಿವೆ, ಅದೇ ರೀತಿ ಪ್ರತಿಯೊಂದು ಆಶ್ರಮದವರಿಗೂ ಅವರವರಿಗೆ ನಿಯತಧರ್ಮಗಳು ವಿಧಿಸಲ್ಪಟ್ಟಿವೆ. ಪ್ರತಿಯೊಬ್ಬ ವರ್ಣದವರೂ ಪ್ರತಿಯೊಬ್ಬ ಆಶ್ರಮದವರೂ ತಮ-ತಮಗೆ ವಿಹಿತವಾದ ಧರ್ಮಗಳನ್ನು ಮಾಡಬೇಕೇ ವಿನಾ ಅನ್ಯಧರ್ಮವನ್ನು ಮಾತ್ರ ಆವಲಂಬಿಸಬಾರದು. ತನ್ನ ಧರ್ಮದಲ್ಲಿ ಅನೇಕ ಕುಂದುಕೊರತೆ ಬಂದರೂ ಪರವಾಗಿಲ್ಲ, ಅದನ್ನೇ ಮಾಡಬೇಕು ; ಅನ್ಯಧರ್ಮವ ಲಂಬನೆಯು ನಿಷಿದ್ಧವೆಂಬ ಪ್ರಮೇಯವನ್ನು ಶ್ರೀಕೃಷ್ಣನೇ

ಶ್ರೇಯಾನ್ ಸ್ವಧರ್ಮೋ ವಿಗುಣಃ ಪರಧರ್ಮಾತ್ ಸ್ವನುಷ್ಠಿತಾತ್।
ಸ್ವಧರ್ಮೇ ನಿಧನಂ ಶ್ರೇಯಃ ಪರಧರ್ಮೋ ಭಯಾವಹಃ ॥*

---

* ಈ ಶ್ಲೋಕಕ್ಕೆ ಗೀತಾನಿವೃತಿಯಂತೆ ಹೀಗೆ ಅರ್ಥ—ಇತರ (ಎಂದರೆ ಬೇರೆ ವರ್ಣಾಶ್ರಮೋಚಿತವಾದ) ಧರ್ಮವನ್ನು ಲೋಪದೋಷವಿಲ್ಲದಂತೆ ಚೆನ್ನಾಗಿ ಮಾಡುವುದಕ್ಕಿಂತಲೂ ಸ್ವವರ್ಣಾಶ್ರಮೋಚಿತವಾದ ಧರ್ಮವನ್ನು–ಅದನ್ನು ಮಾಡುವುದರಲ್ಲಿ ಎಷ್ಟೋ ಲೋಪ

ಎಂಬ (ಗೀತಾ ೩ ಅ. ೩೫ ಶ್ಲೋ.) ವಾಕ್ಯದಿಂದ ಹೇಳಿದ್ದಾನೆ. ಅದರಂತೆ ಯಾರು ಯಾವ ವಿಹಿತವಾದ ಧರ್ಮವನ್ನು ಮಾಡಲಿ, ಅದನ್ನು ಹಗಲು ಮಾಡಲಿ–ರಾತ್ರಿ ಮಾಡಲಿ, ಅವೆಲ್ಲವೂ ಶ್ರೀಹರಿಯ ಸೇವಾರೂಪವೇ ಆಗಲಿ ಎಂದು ಸಂಕಲ್ಪ ಮಾಡಿಕೊಂಡರೆ (ಮೇಲೆ ಉದಹರಿಸಿದ "ಪ್ರಾತಃ ಪ್ರಭೃತಿ" ಎಂಬ ಶ್ಲೋಕದಲ್ಲಿ ಹೇಳಿದಂತೆ ಅನುಸಂಧಾನ ಮಾಡಿಕೊಂಡರೆ) ಆ ಕರ್ಮಗಳೇ ಭಗವತ್ಪ್ರೀತಿಗೆ ಕಾರಣವಾಗಿ ಪರಂಪರಯಾ ಅಪರೋಕ್ಷಜ್ಞಾನಕ್ಕೂ ಸಾಧನವಾಗುತ್ತವೆ. ಆದ ಕಾರಣ ಹೇ ಭಗವಂತ ! ನಾನು ಮಾಡುವ ಸಕಲ ಕರ್ಮಗಳೂ ಇದೇ ರೀತಿ ನಿನ್ನ ಪೂಜಾರೂಪವೇ ಆಗಿ ಅಪರೋಕ್ಷಜ್ಞಾನಕ್ಕೂ ಸಾಧನೀಭೂತವಾಗಲಿ ಎಂಬುದು ಪ್ರಾರ್ಥನೆಯು ಮೂರನೆಯ ಹಂತ.

೫೧. ನಿತ್ಯಕೃತ್ಯಗಳು ಹೇಗೆ ಭಗವತ್ಪೂಜೆಯಾಗುತ್ತವೆ : ಈ ವಿಷಯದಲ್ಲಿ ಎಲ್ಲರಿಗೂ ಪ್ರಾಯಶಃ ಒಂದು ಸಂದೇಹ ಬರುವ ಸಂಭವವಿದೆ. ಆದ್ದರಿಂದ ಆದನ್ನು ಪರಿಹಾರಮಾಡಿಯೇ ಮುಂದಕ್ಕೆ ತೆರಳೋಣ. (ಸಂದೇಹ) ನೀವು 'ಪ್ರಾತಃ ಪ್ರಭೃತಿ ಸಾಯಾಂತಂ' ಎಂದು ಹೇಳಿ 'ತತ್ಸರ್ವಂ ವಿಷ್ಣುಪೂಜಾಸಂ' ಎಂದು ಹೇಳಿದ್ದು ಹೇಗೆ ಉಚಿತ ? ನಾವು ಏಳುವುದು, ಕೂಡುವುದು, ಸ್ನಾನ ಮಾಡುವುದು, ಊಟ ಮಾಡುವುದು, ನೋಡುವುದು, ಕೇಳುವುದು ಇವುಗಳೆಲ್ಲಾ ಹೇಗೆ ಭಗವಂತನ ಸೇವೆಯಾಗಲು ಸಾಧ್ಯ ? ಎನ್ನಬಹುದಲ್ಲವೇ ! ಅದಕ್ಕೆ ಸೂಕ್ತವಾದ ಸಮಾಧಾನವನ್ನು ಶ್ರೀಮದಾಚಾರ್ಯರೇ ಗೀತಾಭಾಷ್ಯದಲ್ಲಿ 'ಅಗ್ನಿಮೀಳೇ ಪುರೋಹಿತಂ' ಎಂಬ ಮೊದಲನೇ ಸೂಕ್ತದ ಮೊದಲನೇ ಮಂತ್ರಕ್ಕೆ ಭಾಷ್ಯ ಬರೆಯುವ ಸಂದರ್ಭದಲ್ಲಿ "ಹೋತಾರಂ" ಎಂಬ ಶಬ್ದಕ್ಕೆ ಆಧ್ಯಾತ್ಮಪರವಾದ ಅರ್ಥ ಹೇಳುತ್ತಾ

ಇಂದ್ರಿಯಾಗ್ನಿಷು ಚಾರ್ಥಾನಾಂ ಯದ್ಧೋತಾ ಹೋತೃನಾಮಕಃ

ಎಂಬ ಪದಗಳಿಂದ ಹೇಳಿದ್ದಾರೆ. ಆಚಾರ್ಯರ ಈ ವಾಕ್ಯವು ಶ್ರೀಮನ್ಮಹಾಭಾರತದಲ್ಲಿ ಶಾಂತಿಪರ್ವದಲ್ಲಿ ಮೋಕ್ಷಧರ್ಮದಲ್ಲಿ ಒಂದು ಇಡೀ ಅಧ್ಯಾಯದಲ್ಲಿ ನಿರೂಪಿತವಾದ ವಿಷಯದ ಮುಖ್ಯ ಸಾರಾಂಶದಂತಿದೆ. ಅದನ್ನೇ ಯತ್ಕಿಂಚಿತ್ ನನಗೆ

ದೋಷಗಳು ಬಂದರೂ ಅಡ್ಡಿಯಿಲ್ಲ–ಅದನ್ನು ಮಾಡುವುದೇ ಹೆಚ್ಚು ಶ್ರೇಯಸ್ಕರ. ಏಕೆಂದರೆ ಸ್ವಧರ್ಮ ಮಾಡುತ್ತಾ ಮರಣ ಹೊಂದಿದರೂ ಸದ್ಗತಿಯಾಗುವುದರಿಂದ ಅದೇ ಮೇಲು; ಪರಧರ್ಮವನ್ನು ಎಷ್ಟೇ ಶ್ರದ್ಧೆಯಿಂದ ಮಾಡಿದರೂ ಆದರಿಂದ ನ ಕಾದ್ಯನರ್ಥಗಳೆ ಆಗುವುದರಿಂದ ಪರಧರ್ಮವು ಎಂದಿದ್ದರೂ ಅಪಾಯಕರ—ದುರ್ಗತಿಗೇ ಕಾರಣ.

ತಿಳಿದಮಟ್ಟಿಗೆ ಹೀಗೆ ವರ್ಣಿಸಬಹುದು.

೫೨. ಇಂದ್ರಿಯಗಳು ಮತ್ತು ವಿಷಯಗಳು : ನಮಗೆ ಕಣ್ಣು ಕಿವಿ ಮೂಗು ಮೊದಲಾದ ಪಂಚಜ್ಞಾನೇಂದ್ರಿಯಂಗಳೂ ಕೈ-ಕಾಲು ಮೊದಲಾದ ಪಂಚಕರ್ಮೇಂದ್ರಿಯಂಗಳೂ ಅಲ್ಲದೆ ಮನಸ್ಸೂ ಸೇರಿ ಹನ್ನೊಂದು ಇಂದ್ರಿಯಂಗಳು ಇವೆ. ಶಾಸ್ತ್ರದಲ್ಲಿ ಕಣ್ಣಿನಿಂದ ನೋಡುವ ಸಕಲ ವಸ್ತುಗಳನ್ನೂ ಕಣ್ಣಿಗೆ 'ವಿಷಯ' ಗಳೆಂದು ಹೇಳುತ್ತಾರೆ, ಅವುಗಳನ್ನೇ, ಆ ವಿಷಯಗಳನ್ನೇ ಆಚಾರ್ಯರು 'ಅರ್ಥ' ಗಳೆಂದು ಕರೆದಿದ್ದಾರೆ. ಇದೇ ರೀತಿ ಕಿವಿಯಿಂದ ಕೇಳುವ ಶಬ್ದಗಳು–ಸಂಗೀತ ಮೊದಲಾದುವೆಲ್ಲಾ ಕಿವಿಗೆ 'ವಿಷಯ'ಗಳು, ಅಥವಾ ಕಿವಿಯ (ಶ್ರೋತ್ರದ) ಅರ್ಥಗಳು. ಮನಸ್ಸಿನಿಂದ ಆಲೋಚಿಸುವ ಅಥವಾ ವಿಚಾರಮಾಡುವ 'ವಿಚಾರ'ಗಳೆಲ್ಲಾ ಮನಸ್ಸಿಗೆ 'ವಿಷಯ'ಗಳು ಅಥವಾ ಮನ'ಇಂದ್ರಿಯದ 'ಅರ್ಥ'ಗಳು. ಹೀಗೆಯೇ ಮಿಕ್ಕ ಸಕಲ ಇಂದ್ರಿಯಂಗಳ ಭಿನ್ನಭಿನ್ನ 'ವಿಷಯ'ಗಳನ್ನೂ (ಅರ್ಥಗಳನ್ನೂ) ತಿಳಿದುಕೊಳ್ಳಬೇಕು.

೫೩. ಪರಮಾತ್ಮನ ಹೋತೃತ್ವ : ನಮ್ಮ ಕಣ್ಣಿಗೆ ನೋಡುವುದಕ್ಕೆ ಬೇಕು ಬೇಕಾದ ವಿಷಯಂಗಳನ್ನೂ ಕಿವಿಗೆ ಕೇಳುವುದಕ್ಕೆ ಬೇಕಾದ ಮಾತುಕತೆ ಸಂಗೀತ –ಸಾಹಿತ್ಯ ಮೊದಲಾದ ವಿಷಯಂಗಳನ್ನೂ, ಮನಸ್ಸಿಗೆ ಆಲೋಚನೆ ಮಾಡಲು (ವಿಚಾರ ಮಾಡಲು) ಬೇಕಾದ ವಿಷಯಂಗಳನ್ನೂ ಹೀಗೆಯೇ ಏಕಾದಶೇಂದ್ರಿಯಂಗಳಿಗೂ ಅವುಗಳಿಗೆ ಬೇಕುಬೇಕಾದ 'ವಿಷಯ'ಗಳನ್ನು (ಅಥವಾ ಆಚಾರ್ಯರು ಹೇಳಿದ ಪದ ಉಪಯೋಗಿಸುವುದಾದರೆ ಅರ್ಥಗಳನ್ನು) ಆ ಭಗವಂತ ಕೊಡಿಸಿ ಆಯಾ ಇಂದ್ರಿಯಂಗಳನ್ನು ತೃಪ್ತಿಪಡಿಸುತ್ತಾನೆ. ಅಗ್ನಿಯಲ್ಲಿ ಹವಿಸ್ಸನ್ನು ಹಾಕಿ ಹೋಮಮಾಡಿ ದೇವತೆಗಳನ್ನು ತೃಪ್ತಿಪಡಿಸುವಂತೆಯೇ ಪರಮಾತ್ಮನು ನಮ್ಮ ಹನ್ನೊಂದು ಇಂದ್ರಿಯಗಳೆಂಬ ಅಗ್ನಿಗಳಲ್ಲಿ ಆಯಾ ಇಂದ್ರಿಯವೆಂಬ ಅಗ್ನಿಗೆ ಇಷ್ಟವಾದ 'ವಿಷಯ'ಗಳನ್ನು ಅಥವಾ 'ಅರ್ಥ' (ಪದಾರ್ಥ)ಗಳನ್ನು ಕೊಡಿಸಿ ಎಂದರೆ 'ಹೋಮಮಾಡಿ' ಆಯಾ ಇಂದ್ರಿಯಗಳನ್ನು ತೃಪ್ತಿ ಪಡಿಸುತ್ತಾನೆ, ಹೀಗೆ ಪರಮಾತ್ಮನು ಆಧ್ಯಾತ್ಮಿಕ ಹೋತೃವಾಗಿದ್ದಾನೆ ಎಂಬುದು ಹೋತೃ ಶಬ್ದಾರ್ಥ.

ಇದರ ಒಳಅರ್ಥವೇನೆಂದರೆ ಭಗವಂತ ನಮ್ಮ ಕಣ್ಣಿಗೆ, ಕಿವಿಗೆ, ಮನಸ್ಸಿಗೆ ಬೇಕುಬೇಕಾದ ವಿಷಯಂಗಳನ್ನು 'ಹೋಮಮಾಡಿ' ಎಂದರೆ ಒದಗಿಸಿಕೊಟ್ಟು ಈ ಇಂದ್ರಿಯಗಳನ್ನು ತೃಪ್ತಿಪಡಿಸುತ್ತಾನೆಯೆಂದು ತಿಳಿದುಕೊಂಡರೆ ಅಥವಾ (ಈ ರೀತಿ ಅನುಸಂಧಾನಮಾಡಿಕೊಂಡರೆ) ನಾವು ನೋಡುವುದು, ಕೇಳುವುದು, ತಿನ್ನುವುದು, ಕುಡಿಯುವುದು, ಎಲ್ಲವೂ ಭಗವತ್ಪ್ರೇರಣೆಯೇ—ಭಗವಂತನ

ಕಾರ್ಯವೇ—ಎಂಬುದು ಸ್ಪಷ್ಟವಾಗುತ್ತದೆ. ಆದರಿಂದ ಅವೆಲ್ಲವೂ ಭಗವತ್ಸೇವೆಯೇ ಎಂಬುದೂ ಅರ್ಥವಾಗಬಹುದು.

೫೪. **ಹರಿದಾಸರ ಹೇಳಿಕೆ** : ಹರಿದಾಸರಲ್ಲಿ ಅಗ್ರಣಿಗಳಾದ ಕನಕದಾಸರಿಗೆ ಈ ಆಧ್ಯಾತ್ಮಿಕ ವಿಚಾರದ ಅನುಭವವು ಹೃದ್ಗತವಾಗಿದ್ದುದರಿಂದಲೇ ಅವರು ಭಗವಂತನಲ್ಲಿ "ತನು ನಿನ್ನದು ಜೀವನ ನಿನ್ನದು" ಎಂದು ಹಾಡಿ ತಮ್ಮ ಅನುಭವವನ್ನೇ ತೋಡಿಕೊಂಡಿದ್ದಾರೆ. ಈ ಕೀರ್ತನೆಯನ್ನು ಅರ್ಥಮಾಡಿಕೊಂಡರೆ ಆಚಾರ್ಯರ ಋಗ್ಭಾಷ್ಯವಾಕ್ಯದ ಒಳ(ಗೂಢ) ಅರ್ಥವೂ ತಿಳಿದಂತಾಗುತ್ತದೆ.

ಕೇದಾರ ಗೌಳ ರಾಗ ಅಟ್ಟ ತಾಳ

ತನು ನಿನ್ನದು ಜೀವನ ನಿನ್ನದು। ರಂಗ ।
ಅನುದಿನದಲಿ ಬಾಹ ಸುಖ ದುಃಖ ನಿನ್ನದಯ್ಯ ॥ ಪ ॥

ಸವಿನುಡಿ ವೇದ ಪುರಾಣ ಶಾಸ್ತ್ರಂಗಳು ।
ಕಿವಿಗೊಟ್ಟು ಕೇಳುವ ಸ್ಥಿತಿ ನಿನ್ನದು ॥
ನವಯೌವನ ಮೋಹನಾಂಗೇರ ರೂಪವ ।
ಎವೆಯಿಕ್ಕದೆ ನೋಡುವ ನೋಟ ನಿನ್ನದಯ್ಯ ॥ ೧ ॥

ಒಡಗೂಡಿ ಗಂಧ ಕಸ್ತೂರಿ ಪರಿಮಳವೆಲ್ಲಾ ।
ಬಿಡದೆ (ಲೇಪಿಸಿ) ಕೊಂಬುವುದು ನಿನ್ನದು ॥
ಷಡುರಸದನ್ನಕ್ಕೆ ನಲಿದಾಡುವ ಜಿಹ್ವೆ ।
ಕಡು ರುಚಿಗೊಂಡರೆ ಆ ರುಚಿ ನಿನ್ನದಯ್ಯ ॥ ೨ ॥

ಮಾಯಾಪಾಶದ ಬಲೆಯೊಳು ಸಿಕ್ಕಿ ತೊಳಲುವ ।
ಕಾಯ ಪಂಚೇಂದ್ರಿಯ ಗತಿ ನಿನ್ನದು ॥
ಕಾಯಜಪಿತ ಕಾಗಿನೆಲೆಯಾದಿಕೇಶವ !
ರಾಯ ನೀನಲ್ಲದೆ ನರನು ಸ್ವತಂತ್ರನೇ ॥ ೩ ॥

(ಕಠಿನ ಶಬ್ದಾರ್ಥ) **ತನು**–ದೇಹ, ಶರೀರ **ಜೀವನ**–ಬದುಕಿರುವಾಗ ಅನುಭವಿಸುವ ಸಕಲೇಂದ್ರಿಯವ್ಯಾಪಾರಗಳೂ ; **ನಿನ್ನದು**-ನಿನ್ನ ಪ್ರೇರಣೆಯಿಂದಾದವು, ಆದ್ದರಿಂದ ನಿನ್ನ ಸೇವಾ ರೂಪವೇ ಆಗಿದೆ. **ಬಾಹ**–ಬರುವ, ಸಂಭವಿಸುವ **ಸವಿನುಡಿ**–ಇಂಪಾದ ಮಾತು **ಎವೆಯಿಕ್ಕದೆ**-ರೆಪ್ಪೆಹಾಕದೆ, **ಜಿಹ್ವೆ**–ನಾಲಗೆ **ಪಂಚೇಂದ್ರಿಯ**-ಪಂಚಜ್ಞಾನೇಂದ್ರಿಯ ಪಂಚಕರ್ಮೇಂದ್ರಿಯ

(ಗ) ಅಪರೋಕ್ಷಜ್ಞಾನಾತ್ಪೂರ್ವತಃ ಕರಣಶುದ್ಧಿದ್ವಾರಾ ತದುಪಾಸಕೇನ,

ಮತ್ತು ಪುರುಷನು **ಕಾಯಜಪಿತ**-ಮನ್ಮಥನ ತಂದೆ ವಿಷ್ಣು.

೫೫. **ಎಲ್ಲವೂ ಹರಿಸೇವೆ** : ಆದಕಾರಣ ನಾವು ಏನೇ ನೋಡಲಿ, ಏನೇ ಕೇಳಲಿ, ಏನೇ ತಿನ್ನಲಿ–ಕುಡಿಯಲಿ. ಏನೇ ಬಟ್ಟೆ ಧರಿಸಲಿ ಎಲ್ಲವೂ ಭಗವಂತ ಆಯಾ ಇಂದ್ರಿಯಾಗ್ನಿಗಳಲ್ಲಿ ಮಾಡಿದ ಹೋಮವೇ ಎಂದು ತಿಳಿದುಕೊಂಡಾಗ ಅವೆಲ್ಲವೂ ಭಗವತ್ಕಾರ್ಯಗಳೇ ಎಂದು ಅರ್ಥವಾಗುತ್ತದೆ. ಆದ್ದರಿಂದ ಭಗವತ್ಪ್ರೀತಿಕರವೂ ಆಗಿದೆ. ಹೀಗೆ ಅನುಸಂಧಾನಮಾಡಿಕೊಂಡಾಗ ಅವೆಲ್ಲ ಭಗವತ್ಸೇವೆಯೇ ಆಗುತ್ತದೆ ಎಂಬುದೂ ಸ್ಪಷ್ಟವಾಗುತ್ತದೆ. ಈ ಅನುಸಂಧಾನ ಬಂದಾಗ ಈ ಕರ್ಮಗಳೂ ಕ್ರಮೇಣ 'ಕರ್ಮಣಾ ಜ್ಞಾನಮಾತನೋತಿ' ಎಂಬ ಶ್ರುತಿಯಂತೆ ಅಪರೋಕ್ಷಜ್ಞಾನಕ್ಕೆ ಸಾಧನವೇ ಆಗುತ್ತವೆ.

೫೬. **(ಗ) ಭಾಗದ ಪದಶಃ ಅರ್ಥ ಅಪರೋಕ್ಷಜ್ಞಾನಾತ್ ಪೂರ್ವತಃ**–ಅಪರೋಕ್ಷಜ್ಞಾನವಾಗುವುದಕ್ಕಿಂತಲೂ (ಮೊದಲು ಅಥವಾ) ಪೂರ್ವದಲ್ಲಿ. **ಕರಣಶುದ್ಧಿದ್ವಾರಾ ತದುಪಾಸಕೇನ**–ಕರಣಗಳ (ಇಂದ್ರಿಯಗಳ) ಶುದ್ಧಿಯ ಮೂಲಕ ಆ ಕರ್ಮಗಳು ನಮಗೆ ಉಪಯೋಗಕ್ಕೆ ಬರುತ್ತವೆ ಎಂದು ತಿಳಿದು (ಇದೂ ಮುಂದಿರುವ 'ಆನಂದಪ್ರದಜ್ಞಾನೇನ' ಎಂಬುದಕ್ಕೆ ವಿಶೇಷಣ.)

೫೭. **ಅಪರೋಕ್ಷ ಜ್ಞಾನ (ವಿವರಣೆ)**—ಮೋಕ್ಷಾಧಿಕಾರಿಯಾಗುವುದಕ್ಕೆ ಮೊಟ್ಟಮೊದಲನೆಯ ಹೆಗ್ಗುರುತು ಭಗವಂತನ ಅಪರೋಕ್ಷಜ್ಞಾನವಾಗುವುದು. ಪರೋಕ್ಷ ಎಂಬಲ್ಲಿ ಪರಃ ಅಕ್ಷ ಎಂದು ಎರಡು ಅಂಶಗಳಿವೆ. ಅಕ್ಷಿ ಎಂದರೆ ಕಣ್ಣು, ಪರ: ಎಂದರೆ ಆಚೆ, ಹೊರಗೆ ಎಂದರ್ಥ ; ಆದ್ದರಿಂದ ಪರೋಕ್ಷ ಎಂದರೆ ಕಣ್ಣಿಗೆ ಕಾಣಿಸದಿರುವಂಥಾದ್ದು ಎಂದರ್ಥ. ನಾವು ರಾಮ–ಕೃಷ್ಣಾದಿ ಮೂರ್ತಿ (ವಿಗ್ರಹ)ಗಳನ್ನು ಪೂಜಿಸುತ್ತೇವಾದರೂ ಆ ಮೂರ್ತಿಗಳಲ್ಲಿ ಸನ್ನಿಹಿತನಾಗಿರುವ ಭಗವಂತ ನಮಗೆ ಕಾಣಿಸುವುದಿಲ್ಲ ; ಇದೇ ಪರೋಕ್ಷ. ಪರೋಕ್ಷಕ್ಕೆ ವಿರುದ್ಧವಾದುದು ಅಪರೋಕ್ಷ, ಎಂದರೆ ಪ್ರತ್ಯಕ್ಷವಾಗಿ ಕಾಣುವುದು ಎಂದರ್ಥ. ವ್ಯಾಸರಾಯರಿಗೆ, ವಾದಿರಾಜರಿಗೆ, ಕನಕದಾಸರು, ವಿಜಯದಾಸರು ಮೊದಲಾದ ಅನೇಕ ಮಹನೀಯರಿಗೆ ತಿರುಪತಿಯ ಶ್ರೀನಿವಾಸ ಪ್ರತ್ಯಕ್ಷವಾಗೇ ಕಾಣಿಸುತ್ತಿದ್ದ. ಆದ್ದರಿಂದ ಅವರೆಲ್ಲರನ್ನೂ 'ಅಪರೋಕ್ಷಜ್ಞಾನಿ'ಗಳೆಂದು ಕರೆಯಬಹುದು.

(ಘ) ತತಃ ಪರಂ ಭಗವದಿಚ್ಛಯಾ ಪ್ರಾಪ್ತ–ನಿಜಗುರೂಪದಿಷ್ಟ ಸ್ವಬಿಂಬವಿಷಯಕ–ಪೂರ್ಣಸಚ್ಚಿದಾನಂದಾತ್ಮಕಚತುರ್ಗುಣಾದ್ಯುಪಾಸನ —ಜಿಜ್ಞಾಸಾದಿಭಿಃ ಸ್ವಬಿಂಬಾಪರೋಕ್ಷಜ್ಞಾನೋತ್ಪಾದಕೇನ,

---

ಹೀಗೆಯೇ ನಾವು ಪೂಜೆ ಮಾಡುವ ಪ್ರತಿಮಂಗಳಲ್ಲಿರುವ ರಾಮಕೃಷ್ಣ ನರಸಿಂಹಾದಿ ರೂಪಗಳು ನಮಗೆ ಪ್ರತ್ಯಕ್ಷವಾಗಿ ಕಾಣುವುದಕ್ಕೇ 'ಅಪರೋಕ್ಷ ಜ್ಞಾನ' ಎಂದು ಹೆಸರು.

೫೮. ಅದು ಯಾವಾಗ ಆಗುತ್ತದೆ : ನಾವು ಮಾಡುವ ಕರ್ಮಗಳಿಲ್ಲವೂ ಪರಿಶುದ್ಧವಾಗಿ ಪರಿಪಕ್ವವಾಗಿದ್ದು ನಮಗೆ ಪ್ರಾರಬ್ಧಕರ್ಮದ ಅಡಚಣೆ (ಪ್ರಸ್ತುತ ಪ್ರತಿಬಂಧ) ಇಲ್ಲದಿದ್ದರೆ ಆಗ ಈ ಜನ್ಮದಲ್ಲೇ 'ಅಪರೋಕ್ಷಜ್ಞಾನ ವಾಗುವುದೆಂದು "ಐಹಿಕಂ" ಎಂಬ ಬ್ರಹ್ಮಸೂತ್ರ(೩ ಅಧ್ಯಾ. ೪ಪಾ. ೫೦ ಸೂತ್ರ) ಹೇಳುತ್ತದೆ. ಅಥವಾ ಯಾವ ಜನ್ಮದಲ್ಲಿ ಆ ಪ್ರಾರಬ್ಧಕರ್ಮದ ಪ್ರತಿಬಂಧ ನಿವಾರಣೆಯಾಗುತ್ತದೋ ಆ ಜನ್ಮದಲ್ಲೇ 'ಅಪರೋಕ್ಷಜ್ಞಾನೋದಯ' ವಾಗುತ್ತದೆ (ಅಲ್ಲೇ ಸೂ. ೫೨). ಹಾಗೆ ಅಪರೋಕ್ಷಜ್ಞಾನ ಬರುವುದಕ್ಕೆ ಮುಂಚೆ (ಪೂರ್ವದಲ್ಲಿ) ನಾವು ಮಾಡುವ ಕರ್ಮಗಳು ಅಂತಃಕರಣ (ಅಥವಾ ಇಂದ್ರಿಯಗಳ) ಶುದ್ಧಿಗೆ ಕಾರಣವಾಗುತ್ತವೆಯೇ ಹೊರತು ವ್ಯರ್ಥವಾಗುವುದಿಲ್ಲವೆಂಬುದೇ ಈ ಭಾಗದ ಮುಂಖ್ಯಾಭಿಪ್ರಾಯ.

೫೯. (ಘ)ಭಾಗದ ಪದಶಃ ಅರ್ಥ: ತತಃ ಪರಂ–ಆಲ್ಲಿಂದ ಮುಂದೆ ಎಂದರೆ ಅಪರೋಕ್ಷಜ್ಞಾನವುಂಟಾದ ಬಳಿಕ ಎಂದರ್ಥ, **ಭಗವದಿಚ್ಛಯಾ**–ಪರಮಾತ್ಮನ ಇಚ್ಛೆಯಿಂದಲೇ, **ಪ್ರಾಪ್ತ**–ಲಭಿಸಿದ (ಸಿಕ್ಕಿದ), **ನಿಜಗುರು** ತನ್ನ ಸ್ವರೂಪದ ಯೋಗ್ಯತೆಯನ್ನು ತಿಳಿದ ನಿಯತ ಗುರುವಿನಿಂದ, **ಉಪದಿಷ್ಟ** ಉಪದೇಶಿಸಿಲ್ಪಟ್ಟ **ಸ್ವಬಿಂಬವಿಷಯಕ** — ತನ್ನ ಬಿಂಬಮೂರ್ತಿಯ ಬಗ್ಗೆ **ಪೂರ್ಣಸಚ್ಚಿದಾನಂದಾತ್ಮಕ**–**ಪೂರ್ಣ**–ಸಂಪೂರ್ಣವಾಗಿ (ನಿರವಧಿಕವಾಗಿ ಅಥವಾ ಅನಂತವಾಗಿ), **ಸತ್**–ನಿರ್ದೋಷನೂ, **ಚಿತ್**-ಜ್ಞಾನಸ್ವರೂಪನೂ, **ಆನಂದ**–ಆನಂದಸ್ವರೂಪನೂ, **ಆತ್ಮಕ**–ಸರ್ವಸ್ವಾಮಿಯೂ ಆಗಿದ್ದಾನೆ ಎಂಬ, **ಚತುರ್ಗುಣ**-ನಾಲ್ಕು ಗುಣಗಳನ್ನು, **ಉಪಾಸನ-ಜಿಜ್ಞಾಸಾಧಿಭಿಃ**–ಉಪಾಸನ–ಧ್ಯಾನ ಮಾಡುವುದು, **ಜಿಜ್ಞಾಸಾ** – ವಿಚಾರಪೂರ್ವಕ ಶಾಸ್ತ್ರಗಳನ್ನು ಅಧ್ಯಯನ ಮಾಡುವುದು, **ಆದಿಭಿಃ**–ಶ್ರವಣ, ಮನನ, ನಿಧಿಧ್ಯಾಸನಗಳೇ ಮೊದಲಾದ

ಸಾಧನಗಳಿಂದ, **ಸ್ವಬಿಂಬಾಪರೋಕ್ಷಜ್ಞಾನೋತ್ಪಾದಕೇನ**–ತನ್ನ ಬಿಂಬ ಮೂರುತಿಯ ಅಪರೋಕ್ಷಜ್ಞಾನಕ್ಕೆ ಕಾರಣೀಭೂತವಾದ (ಇದೂ 'ಆನಂದಪ್ರದ ಜ್ಞಾನೇನ' ಎಂಬುದಕ್ಕೆ ವಿಶೇಷಣ).

೬೦. ಬಿಂಬಾಪರೋಕ್ಷ : ಭಗವದಪರೋಕ್ಷಜ್ಞಾನವು ಮೋಕ್ಷಕ್ಕೆ ಒಂದು ಮುಂಖ್ಯವಾದ ಮೆಟ್ಟಿಲಾದರೂ ಅದೇ ಕೊನೆಯ ಮೆಟ್ಟಿಲಲ್ಲ. ಏಕೆಂದರೆ "ನ ಸಾಮಾನ್ಯಾತ್" ಎಂಬ ಬ್ರಹ್ಮ ಸೂತ್ರವು (೩ ಅಧ್ಯಾ. ೩ ಪಾದ ೫೩ ಸೂತ್ರ) ಸ್ವಬಿಂಬಾಪರೋಕ್ಷವು ಆಗುವವರೆಗೆ ಯಾರೂ ಮೋಕ್ಷಕ್ಕೆ ಅಧಿಕಾರಿಯಾಗುವುದಿಲ್ಲ ವೆಂದು ಖಡಾಖಂಡಿತವಾಗಿ ಹೇಳುತ್ತದೆ. ಸ್ವಬಿಂಬಾಪರೋಕ್ಷವೆಂದರೆ ತನ್ನ ಹೃದಯಕಮಲದಲ್ಲಿರುವ ತನ್ನ ಜೀವದ ಬಿಂಬಮೂರುತಿಯಾದ ಭಗವಂತನ ರೂಪವನ್ನು ಪ್ರತ್ಯಕ್ಷವಾಗಿ ನೋಡುವುದು ಎಂದರ್ಥ. ಭಗವಂತನ ರಾಮ ಕೃಷ್ಣಾದಿ ಅನೇಕ ಅವತಾರರೂಪಗಳ ಸಾಕ್ಷಾತ್ಕಾರವಾದರೂ ನಮ್ಮ ಹೃದಯದಲ್ಲಿರುವ ನಮ್ಮ ಬಿಂಬಮೂರುತಿಯನ್ನು ಸಾಕ್ಷಾತ್ಕಾರ ಮಾಡಿಕೊಳ್ಳುವುದು ಅದಕ್ಕೂ ಮುಂಖ್ಯವಾದ ಸಂಗತಿಯೇ ಆಗಿದೆ. ಆದರೆ ಭಗವಂತನ ಸಾಕ್ಷಾತ್ಕಾರವಾಗುವುದು ಹೇಗೆ ಕಷ್ಟವೋ ಅದಕ್ಕಿಂತಲೂ ಕಷ್ಟ ಸ್ವಬಿಂಬಾಪರೋಕ್ಷವಾಗುವುದು. ಆಂತೆಯೇ ಇದನ್ನು ಮುಂದಿನ ಮೆಟ್ಟಿಲೆಂದು ಶಾಸ್ತ್ರ ಹೇಳುತ್ತದೆ.

೬೧. (ಘ) ಭಾಗದ ವಿವರಣೆ : ಸ್ವಬಿಂಬಾಪರೋಕ್ಷವಾಗುವುದು ಹೇಗೆಂಬುದನ್ನೇ ಗದ್ಯದ (ಘ)–ಭಾಗ ವರ್ಣಿಸುತ್ತದೆ. ಭಗವತ್ಸಾಕ್ಷಾತ್ಕಾರವಾದ ಮಾತ್ರಕ್ಕೆ ನಮ್ಮ ಸಾಧನೆ–ನಮ್ಮ ಉಪಾಸನೆ–ಮುಂಗಿದಂತಾಗಲಿಲ್ಲ. ಆದ್ದರಿಂದ ಭಗವತ್ಸಾಕ್ಷಾತ್ಕಾರವಾದ ಮೇಲೂ ನಮ್ಮ ಶ್ರವಣ–ಮನನ–ನಿಧಿಧ್ಯಾಸನಾದಿಗಳನ್ನು ಮುಂದುವರಿಸಲೇ ಬೇಕು. ನಮ್ಮ ಈ ಸಾಧನದಿಂದ ತುಷ್ಟನಾದ ಭಗವಂತ ನಮ್ಮ ನಿಯತಗುರುಗಳಾರೆಂಬುದನ್ನು ತೋರಿಸಿಕೊಡುತ್ತಾನೆ. ನಮ್ಮ ಪ್ರಯತ್ನ ಮಾತ್ರದಿಂದ ಆ ನಿಯತಗುರುಗಳು ದೊರಕುವುದಿಲ್ಲ ; ಆದ್ದರಿಂದಲೇ ಗದ್ಯದಲ್ಲಿ 'ಭಗವದಿಚ್ಛಯಾ ಪ್ರಾಪ್ತ ನಿಜಗುರು' ಎಂದು ಪದಾವಳಿ ಪ್ರಯೋಗ ಮಾಡಿದ್ದಾರೆ. 'ನಿಜಗುರು' ಎಂದರೆ ನಮ್ಮ ಸ್ವರೂಪ ಯೋಗ್ಯತೆಯನ್ನು ತಿಳಿದ, ನಮ್ಮ ಸ್ವರೂಪೋದ್ಧಾರಕರಾದ ಗುರುಗಳು ಎಂದರ್ಥ, ಆ ನಿಜಗುರುಗಳು ನಮ್ಮ ಸ್ವರೂಪವನ್ನು ತಿಳಿದವರೇ ಆಗಿರುವುದರಿಂದ ನಮಗೆ ಭಗವಂತನ ಎಷ್ಟು ಗುಣಗಳನ್ನು ಉಪಾಸನೆ ಮಾಡುವ ಯೋಗ್ಯತೆ ಅಥವಾ ಅರ್ಹತೆ ಇದೆಯೆಂಬುದನ್ನು ತಿಳಿದು ನಮಗೆ ಎಷ್ಟು ಗುಣಗಳ ಉಪಾಸನಾವಿಧಾನವನ್ನೇ ಉಪದೇಶ ಮಾಡುತ್ತಾರೆ. ಮೋಕ್ಷಾಧಿಕಾರಿಗಳಲ್ಲಿ ಮನುಷ್ಯೋತ್ತಮರೇ ಎಲ್ಲರಿಗಿಂತ ಕೆಳಗಿನ ಮಟ್ಟದ

ಅಧಿಕಾರಿಗಳು. ಆದರೂ ಸಹ 'ಸಚ್ಚಿದಾನಂದ ಆತ್ಮ' ಎಂಬ ನಾಲ್ಕು ಗುಣಗಳನ್ನು ಉಪಾಸನೆ ಮಾಡಲೇಬೇಕೆಂದು ಆನಂದಾಧಿಕರಣ*ದಲ್ಲಿ ಹೇಳಿದೆ. ಆದರಂತೆ ನಮ್ಮ ನಿಯಂತ ಗುರುಗಳು ನಮಗೆ ಈ ನಾಲ್ಕು ಗುಣಗಳನ್ನು ಹೇಗೆ ಉಪಾಸನೆ ಮಾಡಬೇಕೆಂಬುದನ್ನೇ ಪ್ರತ್ಯಕ್ಷವಾಗಿ ತಮ್ಮ ಅನುಭವದಿಂದ ಉಪದೇಶ ಮಾಡುವರು. ಯಾರಿಗೆ ನಾಲ್ಕು ಗುಣಗಳಿಗೂ ಹೆಚ್ಚು ಗುಣಗಳನ್ನು ಉಪಾಸನೆ ಮಾಡುವ ಅರ್ಹತೆಯಿದೆಯೋ ಅವರಿಗೆ ಅಷ್ಟು ಗುಣಗಳನ್ನೇ ಉಪದೇಶ ಮಾಡುತ್ತಾರೆ. ಅವರ ಉಪದೇಶ ತಮ್ಮ ಸ್ವಾನುಭವದ ಉಪದೇಶವಾದ್ದರಿಂದ ಅದು ಶೀಘ್ರವಾಗಿ ಫಲಕಾರಿಯಾಗುತ್ತದೆ. ಅದರಂತೆ-ನಿಯತಗುರುಗಳ ಉಪದೇಶದಂತೆ- 'ಸತ್' ನಿರ್ದೋಷ, ಚಿತ್-ಜ್ಞಾನಸ್ವರೂಪ, ಆನಂದ ಸುಖಸ್ವರೂಪ, ಆತ್ಮ-ಸರ್ವ ಸ್ವಾಮಿಯೂ ಮತ್ತು ಸ್ವಾಮಿಯೂ ಆಗಿದ್ದಾನೆ, ಅಲ್ಲದೆ ಈ ಎಲ್ಲ ಗುಣಗಳೂ 'ಪೂರ್ಣ'ವಾದುವು ಎಂದರೆ ನಿರವಧಿಕಾಲವಾದುವು ಅಥವಾ ಅನಂತವಾದುವು ಎಂಬುದನ್ನು ಉಪಾಸನೆ ಮಾಡುತ್ತಾ ವಿಚಾರಗಳನ್ನು ಶಾಸ್ತ್ರಜಿಜ್ಞಾಸೆಯಿಂದಲೂ ಶ್ರವಣ-ಮನನ ನಿಧಿದ್ಯಾಸನರೂಪ ಉಪಾಸನೆಯಿಂದಲೂ ಅನುಷ್ಠಾನ ಮಾಡುತ್ತಾ ಹೋದರೆ ಆಗ ಬಿಂಬಾಪರೋಕ್ಷವಾಗುವುದು. ಹೀಗೆ ನಮಗೆ ಮನುಂದಿನ ಮೆಟ್ಟಿಲು ಹತ್ತಿದಂತಾಗುತ್ತದೆ ಎಂಬುದೇ ಈ ಭಾಗದ ಮುಖ್ಯ ಭಾವ. ನಮ್ಮ ಕರ್ಮಗಳು ಭಗತ್ಪ್ರೀತಿಕರವಾಗಿ ಅದರಿಂದ ವಿಷ್ಣುಸರ್ವೋತ್ತಮತ್ವ ಜ್ಞಾನವುಂಟಾಗುವುದು ಮೊದಲನೆಯ ಹಂತ. ಮುಂದೆ ಕರಣಶುದ್ಧಿಗೆ ಕಾರಣವಾಗುವುದು ಎರಡನೆಯ ಹಂತ. ಇನ್ನೂ ಮುಂದೆ ಭಗವತ್ಸಾಕ್ಷಾತ್ಕಾರವಾಗುವುದು ಮೂರನೆಯ ಹಂತ. ಆಲ್ಲಿಂದ ಮುಂದೆ ಸ್ವಬಿಂಬಾಪರೋಕ್ಷವಾಗುವುದು ನಾಲ್ಕನೆಯ ಹಂತವೆಂದು ಬೇರೆ ಬೇರೆ ಹಂತಗಳನ್ನು ಗಮನಿಸಬೇಕು. ಈಗ ಅದರ ಮುಂದಿನ ಹಂತಗಳನ್ನು ತಿಳಿಸುತ್ತಾ 'ಜ್ಞಾನ'ದ ವಿವರಣೆಯನ್ನು ಮುಂದುವರಿಸುತ್ತಾರೆ.

೬೨. (ಜ)ಭಾಗದ ಪದಶಃ ಅರ್ಥ-ಮನುಷ್ಯೋತ್ತಮಂ ಆರಭ್ಯ ಮನುಷ್ಯೋತ್ತಮರನ್ನು ಆರಂಭಿಸಿ, **ಚತುರ್ಮುಖಪರ್ಯಂತಾನಾಂ**- ಬ್ರಹ್ಮದೇವರ ವರೆಗೆ ಇರುವ, **ಪಂಚವಿಧಮುಕ್ತಿಯೋಗ್ಯಾನಾಂ**-'ದೇವರ್ಷಿ ಪಿತೃ-ಪ-ನರಾ ಇತಿ ಮುಕ್ತಾಸ್ತು ಪಂಚಧಾ' ಎಂಬ ತತ್ವಸಂಖ್ಯಾನೋಕ್ತಿಯಂತೆ ದೇವತೆಗಳು (ಉತ್ತಮಾಧಿಕಾರಿಗಳು), ಋಷಿಗಳು ಪಿತೃಗಳು, ಚಕ್ರವರ್ತಿಗಳು,

* ಆನಂದರಾಯಃ ಪ್ರಧಾನಸ್ಯ (೩ ಅ. ೩ ಪಾ. ೫ ಅಧಿ. ೧೨ ಸೂ.)

(ಜ) ಮನಷ್ಯೋತ್ತಮಮಾರಭ್ಯ ಚತುರ್ಮುಖಪರ್ಯಂತಾನಾಂ ಪಂಚವಿಧಮುಕ್ತಿಯೋಗ್ಯಾನಾಂ ಚ ಸ್ವಬಿಂಬೋಪಾಸಿಭಿಃ ಲಿಂಗಾಪಗಮೇ ಸ್ವರೂಪಾನಂದಾವಿರ್ಭಾವ— ವೈಚಿತ್ರ್ಯಾನಂದಪ್ರದಜ್ಞಾನೇನ ತ್ವಯಿಸಮರ್ಪಿತೇನ ತ್ವತ್ಪೂಜೈವಾಸ್ತು ॥

(ಮಧ್ಯಮಾಧಿಕಾರಿಗಳು) ಮತ್ತು (ನರಾಃ =)ಮನುಷ್ಯೋತ್ತಮರು ಎಂದು ಐದು ಬಗೆಯಾಗಿರುವ ಮುಕ್ತಿಯೋಗ್ಯರಿಗೂ ಕೂಡ. **ಸ್ವ ಬಿಂಬೋಪಾಸಿಭಿಃ**-ತಮ್ಮ ತಮ್ಮ ಬಿಂಬರೂಪಿ ಪರಮಾತ್ಮನನ್ನೇ ಉಪಾಸನೆ ಮಾಡುತ್ತಿರುವಾಗ. **ಲಿಂಗಾಪಗನೇ-ಲಿಂಗ**-ಲಿಂಗದೇಹವು. **ಅಪಗನೇ**-ವಿರಜಾನದೀಸ್ನಾನದಿಂದ ಕಳಚಿ ಹೋಗಲು, **ಸ್ವರೂಪಾನಂದಾವಿರ್ಭಾವವೈಚಿತ್ರ್ಯ** – ತೈತ್ತಿರೀಯೋಪನಿಷತ್ತಿನ ಆನಂದವಲ್ಲಿಯಲ್ಲಿ ಹೇಳಿದಂತೆ ಒಬ್ಬರಿಗಿಂತ ಇನ್ನೊಬ್ಬರಿಗೆ ನೂರರಷ್ಟು ಹೆಚ್ಚು ಆನಂದದಂತೆ ಹನ್ನೊಂದು ಬಗೆಯಾಗಿದ್ದು ಎಲ್ಲರಿಗಿಂತಲೂ ಹೆಚ್ಚು ಆನಂದ ಬ್ರಹ್ಮದೇವರಿಗೆ ಬರುತ್ತದೆ ; ಆದ್ದರಿಂದಲೇ ಅವರಿಗೆ 'ಶತಾನಂದ' ಎಂದು ಹೆಸರು. ಹೀಗೆ ಆನಂದದಲ್ಲೇ ಬೇರೆ ಬೇರೆ ಮಟ್ಟವಿರುವ (ವೈಚಿತ್ರ್ಯ) ಅವರವರ ಸ್ವರೂಪಾನಂದವು ಅಭಿವ್ಯಕ್ತ (ಆವಿರ್ಭಾವ) ವಾಗುವುದು ; ಈ ಪ್ರಕಾರ ತಮ್ಮ ತಮ್ಮ ಸ್ವರೂಪಾನಂದವೇ ಪ್ರಕಟವಾಗಲು ಕಾರಣವಾದ **ಆನಂದಪ್ರದ-ಜ್ಞಾನೇನ**-ಆನಂದವನ್ನು ಕೊಡುವುದಕ್ಕೆ ಕಾರಣೀಭೂತವಾದ ಜ್ಞಾನದಿಂದ. **ತ್ವಯಿ ಸಮರ್ಪಿತೇನ**-ನಿನ್ನಲ್ಲಿ ಸಮರ್ಪಿಸುವುದರಿಂದ, **ತ್ವತ್ಪೂಜೈವ ಅಸ್ತು**-ನಿನ್ನ ಪೂಜೆಯೇ ಆಗಲಿ ಎಂದು ಅರ್ಥ.

೬೩. ಆನಂದಾವಿರ್ಭಾವ : ಸ್ವಬಿಂಬಾಪರೋಕ್ಷವಾದ ಮೇಲೆ ಬ್ರಹ್ಮನ ನೂರು ವರ್ಷ ಮುಂಗಿಯುವ ವರೆಗೆ ಕಾದಿದ್ದು ಪ್ರಳಯಕಾಲದಲ್ಲಿ ಬ್ರಹ್ಮನ ಜೊತೆ ವಿರಜಾನದೀ ಸ್ನಾನಮಾಡಿದಾಗ ಲಿಂಗದೇಹವು ಕಳಚಿಹೋಗುವುದು. ಆಗ ಅವರವರ ಆನಂದವು ಅವರವರಿಗೆ ಅಭಿವ್ಯಕ್ತವಾಗುವುದು. ಮುಕ್ತಿಯೋಗ್ಯರು ೧. ದೇವತೆಗಳು, ೨. ಋಷಿಗಳು, ೩. ಪಿತೃಗಳು ೪. ಚಕ್ರವರ್ತಿಗಳು, ೫. ಮನುಷ್ಯೋತ್ತಮರು ಎಂದು ಐದು ವಿಧವಾಗಿದ್ದಾರೆ. (ಮನುಷ್ಯರಲ್ಲೇ ಮೂರು ವಿಧ- ಎಲ್ಲರಿಗಿಂತ ಅಧಮರು ವಿಷ್ಣುದ್ವೇಷ ಮಾಡುವವರು. ಆದರಿಂದ ಅವರಿಗೆ ಅಂಧಂತಮಸ್ಸೇ ಆಗುವುದು ನಿಶ್ಚಿತ. ಕೆಲವರಿಗೆ ವಿಷ್ಣುದ್ವೇಷವಿಲ್ಲದಿದ್ದರೂ ವಿಷ್ಣುಭಕ್ತಿಯಾಗಲಿ ವಿಷ್ಣುಸರ್ವೋತ್ತಮತ್ವಜ್ಞಾನವಾಗಲಿ ದೃಢವಾಗಿರುವುದಿಲ್ಲ- ಅವರೇ ನಿತ್ಯಸಂಸಾರಿಗಳು ; ಅವರು ಮಧ್ಯಮರು. ಮನುಷ್ಯರಲ್ಲೇ ವಿಷ್ಣುಸರ್ವೋ

ತತ್ತಥಾ, ಮದೀಯೇ ಶುಭಾಶುಭಕರ್ಮಣೋರ್ಮಧ್ಯೇ ಅಶುಭ
ಕರ್ಮಾನುರೂಪೇಣ ತತ್ಪ್ರೇರಿತಮುಖ್ಯಪ್ರಾಣೇನ ತತ್ತ್ವಾಭಿಮಾನ್ಯಸುರ
ಮಾರಭ್ಯ ಕಲಿಪರ್ಯಂತಾನಾಂ ತಮೋಯೋಗ್ಯಾನಾಂ ಪಾಪಬಾಧಿಭಿಃ
ಗದಾಯುಧಪ್ರದಾನೇನ ಮಹಾತಮಸಿ ಸ್ಥಿತಾನಾಂ ದುಃಖಾನುಮಾನೇನ
ಸ್ವರೂಪಭೂತ—ದುಃಖಾತಿಶಯಪ್ರದಾತೇತಿ ಜ್ಞಾನೇನ ತ್ವಯಿ ಸಮರ್ಪಿ
ತೇನ ತ್ವತ್ಪೂಜೈವಾಸ್ತು ॥

ತ್ತಮಂತ್ವಜ್ಞಾನವುಳ್ಳ ವಿಷ್ಣುಭಕ್ತರನ್ನು ಮನುಷ್ಯೋತ್ತಮರೆಂದು ಕರೆಯುವರು.)
ಈ ಐದು ವಿಧದವರಲ್ಲೂ ಸ್ವರೂಪಾನಂದದಲ್ಲಿ ಹನ್ನೊಂದು ಬೇರೆ ಬೇರೆ ತಾರ
ತಮ್ಯವಿದೆ. ಎಲ್ಲರಿಗಿಂತ ಕಡಿಮೆ ಆನಂದ ಮನುಷ್ಯೋತ್ತಮರಿಗೆ. ಎಲ್ಲರಿಗಿಂತ
ಹೆಚ್ಚು ಆನಂದ ಬ್ರಹ್ಮದೇವರದ್ದು. ನಾವು ಮಾಡುವ ಶುಭಕರ್ಮಗಳನ್ನು ಭಗವ
ತ್ಪೂಜಾರೂಪವೆಂದು ತಿಳಿದು ಶ್ರೀಹರಿಯಲ್ಲಿ ಸಮರ್ಪಿಸಿದರೆ ಆ ಶುಭಕರ್ಮವು
ಸಫಲವಾಗಿ (ಫಲಿಸಿ) ನಮ್ಮನ್ನು ಒಂದೊಂದು ಮೆಟ್ಟಿಲಾಗಿ ಮೇಲಕ್ಕೆ ಒಯ್ಯುತ್ತ
ಕ್ರಮವಾಗಿ ಅಪರೋಕ್ಷಜ್ಞಾನಕ್ಕೂ ಸ್ವಬಿಂಬಾಪರೋಕ್ಷಕ್ಕೂ ಕಾರಣವಾಗಿ ಕೊನೆಗೆ
ಮೋಕ್ಷಕ್ಕೂ ಕಾರಣವಾಗಿ ನಮ್ಮ ಸ್ವರೂಪಾನಂದವು ಅಭಿವ್ಯಕ್ತವಾಗುವುದಕ್ಕೂ
ಕಾರಣವಾಗುತ್ತದೆ. ಆದ್ದರಿಂದ ಶುಭಾಶುಭಕರ್ಮಗಳ ಪೈಕಿ ಶುಭಕರ್ಮಗಳನ್ನು
ನಿನ್ನಲ್ಲಿ (ಭಗವಂತನಲ್ಲಿ) ಸಮರ್ಪಿಸಿದ್ದೇನೆ—ಇದು ನಿನ್ನ ಪೂಜಾರೂಪವೇ ಆಗಲಿ
ಎಂಬುದೇ ಈ ಶುಭಕರ್ಮಸಮರ್ಪಣವಿಧಾನದ ಒಟ್ಟು ಅಭಿಪ್ರಾಯ.

ii. ಅಶುಭಕರ್ಮಗಳನ್ನು ಶ್ರೀಹರಿಯಲ್ಲಿ ಸಮರ್ಪಿಸುವ ವಿಧಾನ

೬೪. **ಅವತಾರಿಕೆ** : ಹೀಗೆ ಶುಭಕರ್ಮಗಳನ್ನು ಭಗವಂತನಲ್ಲಿ ಸಮರ್ಪಿ
ಸುವ ವಿಧಾನವನ್ನು ಆದರದಿಂದ ವಿಸ್ತಾರವಾಗಿ ವಿವರಿಸಿದ ಬಳಿಕ ಅಶುಭಕರ್ಮ
ಗಳನ್ನು ಸಮರ್ಪಿಸುವ ವಿಧಾನವನ್ನು ಹೆಚ್ಚು ಬೆಳಸದೆ ಸಂಕ್ಷೇಪವಾಗಿ ಹೇಳಿ
ಮುಗಿಸಿಬಿಡುತ್ತಾರೆ.

೬೫. **ಪದಶಃ ಅರ್ಥ-ತತ್** : ಆದರಿಂದ, **ತಥಾ**—ಹಾಗೆಯೇ (ಆದೇ
ರೀತಿಯೇ), **ಮದೀಯೇ**—ನನ್ನ (ಎಂದರೆ ನಾನು ಮಾಡಿದ ಎಂದರ್ಥ), **ಶುಭಾ
ಶುಭಕರ್ಮಣೋಃ ಮಧ್ಯೇ**—ಶುಭಕರ್ಮ-ಅಶುಭಕರ್ಮಗಳ ಪೈಕಿ. **ಅಶುಭ
ಕರ್ಮಾನುಸಾರೇಣ**—ಅಶುಭಕರ್ಮಗಳಿಗೆ ಅನುಸಾರವಾಗಿ. **ತತ್**ಪ್ರೇರಿತ
ಮುಖ್ಯಪ್ರಾಣೇನ-ನಿನ್ನಿಂದ ಪ್ರೇರಿತನಾದ ಮುಖ್ಯಪ್ರಾಣದೇವರಿಂದ, **ತತ್ತ್ವಾಭಿ**

ಮಾನಿ-ಅಸುರಂ ಆರಭ್ಯ—ನನ್ನನ್ನು ಕೆಟ್ಟ ಕೆಲಸಗಳಲ್ಲಿ ಪ್ರೇರಿಸುವ ತತ್ತ್ವಾಭಿ
ಮಾನಿ ಅಸುರರ ಪೈಕಿ ಅತ್ಯಂತ ಕಡೆಯವನಿಂದ ಆರಂಭಿಸಿ, **ಕಲಿಪರ್ಯಂತಾ
ನಾಂ**—ಅತ್ಯಂತ ಪ್ರಬಲನಾದ ಕಲಿಯವರೆಗೆ ಇರುವ, **ತಮೋಯೋ-
ಗ್ಯಾನಾಂ**—ತಮೋಯೋಗ್ಯರಿಗೆ (ಮುಕ್ತಿಯೋಗ್ಯರಿಗೆ ಅತ್ಯಂತ ವಿರುದ್ಧರು
'ತಮೋಯೋಗ್ಯ'ರು). **ಪಾಪಬಾಧಿಭಿಃ**=ಪಾಪಗಳಿಂದ ಬಾಧಿಸಲ್ಪಡುವುದ
ರಿಂದ. **ಗದಾಯುಧಪ್ರದಾನೇನ**—ಗದಾಪ್ರಹಾರದಿಂದ, **ಮಹಾತಮಸಿ
ಸ್ಥಿತಾನಾಂ**—ಘೋರವಾದ ಅಂಧಂತಮಸ್ಸಿನಲ್ಲಿ ಇರುವವರಿಗೆ, **ದುಃಖಾನು
ಮಾನೇನ**—ದುಃಖದ ಆಳತೆಯಿಂದ, **ಸ್ವರೂಪ-ಭೂತ ದುಃಖಾತಿಶಯ
ಪ್ರದಾತೇತಿ ಜ್ಞಾನೇನ**—ಸ್ವರೂಪಭೂತ ದುಃಖಕ್ಕಿಂತ ಹೆಚ್ಚು ದುಃಖವನ್ನು
ಕೊಡುವವನು ಎಂಬ ಜ್ಞಾನದಿಂದ (ಎಂಬ ಜ್ಞಾನಪೂರ್ವಕವಾಗಿ ಎಂದರ್ಥ),
ತ್ವಯಿ ಸಮರ್ಪಿತೇನ—ನಿನ್ನಲ್ಲಿ ಸಮರ್ಪಿಸುವುದರಿಂದ, **ತ್ವತ್ಪೂಜೈವ
ಅಸ್ತು**—ನಿನ್ನ ಪೂಜೆಯೇ ಆಗಲಿ.

೬೬. **ಇದರ ವಿವರಣೆ** : ಹೇ ಭಗವಂತ, ನಾನು ಮಾಡಿದ ಶುಭಾಶುಭ
ಕರ್ಮಗಳಲ್ಲಿ ಅಶುಭಕರ್ಮಗಳನ್ನು ನಿನ್ನಲ್ಲಿ ಸಮರ್ಪಿಸುತ್ತಿದ್ದೇನೆ. ಏಕೆಂದರೆ
ಮಾಡಿದ ಅಶುಭಕರ್ಮಗಳ ಫಲಿದಲ್ಲಿ ಸ್ವಲ್ಪವನ್ನು ಮಾತ್ರ ನನಗೆ ಕೊಟ್ಟು ಉಳಿದ
ಭಾಗವನ್ನು ತಾರತಮ್ಯಾನುಸಾರ ಪಾಪಕಾರ್ಯಪ್ರೇರಕರಾದ ಎಲ್ಲ ತತ್ತ್ವಾಭಿಮಾನಿ
ದೈತ್ಯರಿಗೂ ಭಗವಂತ ಹಂಚಿಬಿಡುತ್ತಾನೆ. ಅದರಿಂದ ಆ ದೈತ್ಯರಿಗೆ-ಮಹಾ
ತಮಸ್ಸಿನಲ್ಲಿ ಬಿದ್ದಾಗ ಅವರ ಸ್ವರೂಪಭೂತ ದುಃಖವು ಅಧಿಕವಾಗಿ ಹೆಚ್ಚು
ದುಃಖಕ್ಕೆ ಕಾರಣವಾಗುತ್ತದೆ. ಹೀಗೆ ನನ್ನ ಅಶುಭಕರ್ಮಗಳೂ ಭಗವತ್ಪೂಜಾ
ರೂಪವೇ ಆಗಲಿಯೆಂದು ಸಮಾಪ್ತಿ ಮಾಡಿದ್ದಾರೆ.

೬೭. **ಸಿಂಹಾವಲೋಕನ** : ಹೀಗೆ ಈ ಸರ್ವಸಮರ್ಪಣಗದ್ಯವು ಆಕಾರ
ದಲ್ಲಿ ಚಿಕ್ಕದಾಗಿ ಕಂಡರೂ ಅನೇಕಾರ್ಥಗರ್ಭಿತವಾಗಿದೆ. ಇದರ ಯಥಾವತಿ
ಅರ್ಥವನ್ನು ತಿಳಿದುಕೊಂಡು ಪ್ರತಿನಿತ್ಯ ನಮ್ಮ ಕರ್ಮಗಳನ್ನು ಭಗವಂತನಲ್ಲಿ
ಸಮರ್ಪಿಸಿದರೆ ನಾವು ಕೃತಕೃತ್ಯರಾಗುವುದೆಂದು ಹೇಳತಕ್ಕದ್ದೇನಿದೆ. ಆದಕಾರಣ
ಇಷ್ಟೇ ಗದ್ಯದ ಸಿಂಹಾವಲೋಕನದೊಡನೆ ಈ ನಮ್ಮ ಯಥಾವತಿ ವರ್ಣನೆಯನ್ನು
ಸಮಾಪ್ತಿಪಡಿಸಿ ವಂದ್ಯೇಶನಲ್ಲಿ ಸಮರ್ಪಿಸುವೆವು.

ಈ ಗದ್ಯದಲ್ಲಿ ಸಂಬೋಧನಾಭಾಗವೆಂದೂ ಪ್ರಾರ್ಥನಾಭಾಗವೆಂದೂ
ಎರಡು ಮುಖ್ಯ ಭಾಗಗಳಿವೆ. ಸಂಬೋಧನಾಭಾಗವು ನಮ್ಮ ಜಾಗ್ರದಾದ್ಯವ
ಸ್ಥಾನಿಯಾಮಕಭಗವದ್ರೂಪಗಳ ಸಂಬೋಧನೆಯಿಂದ ಆರಂಭವಾಗಿ ನಮ್ಮ ಬಿಂಬ

ಮೂರ್ತಿಯಂ ವರೆಗೆ ಎಂಟುಂ ಸಂಬೋಧನೆಗಳನ್ನು ಒಳಗೊಂಡಿದೆ. ಪ್ರಾರ್ಥನಾ ಭಾಗವು ನಮ್ಮ ಶಂಭಾಶಂಭಕರ್ಮಗಳಿಗನುಸಾರವಾಗಿ ಎರಡುಂ ಪ್ರಕಾರದ್ದಾಗಿದೆ. ನಾವು ಮಾಡುವ ಶುಭಕರ್ಮಗಳುಂ ಸಂಕಲ್ಪಿತ ಭಗವತ್ಪ್ರೀತ್ಯಾತ್ಮಕವಾಗಿದ್ದರೆ ಅವು ಕ್ರಮೇಣ ನಮಗೆ ಕರಣಶುದ್ಧಿದ್ವಾರಾ ಭಗವದಪರೋಕ್ಷಕ್ಕೂ ಕೊನೆಗೆ ಬಿಂಬಾ ಪರೋಕ್ಷಕ್ಕೂ ಕಾರಣವಾಗಿ ನಮ್ಮ ಸ್ವರೂಪಾನುಬಂಧಾವಿರ್ಭಾವಕ್ಕೆ ಕಾರಣವಾಗುವುದರಿಂದ ಭಗವತ್ಪ್ರೀಣನೆಯೇ ಆಗುತ್ತವೆ. ಅಶುಭಕರ್ಮಫಲಗಳ ಕೆಲವು ದುಷ್ಫಲಗಳನ್ನು ನಮ್ಮ ಯೋಗ್ಯತಾನುಸಾರ ನಾವೇ ಅನುಭವಿಸುವಂತೆ ಮಾಡಿ ಉಳಿಕ್ಕ ಫಲವನ್ನು ಭಗವಂತ ಆ ದುಷ್ಕರ್ಮಗಳಿಗೆ ಪ್ರೇರಕರಾದ ತತ್ತ್ವಾಭಿಮಾನಿದೈತ್ಯರಿಗೆ ಕಲಿಪರ್ಯಂತವಾಗಿ ಅವರವರ ಯೋಗ್ಯತಾನುಸಾರ ಹಂಚಿಬಿಟ್ಟು ಅವುಗಳಿಂದ ಅವರು ಹೆಚ್ಚಿ ದುಃಖವನ್ನು ಅಂಧಂತಮಸ್ಸಿನಲ್ಲಿ ಅನುಭವಿಸುವಂತೆ ಮಾಡುವುದೂ ಶ್ರೀಹರಿಯು ಸತ್ಯಸಂಕಲ್ಪವೆಂದು ತಿಳಿದುಕೊಂಡು ಭಗವಂತನಲ್ಲಿ ಅವುಗಳನ್ನು ಸಮರ್ಪಿಸಿದರೆ ಅಶುಭಕರ್ಮಗಳೂ ಶ್ರೀಹರಿಯ ಪೂಜೆಯೇ ಆಗುತ್ತವೆ. ಇದರಿಂದ ನಾವು ಕರ್ಮಬಂಧನದಿಂದ ಮುಕ್ತರಾಗುತ್ತೇವೆ ಎಂಬುದೇ ಸರ್ವ ಸಮರ್ಪಣಗದ್ಯದ ಮುಖ್ಯಾಭಿಪ್ರಾಯ.

೬೮. ಭಗವತ್ಸಮರ್ಪಣೆ

ಸಮರ್ಪಣಾಖ್ಯಂ ಗದ್ಯಂ ಯತ್ ರಾಘವೇಂದ್ರಯತೀರಿತಮ್ ।
ಅರ್ಥತೋಽಗಾಧಮೇವಾಸ್ತಿ ಯದ್ಯಪ್ಯಲ್ಪಪದಾನ್ವಿತಮ್ ॥ ೧ ॥

೧. ಅರ್ಥ : ಶ್ರೀಮದ್ರಾಘವೇಂದ್ರತೀರ್ಥರು ರಚಿಸಿದ 'ಸರ್ವಸಮರ್ಪಣ ಗದ್ಯ'ವು ಕೆಲವೇ ಸ್ವಲ್ಪ ಪದಗಳಿಂದ (ಚಿಕ್ಕದಾಗಿ) ರಚಿತವಾಗಿದ್ದರೂ ಇದರ ಅರ್ಥ ಅಗಾಧವಾಗಿದೆ.

ತದಿದಂ ವಾಕ್ಯ (ಬುದ್ಧಿ) ಶುದ್ಧ್ಯರ್ಥಂ ವಿಷ್ಣುತೀರ್ಥೇನ ವರ್ಣಿತಮ್।
ಸೇವಯಾ ತ್ವನಯಾ ದೇವಾ ಪ್ರೀಯೇತಾಂ ಮಧ್ವವಾಧವಾ ॥ ೨ ॥

೨. ಅರ್ಥ : ಈ ಗದ್ಯಕ್ಕೆ ಸ್ವಲ್ಪ ವಿವರಣೆಯನ್ನು ವಿಷ್ಣುತೀರ್ಥನಾವ ನಾದ ನಾನು ನನ್ನ ಬುದ್ಧಿಶುದ್ಧಿಗಾಗಿಯೂ ವಾಕ್‌ಶುದ್ಧಿಗಾಗಿಯೂ ಬರೆದಿದ್ದೆ. ಈ ಅಲ್ಪ ಸೇವೆಯಿಂದ ಶ್ರೀಮದಾಚಾರ್ಯರೂ ಅವರ ಸ್ವಾಮಿಯಾದ ಶ್ರೀ ನಾರಾಯಣನೂ ಪ್ರೀತರಾಗಲಿ.

॥ಶ್ರೀಕೃಷ್ಣಾರ್ಪಣಮಸ್ತು॥